# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಏಪ್ರಿಲ್, ೨೦೧೯ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೮ ಸಂಚಿಕೆ: ೩

ಚಂದಾ ರೂ. ೧೫೦/- (ಮಾರ್ಚ್‌ನಿಂದ ಸೆಪ್ಟಂಬರ್‌ವರೆಗೆ) ರೂ. ೨೫೦/-(ಸಂಸ್ಥೆಗಳಿಗೆ) ಬೆಲೆ : ಬಿಡಿ ಪ್ರತಿ: ರೂ. ೨೫/- ಪುಟ: ೨೦



ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಲೋಕಸಭೆಗಾಗಿ ಮತ್ತೊಂದು ಮಹಾಚುನಾವಣೆ ಘೋಷಿತವಾಗಿದೆ. ಕಳೆದ ಐದು ವರ್ಷಗಳ ಮೋದಿ ನೇತೃತ್ವದ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳ ಸರ್ಕಾರ ರಾಷ್ಟ್ರದಲ್ಲಿ ಎಬ್ಬಿಸಿದಷ್ಟು ಚರ್ಚೆ ಮತ್ತು ಕೋಲಾಹಲಗಳನ್ನು ಇತ್ತೀಚಿನ ದಶಕಗಳ ಯಾವ ಸರ್ಕಾರವೂ ಎಬ್ಬಿಸಿರಲಾರದು. ಇದಕ್ಕೆ ಕಾರಣ ಮೋದಿ ನೇತೃತ್ವದ ಪಕ್ಷ ಮತ್ತು ಸರ್ಕಾರ ವಾಜಪೇಯಿ ನೇತೃವದ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳ ಸರ್ಕಾರವೂ ಸೇರಿದಂತೆ ಈವರೆಗಿನ ಸರ್ಕಾರಗಳಿಗಿಂತ ಬಹು ಭಿನ್ನವಾಗಿ ಕಾರ್ಯ ನಿರ್ವಹಿಸತೊಡಗಿದ್ದು. ಇದು ದೇಶ ಈವರೆಗೆ ಕಂಡ ಯಾವುದೇ ಕಾಂಗ್ರೆಸ್ಸೇತರ ಸರ್ಕಾರಗಳೊಂದಿಗೆ ಹೋಲಿಸಲಾಗದಷ್ಟು ಭಿನ್ನವಾದುದು. ಇದೊಂದು ರಾಷ್ಟ್ರದ ರಾಜಕೀಯ ಮಹಾಪಥವನ್ನೇ, ಸಂಕಥನವನ್ನೇ ಬೇರೊಂದು ದಿಕ್ಕಿನಲ್ಲಿ ನಿರ್ಮಿಸಬಯಸಿದ ಸರ್ಕಾರ. ಈ ಸಂಗತಿಯನ್ನು ಗಮನಿಸದೆ ಮತ್ತು ಅದರ ಒಳಿತು ಕೆಡುಕುಗಳನ್ನು ಪರಾಮರ್ಶಿಸದೆ. ಈ ಮೋದಿ ಸರ್ಕಾರದ ಲೋಕಾಡಳಿತದ ವಿವಿಧ ಸಾಧನೆ ಅಥವಾ ವೈಫಲ್ಯಗಳನ್ನು ಕುರಿತಷ್ಟೇ ಚರ್ಚೆ ಮಾಡಿ ಈ ಚುನಾವಣೆಯಲ್ಲಿನ ನಮ್ಮ ಆಯ್ಕೆಯನ್ನು ನಿಷ್ಕರ್ಷಿಸಲಾಗದು. ಅಂದರೆ ಇವು ಮುಖ್ಯವಲ್ಲ ಎಂದಲ್ಲ, ಇಂದಿನ ಸಂದರ್ಭದಲ್ಲಿ ಅದಕ್ಕಿಂತ ನಿರ್ಣಾಯಕವಾದ ಸಂಗತಿಯೊಂದಿದೆ.

ಮೊನ್ನೆ ಇಂಗ್ಲಿಷ್ ಸುದ್ದಿ ವಾಹಿನಿಯೊಂದರ ಚರ್ಚೆಯಲ್ಲಿ ಬಿಜೆಪಿಯ ವಕ್ತಾರರೊಬ್ಬರು ಕಾಂಗ್ರೆಸ್ ಬಗ್ಗೆ ಆಡಿದ ಮಾತು ಬಹಳ ಕುತೂಹಲಕಾರಿಯಾಗಿತ್ತು. ಅವರು ಚರ್ಚೆಯ ಬಿಸಿಯಲ್ಲಿ ಭವ್ಯ ಇತಿಹಾಸವುಳ್ಳ ಕಾಂಗ್ರೆಸ್ ಪಕ್ಷವನ್ನು ನೆಹರೂ ಕುಟುಂಬದ ರಾಜಕಾರಣ ಉಸಿರುಗಟ್ಟಿಸಿ ಕೊಲ್ಲುತ್ತಿದೆ ಎಂದಾಗ ನಾನು ದಂಗಾಗಿ ಹೋದೆ! ಕಾಂಗ್ರೆಸ್ ಒಂದು ಭವ್ಯ ಇತಿಹಾಸವುಳ್ಳ ಪಕ್ಷವೆಂದು ಬಿಜೆಪಿ ಮಾನ್ಯ ಮಾಡುತ್ತಿದೆ! ಇದು ಮೋದಿಯವರೊಂದಿಗೆ ಆರಂಭವಾದ ಬಿಜೆಪಿಯ ಹೊಸ ರಾಜಕೀಯ ನಿರೂಪಣೆಯ ನಿರ್ಣಾಯಕ ಹಂತ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳದಿದ್ದರೆ ಬಿಜೆಪಿಯ ಇತ್ತೀಚಿನ ಮಹತ್ವಾಕಾಂಕ್ಷೆಯ ಘೋಷಣೆಯಾದ 'ಕಾಂಗ್ರೆಸ್‌ಮುಕ್ತ ಭಾರತ'ದ ಅರ್ಥವನ್ನು ಅದರ ಪದಶಃ ಅರ್ಥದಾಚೆಗೆ ಅರಿಯಲಾರೆವು. ನಮ್ಮ ಸ್ವಾತಂತ್ರ್ಯ ಹೋರಾಟವನ್ನು ನಾವು ಏಕೆ ರಾಷ್ಟ್ರೀಯ ಹೋರಾಟವೆಂದು ಕರೆಯುತ್ತೇವೆಂದರೆ, ಅದು ಇಂದಿನ ಆಧುನಿಕ ಭಾರತವೆಂಬ ರಾಷ್ಟ್ರ ನಿರ್ಮಾಣಕ್ಕೆ ಕಾರಣವಾಯಿತು ಎಂದು. ಇದಕ್ಕೆ ಮೊದಲು ಇದ್ದುದು ವಿಭಿನ್ನ ರೂಪ ಮತ್ತು ಸ್ಥಿತಿಗಳ ಭಾರತ ದೇಶ. ಹಾಗಾಗಿ ಇಂದು ರಾಷ್ಟ್ರೀಯತೆಯ ತನ್ನದೇ ಹೊಸ ಸಂಕಥನ ಕಟ್ಟಹೊರಟಿರುವ ಮೋದಿಯವರ ಬಿಜೆಪಿಗೆ ಯಾವುದೇ ರಾಷ್ಟ್ರೀಯ ಹೋರಾಟದ ಇತಿಹಾಸವೇ ಇಲ್ಲದಿರುವ ಕಾರಣ ಕೇವಲ ಅನ್ಯ ಮತ ಮತ್ತು ಅನ್ಯ ರಾಷ್ಟ್ರ ದ್ವೇಷದ ಮೇಲೆ ನಿಂತಿರುವ ತನ್ನ ರಾಷ್ಟ್ರೀಯತೆಯ ಹೊಸ ಸಂಕಥನಕ್ಕೆ ಇತಿಹಾಸದ ಆಧಾರ ಒದಗಿಸಿಕೊಳ್ಳುವ ತುರ್ತು ಅಗತ್ಯ ಕಂಡುಬಂದಿದೆ. ಈಗ ಬರೀ ಡೌಲು ಮಾತುಗಾರಿಕೆ ಮತ್ತು ಬೀದಿ ಪುಂಡಾಟಿಕೆಯ ರೂಪಗಳಲ್ಲಿ ಮಾತ್ರ ಕ್ರಿಯಾಶೀಲವಾಗಿ ಅದರ ರಾಷ್ಟ್ರೀಯತೆಯು ಬಹುಸಂಖ್ಯಾತ ಜನತೆಯ ಅವಕೃಪೆಗೆ ಪಾತ್ರವಾಗತೊಡಗಿರುವ ಕಾರಣ ಒಂದು ಘನತೆ ಪಡೆಯಲು ಅದು ನಿಧಾನವಾಗಿ ಕಾಂಗ್ರೆಸ್ಸಿನ ರಾಷ್ಟ್ರೀಯ ಇತಿಹಾಸವನ್ನು ಬಹಳ ಜಾಣ ನಡೆಗಳ ಮೂಲಕ ತನ್ನದಾಗಿಸಿಕೊಳ್ಳಹೊರಟಿದೆ. ಅದು ಇದನ್ನು ಮಾಡಹೊರಟಿರುವುದು ಕಾಂಗ್ರೆಸ್‌ನ ಸೆಕ್ಯುಲರ್ ಸ್ವಭಾವವನ್ನು ಅದರ ಸ್ವಾತಂತ್ರ್ಯೋತ್ತರ ನಡೆಗಳನ್ನು ಸೂಕ್ಷ್ಮವಾಗಿ ಒರೆಗೆ ಹಚ್ಚಿ ಅದನ್ನು ಅನುಮಾನಾಸ್ಪದಗೊಳಿಸಿ ಅನುಮಾನಾಸ್ಪದವಲ್ಲದ್ದೆಂದು ತಾನು ದೃಢೀಕರಿಸಿದ ಅದರ ಭಾಗವನ್ನು ತನ್ನದನ್ನಾಗಿ ಮಾಡಿಕೊಳ್ಳುವ ರಾಜಕಾರಣದ ಮೂಲಕ. ಅಂದರೆ ಬಿಜೆಪಿಯ ಮಾನಸ ಪಿತೃವಾದ ಆರೆಸ್ಸೆಸ್‌ಗೆ ಸಾವರ್ಕರ್ ಪ್ರಣೀತ ಗಂಡು ಹಿಂದುತ್ವದಿಂದಷ್ಟೇ ಹೊಸ ರಾಷ್ಟ್ರೀಯತೆಯನ್ನು ಜನಸಮ್ಮತವಾಗಿ ಕಟ್ಟಲಾಗದೆಂದು ಮನವರಿಕೆಯಾಗಿ ಅಂತಿಮವಾಗಿ ಈ ಮಾರ್ಗ ಹಿಡಿದಂತಿದೆ

ಹಾಗೆ ನೋಡಿದರೆ ಕಾಂಗ್ರೆಸ್‌ನ್ನು ಸೆಕ್ಯುಲರ್ ತತ್ವದಿಂದ ಬೇರ್ಪಡಿಸಿ ಅದನ್ನು ಮತ್ತೆ ತಿಲಕರ 'ಕೇಸರಿ' ಕಾಂಗ್ರೆಸ್‌ನ್ನಾಗಿ ಮಾಡುವ ಪ್ರಯತ್ನ ನಿರಂತರವಾಗಿ ನಡೆಯುತ್ತಲೇ ಇದ್ದು ಅದು ಗೋಡ್ಸೆ ಗಾಂಧೀಜಿಯ ಪಾದಮುಟ್ಟಿ ಅವರನ್ನು ಕೊಲ್ಲುವ ಜಾಣ ನಡೆಯ ಮೂಲಕ ಒಂದು ಹಂತ ತಲುಪಿತ್ತು. ಆದರೆ ಅದು ಗಾಂಧಿ ಬಿತ್ತಿದ್ದ ಚಲನಶೀಲ ಹಿಂದೂ ಮೌಲ್ಯಗಳ ಪ್ರಭಾವದ ಕಾರಣ ಹೆಚ್ಚು ಮುಂದುವರೆಯಲಾಗಲಿಲ್ಲ. ಆದರೆ ಕಾಂಗ್ರೆಸ್ ತನ್ನ ಗಾಂಧಿ ವಾರಸುದಾರಿಕೆಯನ್ನು ನಿಧಾನವಾಗಿ ಕಳಚಿಕೊಳ್ಳುತ್ತಾ ಒಂದು ಸಮಯಸಾಧಕ ಪಕ್ಷವಾಗಿ ಅವನತಿಗೊಳ್ಳುತ್ತಾ ಹೋದಂತೆ ಹೆಚ್ಚುತ್ತಾ ಹೋದ ಕಾಂಗ್ರೆಸ್ಸಿನ ಮೇಲಿನ ಜನರ ಸಿಟ್ಟನ್ನು ವ್ಯವಸ್ಥಿತವಾಗಿ ಸಂಘಟಿಸಿಕೊಳ್ಳಲು ಸಾಧ್ಯವಾದದ್ದು ಆರೆಸ್ಸೆಸ್ ಮೂಲದ ಪಕ್ಷಕ್ಕೇ: ಮೊದಲು ಜನಸಂಘಕ್ಕೆ; ನಂತರ ಬಿಜೆಪಿಗೆ. ಕಾರಣ, ಅರವತ್ತರ ದಶಕದಷ್ಟು ಹಿಂದೆಯೇ ಲೋಹಿಯಾ ಕಾಂಗ್ರೆಸ್ ರಾಜಕಾರಣಕ್ಕೆ ಪರ್ಯಾಯವಾಗಿ ಪ್ರತಿಪಾದಿಸಿದ್ದ ಕಾಂಗ್ರೆಸ್ಸೇತರವಾದವೆಂಬುದು ಮುಂದೆ ಅದರ ಹಲವು ಪ್ರಯೋಗಗಳ ಮೂಲಕ ಗೊತ್ತಾದಂತೆ ನಿಜವಾಗಿ ಕಾಂಗ್ರೆಸ್ಸೇತರವಾಗಿರದೆ ಕಾಂಗ್ರೆಸ್‌ನ ವಿವಿಧ ಅವತಾರಗಳಾಗಿದ್ದವಷ್ಟೆ. ಏಕೆಂದರೆ ಜನಸಂಘದ ಹೊರತಾಗಿ, ಕಮ್ಯುನಿಸ್ಟರೂ ಸೇರಿದಂತೆ ಭಾರತದ ಹೆಚ್ಚೂ ಕಡಿಮೆ ಇಡೀ ರಾಜಕಾರಣ ಕಾಂಗ್ರೆಸ್ ಮೂಲದ್ದಾಗಿತ್ತು. ಕಾಂಗ್ರೆಸ್ ಒಂದು ವಸಾಹತುಶಾಹಿ ವಿರೋಧಿ ಆಂದೋಲನವಾಗಿ ಬೆಳೆಯಲು ಅಳವಡಿಸಿಕೊಂಡ ವಿಶಾಲ ತಳಹದಿಯ ತಾತ್ವಿಕತೆಯು ಒಂದು ರಾಜಕೀಯ ಪಕ್ಷವಾಗಿ ಪರಿವರ್ತಿತವಾದಾಗ ಅದು ಕ್ರಮೇಣ ಎದುರಿಸಬೇಕಾಗಿ ಬಂದ ಛಿದ್ರೀಕರಣ ಪ್ರಕ್ರಿಯೆಗೆ ಸಂಬಂಧಿಸಿದ ಸಂಗತಿ ಇದು. ಸ್ವಾತಂತ್ರ್ಯ ದೊರೆತ ಕೂಡಲೇ ಕಾಂಗ್ರೆಸ್‌ನ್ನು ವಿಸರ್ಜಿಸಿ ಎಂಬ ಗಾಂಧಿ ಸಲಹೆಯನ್ನು ಧಿಕ್ಕರಿಸಿ ಅದನ್ನೊಂದು ರಾಜಕೀಯ ಪಕ್ಷವಾಗಿ ಪರಿವರ್ತಿಸುವ ನಿರ್ಧಾರ ಯಾರದ್ದೇ ಆಗಿರಲಿ, ಅವರ ರಾಜಕೀಯ ಸಮಯಸಾಧಕತನದ ಫಲವೇ ಬಿಜೆಪಿಯ ಹೊಸ ರಾಷ್ಟ್ರೀಯತೆಯ ಸ್ಥಾಪನೆಯ ಇಂದಿನ ಆತಂಕಕಾರಿ;ಆದರೆ ಜನಪ್ರಿಯವಾಗುತ್ತಿರುವಂತೆ ತೋರುವ ಪ್ರಯೋಗ.

ಅದೇನೇ ಇರಲಿ-ಏಕೆಂದರೆ ಇತಿಹಾಸವನ್ನು ಶಪಿಸಿ ಪ್ರಯೋಜನವಿಲ್ಲ-ಈ ಪ್ರಯೋಗ ಈಗ ಕಾಂಗ್ರೆಸ್ಸನ್ನು ಸೆಕ್ಯುಲರಿಸಂನ ಮಾಲಿನ್ಯದಿಂದ ಶುದ್ಧೀಕರಿಸಿ ತನ್ನದನ್ನಾಗಿ ಮಾಡಿಕೊಳ್ಳುವ ನಿರ್ಣಾಯಕ ಹಂತ ಮದನಮೋಹನ ಮಾಳವೀಯ, ಗೋವಿಂದ ವಲ್ಲಭ ಪಂತರ ನಂತರ ಸರ್ದಾರ್ ವಲ್ಲಭ ಭಾಯಿ ಪಟೇಲರನ್ನು ತನ್ನವರನ್ನಾಗಿ ಮಾಡಿಕೊಂಡು ಈಗ 'ಕಾಂಗ್ರೆಸ್‌ಮುಕ್ತ ಭಾರತ' ಎಂಬ ಘೋಷಣೆಯ ಮೂಲಕ ಒಂದು ರಾಜಕೀಯ ಪರಂಪರೆಯನ್ನೇ ನುಂಗಹಾಕ ಹೊರಟಿರುವಲ್ಲಿಗೆ ತಲುಪಿದೆ. ಆದರೆ ನೆನಪಿರಲಿ: ಕಾಂಗ್ರೆಸ್ ಪರಂಪರೆ ಎಂದರೆ ಕಾಂಗ್ರೆಸ್ ಪಕ್ಷ ಮಾತ್ರವಲ್ಲ. ಅದೊಂದು ಎಲ್ಲ ತರಹದ ಜನರಿರುವ ದಾಯಾದಿಗಳ ದೊಡ್ಡ ಕುಟುಂಬ. ಅದು ನಮ್ಮ ಹಿರಿಯರು ಸಾಮೂಹಿಕ ಹೋರಾಟ ಮತ್ತು ತ್ಯಾಗಶೀಲತೆಯಿಂದ ಕಟ್ಟಿದ ಮೌಲ್ಯ ಪರಂಪರೆ ಕೂಡ. ಹಾಗಾಗಿ 'ಕಾಂಗ್ರೆಸ್ ಮುಕ್ತ ಭಾರತ'ದ ಅರ್ಥ ಇಷ್ಟೇ: ಅಂತಿಮವಾಗಿ ಬಿಜೆಪಿಗೆ ನಿಜವಾದ ಪರ್ಯಾಯವೇ ಇಲ್ಲದಂತಾಗುವುದು. ಇದೆಂತಹ ಭಯಂಕರ ಸ್ಥಿತಿ ಯೋಚಿಸಿ ನೋಡಿ. ಕಾಂಗ್ರೆಸ್ ಹಾಳಾಗಿ ಹೋಗಲಿ. ಆದರೆ ನಾವು ಜನ? ನಮ್ಮ ನಾಗರಿಕ ಹಕ್ಕುಗಳು? ಈ ಕಾರ್ಯಚರಣೆಯ ಭಾಗವಾಗಿ ಕಳೆದೈದು ವರ್ಷಗಳಲ್ಲಿ ವ್ಯವಸ್ಥಿತವಾಗಿ ನಡೆದಿರುವ ನ್ಯಾಯಾಂಗವೂ ಸೇರಿದಂತೆ ಪ್ರಜಾಸತ್ತೆಯ ಆಧಾರ ಸಂಸ್ಥೆಗಳಲ್ಲಿನ ರಾಜಕೀಯ ಹಸ್ತಕ್ಷೇಪ ಮತ್ತು ಅವುಗಳ ದುರ್ಬಲೀಕರಣದ ಪ್ರಯತ್ನಗಳು ಹಾಗೂ ತನ್ನ ಆರ್ಥಿಕ ನೀತಿಯ ಮೂಲಕ ಉಂಟು ಮಾಡಿರುವ

ಅನಾಹುತಗಳನ್ನು ಗಮನಿಸಬೇಕು. ಮುಖ್ಯವಾಗಿ ರೈತರ, ಸಣ್ಣ ವ್ಯಾಪಾರಿಗಳ ಸಂಕಟ, ಆಯ್ದ ಕಾರ್ಪೋರೇಟ್ ಸಂಸ್ಥೆಗಳ ಓಲೈಕೆ, ಮುಂದುವರೆದ ಪರಿಸರ ನಾಶ, ಬಡಜನರ ವಲಸೆ, ದಾಖಲೆ ಮಟ್ಟದ ನಿರುದ್ಯೋಗದ ಜೊತೆಯಲ್ಲೇ ಕೋಟ್ಯಾಧಿಪತಿಗಳ ಆಸ್ತಿ ಮತ್ತು ಸಂಖ್ಯೆಯ ಹೆಚ್ಚಳ, ದೇಶಭಕ್ತಿಯ ಹೆಸರಿನಲ್ಲಿ ಯುದ್ಧೋನ್ಮಾದ, ಪುಂಡಾಟಿಕೆ, ಗುಂಪು ಹತ್ಯೆ ಇತ್ಯಾದಿ. ಈ ಪ್ರಭುತ್ವದ ರಾಜ್ಯಪಾಲನೊಬ್ಬ ತನ್ನದೇ ಕೇಂದ್ರ ಸರ್ಕಾರ ಕಾಶ್ಮೀರದ ಪರಿಸ್ಥಿತಿಯನ್ನು ನಿಯಂತ್ರಿಸದಾದಾಗ, ಕಾಶ್ಮೀರಿಗಳನ್ನೂ, ಅವರ ಉತ್ಪನ್ನಗಳನ್ನೂ ಬಹಿಷ್ಕರಿಸಿ ಎಂದು ಸಾರ್ವಜನಿಕವಾಗಿ ಕರೆಕೊಟ್ಟೂ ಆ ಸ್ಥಾನದಲ್ಲಿ ಆರಾಮವಾಗಿ ಉಳಿಯಬಲ್ಲ ವ್ಯವಸ್ಥೆ ಇದು ಎಂದರೆ ಇದನ್ನು ಸ್ಥಿರ, ದಕ್ಷ ಆಡಳಿತ ಎಂದು ಕರೆಯಬಹುದೇ? ಇದರ ಬಗ್ಗೆ ಪುಟ್ಟ ಚರ್ಚೆ ಮುಂದಿನ ಪುಟಗಳಲ್ಲಿನ ಬರಹಗಳಲ್ಲಿದೆ. ನಾನು ಕೋರಿದ ಕೆಲವರು ಬರೆದಿದ್ದಾರೆ. ಮಿಕ್ಕವರು ಅವರವರದ್ದೇ ಕಾರಣಗಳಿಗಾಗಿ ಜಾಣ ಮೌನಕ್ಕೆ ಶರಣಾಗಿ ನನಗೆ ಆಶ್ಚರ್ಯ–ವಿಷಾದಗಳನ್ನುಂಟು ಮಾಡಿದ್ದಾರೆ ಎಂದಷ್ಟೇ ಸದ್ಯಕ್ಕೆ ಹೇಳಬಲ್ಲೆ.

ಇರಲಿ, ಇದೆಲ್ಲದರ ಕೇಂದ್ರದಲ್ಲಿರುವ ಸಮಸ್ಯೆ ಎಂದರೆ ಕಾಂಗ್ರೆಸ್‌ನ ದಾರಿಗೆಟ್ಟ ರಾಜಕಾರಣದ ಫಲವಾಗಿಯೇ ಭಾರತದಲ್ಲಿ ಇಂದು ಒಂದು ಬೇರಿಲ್ಲದ ಸಮೃದ್ಧ ಮಧ್ಯಮ ವರ್ಗವೊಂದು ಸೃಷ್ಟಿಯಾಗಿದ್ದು ಅದು ತನ್ನ ತಣಿಯದ ಹಸಿವಿನಲ್ಲಿ ಪರಂಪರೆ, ಪ್ರಜಾಪ್ರಭುತ್ವ, ನಾಗರಿಕ ಹಕ್ಕುಗಳ ಅರಿವನ್ನೇ ಕಳೆದುಕೊಂಡಂತಿದೆ. ಅದೇ ಇಂದು ಸಕಲ ಸಂವಹನ ಪರಿಕರಗಳೊಂದಿಗೆ ಸಜ್ಜಾಗಿದ್ದು ದೇಶದ ರಾಜಕೀಯ ಚರ್ಚೆಗಳ ದಿಕ್ಕನ್ನು ನಿರ್ಧರಿಸುತ್ತಿದೆ. ಅದಕ್ಕೆ ತನ್ನ ಹಿತಕ್ಕೆ ಧಕ್ಕೆಯಾಗದಂತಹ ಸ್ಥಿರತೆಯತ್ತಲಷ್ಟೇ ಗಮನ. ಮೋದಿ ಅದನ್ನು ಒದಗಿಸುತ್ತಾರೆಂದು ನಂಬಿರುವ ಅದು ಸ್ಥಿರತೆಗಾಗಿ ಮಿಕ್ಕೆಲವನ್ನೂ ತ್ಯಜಿಸಲು ತಯಾರಾದಂತಿದೆ.

ನಿಜ, ಕಾಂಗ್ರೆಸ್ ಪರಂಪರೆ–ತನ್ನೆಲ್ಲ ಸಕ್ರಮ ಮತ್ತು ಅಕ್ರಮ ಸಂತಾನಗಳೊಂದಿಗೆ–ಹಾಳಾಗಿದೆ. ಆದರೆ ಅದನ್ನು ಹಾಳಾಗಲು ಬಿಟ್ಟು ಮೋದಿ ನೇತೃತ್ವದ ಬಿಜೆಪಿಗೆ ಮಾನ್ಯತೆ ನೀಡುವುದರ ಅರ್ಥವೇನೆಂದು ನಾವಿಂದು ವ್ಯವಧಾನದಿಂದ ಯೋಚಿಸಬೇಕು. ಏಕೆಂದರೆ ಕಾಂಗ್ರೆಸ್ ಪರಂಪರೆ ಎಂದರೆ ಕಾಂಗ್ರೆಸ್ ಮಾತ್ರವಲ್ಲ. ಹಾಗೇ ಹಿಂದುತ್ವ ಎನ್ನುವುದು ಹಿಂದೂ ಧರ್ಮದ, ಪರಂಪರೆಯ ಚಲನಶೀಲತೆಯನ್ನು, ಜೀವಸತ್ವವನ್ನು–ಅಂದರೆ ಈ ದೇಶವನ್ನು ಇತಿಹಾಸದುದ್ದಕ್ಕೂ ಜತನದಿಂದ ಕಾಪಾಡಿರುವ ಸೆಕ್ಯುಲರಿಸಂನ್ನು–ನಿರ್ಮೂಲನೆ ಮಾಡಲು ಬದ್ಧವಾದ ಒಂದು ಸಮಗ್ರ ರಾಜಕೀಯ ಮೌಲ್ಯ ವ್ಯವಸ್ಥೆಯೂ ಹೌದು. ಹಾಗಾಗಿ ಅವಸರದಲ್ಲಿ ಏನೋ ಮಾಡಲು ಹೋಗಿ ಇನ್ನೇನೋ–ಶಾಶ್ವತ ಅನಾಹುತ–ಆಗಬಾರದು. ಇದು ಚಿಲ್ಲರೆ ವಿಷಯಗಳ ಬಗ್ಗೆ ಯೋಚಿಸುವ ಕಾಲವಲ್ಲ. ಈ ಎಚ್ಚರದೊಂದಿಗೆ ಈ ಚುನಾವಣೆಗಳಲ್ಲಿ ನಾವು ನಮ್ಮ ಮತಾಧಿಕಾರವನ್ನು ಚಲಾಯಿಸಬೇಕಿದೆ.

**–ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಕಳೆದ ೮ ವರ್ಷಗಳಿಂದ ಒಂದೂ ಸಂಚಿಕೆಯನ್ನು ಬಿಡದಂತೆ 'ಹೊಸಮನುಷ್ಯ' ಮಾಸಿಕವನ್ನು ಓದಿದ ಹೆಮ್ಮೆ ನನ್ನದು. ಪ್ರತಿಸಲವೂ ವಿಶೇಷವಾಗಿರುವುದು ಮತ್ತು ನನ್ನ ಮೆಚ್ಚಿಕೆಯ ಕಾಲಂ 'ಸಂಪಾದಕರ ಟಿಪ್ಪಣಿಗಳು'. ಸಮಕಾಲೀನ ವಿಷಯಗಳನ್ನು ಕೈಗೆತ್ತಿಕೊಂಡು, ಅದನ್ನು ವಿಶ್ಲೇಷಣೆಯ ಒರೆಗೆ ಹಚ್ಚಿ ಮೂಡಿ ಬರುವ ಟಿಪ್ಪಣಿಗಳು ನಮ್ಮ ಚಿಂತನೆಗೆ ಹೊಸ ಆಯಾಮವನ್ನು ಒದಗಿಸುತ್ತವೆ.

ಈ ಸಲದ ಮಹಿಳಾ ಸಂಚಿಕೆ ತುಂಬಾ ಇಷ್ಟವಾಯಿತು. "ನಮ್ಮ ವಿವಾಹ ಸಂಸ್ಥೆ ಮತ್ತು ಕುಟುಂಬ ವ್ಯವಸ್ಥೆ ಬಿಕ್ಕಟ್ಟಿಗೆ ಸಿಕ್ಕಿದೆಯೆ?" ಈ ಪ್ರಶ್ನೆಗೆ ಆಯ್ದ ಮಹಿಳೆಯರು ನೀಡಿದ ಉತ್ತರಗಳು ಪ್ರಸ್ತುತ ಸಂದರ್ಭದಲ್ಲಿ ಮದುವೆ ಮತ್ತು ಕುಟುಂಬ ವ್ಯವಸ್ಥೆ ಎದುರಿಸುತ್ತಿರುವ ಹಲವು ಸವಾಲುಗಳತ್ತ ಕ್ಷಕಿರಣ ಬೀರಿವೆ ಗಂಡು ಮತ್ತು ಹೆಣ್ಣು ಎಂಬ ಭೇದವಿಲ್ಲದೆ ಪ್ರತಿಯೊಬ್ಬರಿಗೂ ಅಗತ್ಯವಾದ 'Space' ಬದುಕಿನಲ್ಲಿ ಸಿಗಬೇಕು ಎನ್ನುವುದು ಇಲ್ಲಿ ಗಮನಿಸಬೇಕಾದ ಅಂಶ.

ಇನ್ನು ಅಧ್ಯಾಪಕಿಯೊಬ್ಬರ ಸೂಕ್ಷ್ಮ ಮನಸ್ಸಿನ ಒಳತೋಟಿಯನ್ನು ಹೇಳುವ 'ಯುವಲಹರಿ' ಕೂಡ ತುಂಬಾ ಇಷ್ಟವಾಯಿತು. 'ನವಿಲುಗರಿ'ಯ ನಾಲ್ಕೂ ಪದ್ಯಗಳು ಸಂತಸವನ್ನಿತ್ತವು. ಇನ್ನು 'ಧರ್ಮವಿಚಾರಪುಟ'ದ ವಚನಕಾರ್ತಿಯರ ವಚನಗಳು. ಅತ್ಯುತ್ತಮ. ಪುಸ್ತಕಾವಲೋಕನ ನನ್ನ ಇಷ್ಟದ ಅಂಕಣ. ಓದಿಗೆ ಮತ್ತು ಪುಸ್ತಕಗಳ ಆಯ್ಕೆಗೆ ಮಾರ್ಗದರ್ಶಿ. ಈ ಪತ್ರಿಕೆಯ ಹೊಸ ಮತ್ತು ನಿಜದ ಮನುಷ್ಯರಾಗುವ ಕುರಿತ ಕಳಕಳಿ ನನ್ನನ್ನು ಸದಾ ಎಚ್ಚರಿಸುತ್ತದೆ. ನಮ್ಮೊಳಗೆ ಇಂತಹ ಬದಲಾವಣೆಗಳು ನಿಧಾನವಾದಾಗ, ಅಸಾಧ್ಯವಾದಾಗ ಕಳವಳವನ್ನೂ ಮೂಡಿಸುತ್ತದೆ.

**–ಎಸ್.ಉಷಾಲತಾ,** ಮಂಗಳೂರು

ಮಹಿಳಾ ವಿಶೇಷ ಪುಟಗಳಲ್ಲಿ ಜಾಗತೀಕರಣದಿಂದ ವಿವಾಹ ಸಂಸ್ಥೆಯ ಮೇಲೆ ಉಂಟಾಗಿರುವ ಪರಿಣಾಮಗಳ ವಿಶ್ಲೇಷಣೆಯನ್ನು ಗಮನಿಸಿದೆ. ದಾಂಪತ್ಯದ ಅಡಿಪಾಯವೇ ಅಸಮಾನತೆ ಎಂದಿರುವ ವಿನಯಾ ಒಕ್ಕುಂದ ಮತ್ತು ಮಹಿಳೆ, ಪುರುಷನ ಅಡಿಯಾಳು ಎಂಬುದನ್ನು ವಿವಾಹ ಸ್ಥಿರೀಕರಿಸುತ್ತದೆ ಎನ್ನುವ ಶಾರದಾಗೋಪಾಲ್ ಅವರ ವಿಚಾರಗಳು ಈ ಸಮಸ್ಯೆಯ ಮೂಲಗಳನ್ನು ಸರಿಯಾಗಿ ಗುರುತಿಸಿದೆ ಎಂದೆನಿಸುತ್ತದೆ.

ಜಾಗತೀಕರಣ ಮತ್ತು ಆಧುನೀಕರಣದಿಂದ ಪುರುಷಶಾಹಿಯ ಮನಸ್ಸು ಉದಾರೀಕರಣಗೊಳ್ಳದೆ ಸಂಕುಚಿತಗೊಳ್ಳುತ್ತಿದೆ. ಈ ಹೊಸ ಪ್ರಕ್ರಿಯೆಗಳಿಂದ ಸ್ತ್ರೀಯರ ಪಾತ್ರಗಳು ಬದಲಾಗಿದೆ. ಆದರೆ ಈ ಬದಲಾವಣೆಯನ್ನು ಪುರುಷ ಮನಸು ಗ್ರಹಿಸಿಲ್ಲ; ಗ್ರಹಿಸಿದ್ದರೂ ಅದನ್ನು ಒಪ್ಪಿಕೊಂಡಿಲ್ಲ. ಎಲ್ಲ ವಲಯಗಳನ್ನು ಒತ್ತುವರಿ ಮಾಡುತ್ತಿರುವ ಅವಳನ್ನು ತನ್ನ ಎದುರಾಳಿ ಎಂದು ಗುರುತಿಸಿಕೊಳ್ಳುತ್ತಿದೆ. ಹಿಂಸೆ, ದೌರ್ಜನ್ಯ ಮಾಡುವ ಮನಸ್ಥಿತಿಯ ಹಿಂದೆ ಈ ಧೋರಣೆ ಸಕ್ರಿಯವಾಗಿರುತ್ತದೆ. ಕೆಟ್ಟಿರುವ ಸಾಫ್ಟ್‌ವೇರ್‌ಅನ್ನು ಸರಿಪಡಿಸಲು ಕಾನೂನು, ದಂಡನೆಗಳಿಂದ ಸಾಧ್ಯವಾಗುತ್ತಿಲ್ಲ. ಇಲ್ಲಿ ವಿವಾಹ, ಕಟುಂಬ, ದಾಂಪತ್ಯದ ಕುರಿತ ತಿಳಿವನ್ನು ಮುರಿದು ಕಟ್ಟಬೇಕಾಗಿದೆ. ಸಾಂಪ್ರದಾಯಿಕ ಪುರುಷಶಾಹಿಗೆ ಬದಲಾವಣೆಗಳನ್ನು ಮನಮುಟ್ಟಿಸಬೇಕಾಗಿದೆ. ಹೆಣ್ಣನ್ನು ಪರಿಭಾವಿಸುವ ಬಗೆಯಲ್ಲೇ ದೊಡ್ಡ ರೂಪಾಂತರವಾಗಬೇಕಾಗಿದೆ.ಇದಕ್ಕಾಗಿ ಎಲ್ಲರೂ ಕೈ ಜೋಡಿಸಬೇಕು.

**–ಕೆ.ವೆಂಕಟೇಶ, ದೊಡ್ಡಬಳ್ಳಾಪುರ**

ಮಾರ್ಚ್ ಸಂಚಿಕೆಯಲ್ಲಿನ ಸಮತಾ ಯುವರಾಜ್ ಅವರ 'ಅಪರಾಧಿ ನಾನಲ್ಲ...' ಕಥೆ ಮಹಿಳಾ ಸಂಚಿಕೆಯ ಅರ್ಥಪೂರ್ಣತೆಯನ್ನು ಹೆಚ್ಚಿಸುವ ದಿಟ್ಟ ಕಥೆ. ಸಬಿತಾ ಬನ್ನಾಡಿ ಅವರ 'ಮಲೆಗಳಲ್ಲಿ ಮದುಮಗಳು'ವಿನಲ್ಲಿನ ಗಂಡು ಹೆಣ್ಣಿ ಸಂಬಂಧಗಳನ್ನು ಕುರಿತ ಲೇಖನವೂ ಹೊಸ ಒಳನೋಟಗಳಿಂದ ಕೂಡಿದ್ದು ಕುವೆಂಪು ಅವರ ಮಹಾಪ್ರತಿಭೆಯ ದರ್ಶನ ಮಾಡಿಸುವಂತಿದೆ. ಹಾಗೇ ಎಚ್ಚೆಸ್ಸಾರ್ ಅವರು ಎಚ್.ಎಸ್.ಶ್ರೀಮತಿಯವರು ಅನುವಾದಿಸಿರುವ ಮಹಾಶ್ವೇತಾದೇವಿಯವರ ಕಥೆಗಳ ಬಗ್ಗೆ ಬರೆದಿರುವ ಲೇಖನ ಕುತೂಹಲ ಹುಟ್ಟಿಸುವಂತಿದೆ.

**–ಕೆ. ಲಕ್ಷ್ಮಿ,** ಹೊಸಪೇಟೆ

ಒಂದು ಸಂಚಿಕೆಯನ್ನು ಮಹಿಳಾ ವಿಷಯಗಳಿಗೆ ಮತ್ತು ಪ್ರಧಾನವಾಗಿ ಲೇಖಕಿಯರಿಗೇ ಮೀಸಲಿಟ್ಟಿರುವುದು ಹೊಸ ಮನುಷ್ಯ' ಸ್ತ್ರೀಯನ್ನು ಗೌರವಿಸುವ ಪರಿ ಎಂದು ಭಾವಿಸಿದ್ದೇನೆ.

ಇದಕ್ಕೂ ಮುಖ್ಯವಾದುದೆಂದರೆ ತಮ್ಮ ಸಂಪಾದಕೀಯ. ವರ್ತಮಾನದ ವಾಸ್ತವಿಕತೆಯನ್ನು ಪೂರ್ವಗ್ರಹ ಪೀಡಿತರಾಗದೇ, ಮುಕ್ತ ಮನಸ್ಸಿನಿಂದ ಲೇಖನಿ ಝಳಪಿಸಿದ್ದೀರಿ.ಸಂಪಾದಕೀಯದ ಕೊನೆಯ ಪ್ಯಾರಾಗ್ರಾಫ್ ನನ್ನೊಳಗಿನ 'ಸೆಕ್ಯುಲರಿಸ್ಟ' ಸಿಡಿದೇಳುವಂತೆ ಮಾಡಿತು. ಅಭಿನಂದನೆಗಳು.

**–ಶಿ.ಕಾ ಬಡಿಗೇರ,** ಭಾಗ್ಯನಗರ (ಕೊಪ್ಪಳ)

ಮಾರ್ಚ್ ಸಂಚಿಕೆ ಮಹಿಳಾ ಸಂಚಿಕೆಯಾಗಿ ಪ್ರಕಟಗೊಂಡಿರುವುದು ಮಹಿಳಾಪರ ಚಿಂತಕರಿಗೆ–ಹೋರಾಟಗಾರಿಗೆ ಖುಷಿ ನೀಡುತ್ತದೆ. ಮಹಾನ್ ಚಿಂತಕ ಲೋಹಿಯಾ ಜನ್ಮದಿನಾಚರಣೆಯ ಸಂದರ್ಭದಲ್ಲಿ ಪ್ರಕಟವಾಗಿರುವ ರಾಜಾರಾಂ ತೋಳ್ಪಾಡಿಯವರ ಲೇಖನ ನಿಜವಾಗಿಯೂ ವಿಚಾರಪ್ರಚೋದಕವಾಗಿದೆ.

**–ಎಂ.ಎಂ. ಪುರದನಗೌಡರ,** ಕಲಘಟಗಿ

ಚಾತಕ ಪಕ್ಷಿಯಂತೆ ಕಾಯುತ್ತಿದ್ದ ನನಗೆ ಮಾರ್ಚ್ ಸಂಚಿಕೆ ತಲುಪಿ ನಿಮ್ಮ ಸಂಪಾದಕೀಯ ಟಿಪ್ಪಣಿಗಳನ್ನು ಮೊದಲು ಓದಿ ಮುಗಿಸಿದೆ. ದೇವೇಗೌಡರು ಈಗ ರಾಹುಲ್ ಗಾಂಧಿಯವರ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಂಡು ತಮ್ಮ ಕುಟುಂಬ ರಾಜಕಾರಣವನ್ನು ಈಗ ಮೂರನೇ ತಲೆಮಾರಿಗೆ ವಿಸ್ತರಿಸಹೊರಟಿರುವುದನ್ನು ಕುರಿತ ನಿಮ್ಮ ಸಂಪಾದಕೀಯ ಅವರ ಮನಸ್ಸಿಗೆ ಹಿಡಿದಿರುವ ಕೈಗನ್ನಡಿಯಂತಿದೆ. ಮಿಕ್ಕಂತೆ 'ನವಿಲುಗರಿ'ಯ ಎಲ್ಲ ಕವಿತೆಗಳೂ ಮನಮುಟ್ಟಿದವು.

**–ಪ್ರೊ. ಎಚ್. ಸಿದ್ದೇಗೌಡ,** ಚನ್ನರಾಯಪಟ್ಟಣ

ಕಳೆದೆರಡು ಸಂಚಿಕೆಗಳಿಂದ ಹರಿದು ಬರುತ್ತಿರುವ ನಿಮ್ಮ 'ಮನುಷ್ಯನನ್ನು ಪ್ರಕೃತಿಯಿಂದ ಪ್ರತ್ಯೇಕಿಸುತ್ತಿರುವ ವಿಜ್ಞಾನ ಎಂಬ ಅಜ್ಞಾನ' ಲೇಖನ ತುಂಬ, ತುಂಬ ಪ್ರೌಢವಾದುದು. ಈ ವಿಚಾರಗಳ ಬಗ್ಗೆ ಇಷ್ಟು ಆಳವಾಗಿ ಯೋಚಿಸುವ, ಚಿಂತಿಸುವ ಶಕ್ತಿ, ಮನಸ್ಸು ಮತ್ತು ಆರೋಗ್ಯ ನಿಮ್ಮೊಡನೆ ಸದಾ ಕಾಲ ಇರಲಿ ಎಂದು ಹಾರೈಸುತ್ತೇನೆ.

**–ಕೆ.ಟಿ. ಮೋಹನ್,** ಬೆಂಗಳೂರು

ನಿಮ್ಮ ಪತ್ರಿಕೆಯ ಹೊಸ ಚಂದಾದಾರನಾದ ನಾನು ಕಳೆದೆರಡು ಸಂಚಿಕೆಗಳನ್ನು ಗಮನಿಸಿದಾಗ, ವಿಶೇಷವಾಗಿ ನಿಮ್ಮ ಸಂಪಾದಕೀಯ ಟಿಪ್ಪಣಿಗಳನ್ನು ಓದಿ ನಿಮ್ಮನ್ನು ಮುಖತಃ ನೋಡಿರದಿದ್ದರೂ ನಿಮ್ಮ ಬಗ್ಗೆ ವಿಶೇಷ ಅಭಿಮಾನ ಮೂಡಿತು. ವಿಭಿನ್ನ ಚಿಂತನಾ ಲಹರಿಯ ಮೂಲಕ ಪ್ರಬುದ್ಧ ಓದುಗರಿಗೆ ಹತ್ತಿರವಾಗಿದ್ದೀರಿ.

**–ಡಾ. ಎಚ್. ಎಸ್. ಮುದ್ದೇಗೌಡ,** ಮಂಡ್ಯ

ಯುವಲಹರಿ

# ಹಟ್ಟಿ ಎಂಬ ನನ್ನೂರಿನ ಆ ಮುಸಲ್ಮಾನ ಅಜ್ಜ

–ಡಾ. ನಾಗಭೂಷಣ ಪಟೇಲ್



**ಪ್ರ**ತಿ ಶುಕ್ರವಾರದ ಸಂಜೆ "ಅಲ್ಲಾ" ಎಂದು ಕೂಗುವ ಒಂದು ದೂಡ್ಡ ಧ್ವನಿ ನಾವು ರಾತ್ರಿ ಪಾಠ ಕ್ಕೆ ಹೋಗುವ ಮನೆಯುವರೆಗೂ ಕೇಳಿಸುತ್ತಿತ್ತು. ನಮಗೋ ಎಲ್ಲಿಲ್ಲದ ಸಂತೋಷ ಉಂಟಾಗುತ್ತಿತ್ತು. ಕಾರಣ ಅಲ್ಲಿ ಆ ಪ್ರಾರ್ಥನೆಯ ನಂತರ ಹಂಚಲಾಗುತ್ತಿದ್ದ ಫಲಾಹಾರ. ಬೆಲ್ಲದೊಂದಿಗೆ ಮೆದುವಾಗಿ ನೆನೆಸಿದ ಮಂಡಕ್ಕಿ ಯೊಟ್ಟಿಗೆ ಕಾಯಿ ತುರಿಯ ಮಿಶ್ರಣವಿರುತ್ತಿತ್ತು. ಆ ರುಚಿಯಾದ ಫಲಾಹಾರಕ್ಕೆ ನಾವೆಲ್ಲೆರೂ ಎದ್ದು ಬಿದ್ದು ಓಡುತ್ತಿದ್ದೆವು. ಅಲ್ಲಿ ಉದ್ದನೆಯ ನೀಳವಾಗಿ ಬೆಳೆದಿದ್ದ ಬಿಳಿ ಗಡ್ಡದ ಜತೆಗೆ ಗಡ್ಡದ ಮದ್ಯ ಅಲ್ಲಲ್ಲಿ ಸ್ವಲ್ಪ ಕಪ್ಪು ಕೂದಲು ಹೊಂದಿದ್ದ ೬೦ ವಯಸ್ಸು ಆಸುಪಾಸಿನ ದಢೂತಿ ದೇಹದ, ಅಜಾನುಬಾಹು ಮುಸಲ್ಮಾನ ಅಜ್ಜರೊಬ್ಬರು ಒಂದು ದೊಡ್ಡದಾದ ಹರಿವಾಣದಲ್ಲಿ ಆ ಮಿಶ್ರಣವನ್ನು ತುಂಬಿಕೊಂಡು ನಮ್ಮನ್ನ 'ಬರ್ರೋ ಮಕ್ಕಳಾ' ಅಂತ ಕೂಗಿ ಕರೆಯುತ್ತಿದ್ದರು. ಆ ಕರೆಯ ಧ್ವನಿಗಾಗಿ ನಾವೆಲ್ಲರು ಹಾತೊರೆಯುತ್ತಿದ್ದೆವು.

ನನ್ನದೊಂದು ಚಿಕ್ಕಗ್ರಾಮ. ಸುಮಾರು ೨೦೦ ಮನೆಗಳಿಂದ ತುಂಬಿದ ಊರು. ಅದನ್ನ ನಮ್ಮ ಭಾಷೆಯಲ್ಲಿ ಹಟ್ಟಿ ಎನ್ನುವುದುಂಟು. ಈ ಹಟ್ಟಿಯಲ್ಲಿ ಸರಿಸುಮಾರು ೧೦ಕ್ಕೂ ಹೆಚ್ಚು ಜಾತಿಯ ಜನರು ವಾಸಿಸುತ್ತಿದ್ದರು. ಅವುಗಳಲ್ಲಿ ಒಂದು ಮುಸಲ್ಮಾನರ ಮನೆಯೂ ಇತ್ತು. ಆ ಗಟ್ಟಿಯಾದ ಕೂಗಿಗೆ ಎಲ್ಲಾ ಜಾತಿಯ ಮಕ್ಕಳು ಓಡೋಡಿ ಬರುತ್ತಿದ್ದರು . ಊರಿನ ಮಕ್ಕಳೆಲ್ಲರೂ ಶುಕ್ರವಾರ ಬರುವುದನ್ನೇ ಎದುರು ನೋಡುತ್ತಿದ್ದುಂಟು. ಒಮ್ಮೊಮ್ಮೆ ಆ ಮುಸಲ್ಮಾನ ಅಜ್ಜ ತನ್ನ ಮನೆಯ ಮುಂದಿನ ವಿಶಾಲವಾದ ಅಂಗಳದಲ್ಲಿಯೇ ಪ್ರಾರ್ಥನೆ ಮಾಡುತ್ತಿದ್ದುದುಂಟು. ಮಕ್ಕಳಾದ ನಾವು ದೂರದಿಂದಲೇ ಪಿಳಿ ಪಿಳಿ ಅಂತ ತದೇಕ ಚಿತ್ತದಿಂದ ಆ ಅಜ್ಜನ ಪ್ರಾರ್ಥನೆಯನ್ನು ನೋಡು ತ್ತಿದ್ದೆವು.. ಅಂಗಳದಲ್ಲಿ ವಿಶಾಲವಾದ ದಪ್ಪನೆಯ ಜಮಖಾನ ಹಾಸಿ ಅದರ ಮೇಲೆ ತೆಳುವಾದ ಮತ್ತೊಂದು ವಸ್ತ್ರವನ್ನು ಹಾಸಿ ಅದರ ಮಧ್ಯೆದಲ್ಲಿ ಮೊಣಕಾಲನ್ನು ಹಿಂದಕ್ಕೆ ಮಡಚಿ ಕುಂತು ತನ್ನೆರೆಡು ಕೈಗಳನ್ನ ಮೇಲಕ್ಕೆತ್ತಿ ಅಂಗೈಗಳು ತನ್ನ ಮುಖಕ್ಕೆ ಅಭಿಮುಖವಾಗಿ ಜೋಡಿಸಿಕೊಂಡು ಏನೇನೋ ಪಠಿಸುತ್ತಿದ್ದರು. ನಮಗೆ ಅವರು ಹೇಳುತ್ತಿದ್ದ 'ಅಲ್ಲಾಹು ಅಕ್ಬರ್' ಅನ್ನೋ ಅನ್ನೋ ಎರೆಡು ಪದಗಳನ್ನು ಬಿಟ್ಟರೆ ಬೇರೆ ಏನೂ ಅರ್ಥವಾಗುತ್ತಿರಲಿಲ್ಲ. ಕಾರಣ ಈ ಊರಲ್ಲಿ ಬಹುಪಾಲು ಕನ್ನಡ ತೆಲುಗು ಮಿಶ್ರಿತ ಭಾಷೆಯನ್ನ ಆಡುವವರ ಸಂಖ್ಯೆಯೇ ಹೆಚ್ಚಿತ್ತು. ಶುದ್ಧ ಕನ್ನಡ ಅಥವಾ ಶುದ್ಧ ತೆಲುಗು ಮಾತಾಡುವವರ ಸಂಖ್ಯೆಯೇ ಅಪರೂಪ. ಸ್ವತಃ ಯಾರಾದರೂ ಶುದ್ಧ ಕನ್ನಡ ಮಾತಾಡಿದರೆ ಅದು ಅವರಿಗೆ ಆ ಮುಸ್ಲಿಂ ಅಜ್ಜನಉರ್ದುವಿನಂತೆ ಕೇಳಿಸುತ್ತಿತ್ತು!.

ನನ್ನ ತಾತ ಊರಿನಲ್ಲಿ ಶಾನುಭೋಗರಾಗಿ ಕೆಲಸ ಮಾಡುತ್ತಾ ಆ ಊರಿನ ಜನಗಳ ಏಳ್ಗೆಗೆ ಶ್ರಮಿಸುತ್ತಿದ್ದರು. ಬಹುಮುಖ್ಯವಾಗಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ತುಂಬಾ ಶ್ರಮ ಪಟ್ಟಿದ್ದು ಇದೆ. ಸ್ವತಃ ತಾನೇ ಮನೆ ಮನೆಗೂ ಹೋಗಿ ಮಕ್ಕಳನ್ನು ಕರೆದು ತಂದು ಶಾಲೆಯೊಳಗೆ ಬಿಟ್ಟು ಬರುತ್ತಿದ್ದರು. ಒಮ್ಮೊಮ್ಮೆ ಶಾಲಾ ಶಿಕ್ಷಕರು ರಜೆ ಯಲ್ಲಿದ್ದಾಗ ಅವರೇ ಪಾಠ ಪ್ರವಚನ ನೀಡಿ ಮಕ್ಕಳಿಗೆ ಕಲಿಸಿಕೊಡುತ್ತಿದ್ದರು. ರಜೆಗೆಂದೂ ಹೋದ ಮಕ್ಕಳು ಮತ್ತೆ ಪುನಃ ಶಾಲೆಗೆ ಕರೆತರುವುದಕ್ಕೆ ದೊಡ್ಡ ಹರಸಾಹಸವನ್ನೇ ಮಾಡ ಬೇಕಿತ್ತು. ಇದನ್ನ ಅರಿತಿದ್ದ ನನ್ನ ತಾತ ಮಕ್ಕಳಿಗೆ ರಜೆ ಕೊಡದ ಹಾಗೆ ನೋಡಿಕೊಳ್ಳುತ್ತಿದ್ದರು. ಮಕ್ಕಳಿಗೆ ನನ್ನ ತಾತನ ಮಾತುಗಳು ಕೂಡ ಉರ್ದುವಿನಂತೆ ಕೇಳಿಸುತ್ತಿತ್ತು!. ಆ ಹುಡುಗರ ನಾಲಗೆಯನ್ನ ತಿದ್ದುವುದು ಅದರಿಂದ ಕನ್ನಡ ಪದಗಳು ಹೊರಳುವಂತೆ ಮಾಡುವುದು ದುಸ್ಸಾಹಸವೇ ಆಗಿರುತ್ತಿತ್ತು.

ಅದೇನೇ ಇದ್ದರೂ, ನನಗೆ ಮಾತ್ರ ಪ್ರತಿ ಶುಕ್ರವಾರ ತನ್ನ ಪ್ರಾರ್ಥನೆ ನಂತರ ಫಲಾಹಾರ ಹಂಚುತ್ತಿದ್ದ ಆ ಮುಸಲ್ಮಾನ ಅಜ್ಜನ ಬೆಗೆಗೇ ಈಗಲೂ ನನ್ನಜ್ಜನಿಗಿಂತ ಹೆಚ್ಚು ಪ್ರೀತಿ. ಅದಕ್ಕೆ ಕಾರಣ ಆ ಅಜ್ಕ ನಮ್ಮೂರಿನ ಸಾಂಸ್ಕೃತಿಕ ಯಜಮಾನನರಂತೆ ಇದ್ದುದು ಇರಬಹುದು. ಆ ಅಜ್ಜ ನಮ್ಮ ಊರಿನಲ್ಲಿ ಒಂದು ಚಿಕ್ಕ ದಿನಸಿ ಅಂಗಡಿಯನ್ನು ಇಟ್ಟುಕೊಂಡಿದ್ದರು. ಅವರಿಗೆ ದುಂಡನೆಯ ದೇಹದ ಮುದ್ದಾದ ಹೆಂಡತಿ ಇದ್ದರು. ಇದ್ದುದ್ದರ ಒಳಗೆ ಅವರ ಮನೆಯೇ ಸ್ವಲ್ಪ ಸ್ಥಿತಿವಂತ ಮನೆಯೆನಿಸುತ್ತಿತ್ತು. ಆಗಾಗ ಅವರ ಮನೆಗೆ ಬರುತ್ತಿದ್ದ ಅವರ ನೆಂಟರಿಷ್ಟರು ಮತ್ತು ಅವರ ವೇಷ ಭೂಷಣಗಳು ಹುಡುಗರಾದ ನಮ್ಮನ್ನು ಅತಿ ಹೆಚ್ಚು ಆಕರ್ಷಿಸುತ್ತಿದ್ದವು. ಪ್ರತಿ ಸೋಮವಾರದಂದು ಪಕ್ಕದ ಪಟ್ಟಣಕ್ಕೆ ಸಂತೆಗೆಂದು ಎತ್ತಿನ ಗಾಡಿಯಲ್ಲಿ ಈ ದಂಪತಿಗಳು ಹೋಗಿ ಬರುತ್ತಿದ್ದರು. ಎತ್ತಿನ ಗಾಡಿ ನಮ್ಮೂರಿನ ಜಂಬಣ್ಣ ಎನ್ನುವ ಗೊಲ್ಲ ಜಾತಿಗೆ ಸೇರಿದ್ದು, ಅವರು ಪ್ರತಿ ಸೋಮವಾರ ತಪ್ಪದೇ ಈ ದಂಪತಿಗಳನ್ನು ಸಂತೆಗೆ ಕರೆದುಕೊಂಡು ಹೋಗಿ ಅಂಗಡಿಗೆ ಬೇಕಾದ ದಿನಸಿಗಳನ್ನು ಕೊಂಡು ಬರುತ್ತಿದ್ದರು. ಗಾಡಿಯ ತುಂಬಾ ಅಂಗಡಿಯ ಸರಕು ಸಾಮಾನುಗಳೇ ಹೆಚ್ಚು ತುಂಬಿರುತ್ತಿದ್ದವು. ಗಾಡಿಯೂ ದಾರಿಯಲ್ಲಿ ಬರುವಾಗ ತೇರಿನಂತೆ ಕಾಣುತ್ತಿತ್ತು. ಗಾಡಿ ಹೊಡೆಯುವ ಜಂಬಣ್ಣನ ಕುಟುಂಬಕ್ಕೆ ಈ ದಂಪತಿಗಳೇ ಆಸರೆ ಯಾಗಿದ್ದರು. ಅವರ ಕಷ್ಟಸುಖಗಳಿಗೆ ಸ್ಪಂಧಿಸುತ್ತಾ ಅವರ ಇಬ್ಬರ ಮಕ್ಕಳ ಮದುವೆಗೂ ಸಹಾಯ ಮಾಡಿದ್ದುಂಟು.

ಇನ್ನು ಊರಿನಲ್ಲಿ ಯಾರಾದರು ಕೋಳಿಗಳನ್ನು ಕೊಯ್ದು ಅದರ ಅಡುಗೆ ಮಾಡಿಸಿ ಬಂದ ನೆಂಟರಿಷ್ಟರಿಗೆ ಉಣಬಡಿಸಬೇಕಾದರೆ ಈ ಮುಸಲ್ಮಾನ ಅಜ್ಜನೇ ಬಂದು ಅದರ ಹಲಾಲ್ ಮಾಡಿಕೊಡಬೇಕಿತ್ತು! ಕೋಳಿಯನ್ನು ತಂದವನಿಗೆ ಈ ಅಜ್ಜ ಬಹಳ ಎಚ್ಚರಿಕೆಯಿಂದ ಕೋಳಿಯ ತಲೆಯನ್ನು ಒಂದು ಕೈಯಿಂದ ಅದರ ದೇಹವನ್ನು ಮತ್ತೊಂದು ಕೈಯಿಂದ ಬಿಗಿಯಾಗಿ ಹಿಡಿದುಕೊಳ್ಳಲು ಹೇಳುತ್ತಿದ್ದರು. ಸ್ವಲ್ಪ ಸಡಿಲವಾಗಿ ಏನಾದರೂ ಹಿಡಿದುಕೊಂಡರೆ ಅಲ್ಲಿಯೇ ಅವನ ಬೆನ್ನಿಗೆ ಗುದ್ದಿಬಿಡುತ್ತಿದ್ದರು. ಅಥವಾ ಮುಸಲ್ಮಾನ ಭಾಷೆಯಲ್ಲಿ ಅದೇನೇನೋ ಬಯ್ದು ಬಿಡುತ್ತಿದ್ದರು. ಗುದ್ದಿಸಿಕೊಳ್ಳುವುದಕ್ಕಿಂತ ಅವರ ಭಾಷೆಯ ಬಯ್ಗುಳಗಳಿಗೆ ಹೆದರಿಯೇ ಕೋಳಿಯನ್ನ ಬಿಗಿಯಾಗಿ ಹಿಡಿದುಕೂಂಡು ಸಾವಧಾನದಿಂದ ಅಜ್ಜನ ಅಭಿಮುಖವಾಗಿ ಕೂರುತ್ತಿದ್ದರು. ಕೋಳಿ ತಂದವನಿಗೆ ಹಲಾಲ್ ಮುಗಿಯುವವರೆಗೆ ಕೋಳಿಯಷ್ಟೇ ಭಯ ಭೀತಿ ಇರುತ್ತಿತ್ತು! ಅದನ್ನ ನಾವು ಗಮನಿಸುತ್ತಿದ್ದೆವು. ಕಾರಣ ಆ ಅಜ್ಜನ ಬಯ್ಗುಳದ ಭಯ ಅಂಥದಿತ್ತು!.

ಇದರ ಜೊತೆಗೇ ಮೊಹರಂ ಹಬ್ಬದ ಸಂದರ್ಭಗಳಲ್ಲಂತೋ ಅಜ್ಜನ ಠೀಕು–ಠಾಕು ವೇಷಭೂಷಣಗಳು, ದೇವರುಗಳ ಪಕ್ಕದಲ್ಲಿಯೇ ನಿಂತು ಧೂಪವನ್ನ ತನ್ನ ಎರೆಡು ಕೈ ಗಳಿಂದ ಹರಡುತ್ತಿದ್ದುದೂ, ಜೊತೆಗೆ ತನ್ನ ಸಹಾಯಕ್ಕಾಗಿ ನೇಮಿಸಿಕೊಂಡಿರುತ್ತಿದ್ದ ಮಡಿವಾಳಿ ತಿಪ್ಪಯ್ಯನೂ ಸಹ ತನ್ನೊಂದಿಗೆ ಇದ್ದು ಧೂಪಕ್ಕೆ ಏನೇನೋ ಸಾಮಗ್ರಿಗಳನ್ನು ಬೆರೆಸುತ್ತಾ ದೇವರುಗಳು ಕೂರಿಸುತ್ತಿದ್ದ ಪಡಸಾಲೆಯನ್ನು ಘಮ ಘಮಿಸುವಂತೆ ಮಾಡುತ್ತಿದ್ದುದೂ ನನ್ನ ನೆನಪಲ್ಲಿ ಹಸಿರಾಗಿಯೇ ಇದೆ . ಹಳ್ಳಿಯ ಮಕ್ಕಳು ನಸುಕಿನಲ್ಲಿ ಎದ್ದು ತಣ್ಣೀರಿನಲ್ಲಿ ಸ್ನಾನ ಮಾಡಿ ಬಂದು ಬರಿ ಮಯ್ಯಲ್ಲಿಯೇ ಆ ದೇವರುಗಳನ್ನ ತಮ್ಮ ಕಯ್ಯಲ್ಲಿ ಹಿಡಿದು ಸಾಲಾಗಿ ನಿಲ್ಲುತ್ತಿದ್ದರು. ನಂತರ ಮಹಿಳೆಯರು ಅವರ ಬೆತ್ತನೆಯ ಕಾಲುಗಳಿಗೆ ತುಂಬಿದ ಕೊಡಗಳಿಂದ ನೀರು ಎರೆದು ನಮಸ್ಕರಿಸುತ್ತಿದ್ದರು. ಮಕ್ಕಳೆಲ್ಲ ಅಜ್ಜ ಹೇಳಿಕೊಟ್ಟ ಎರಡು ಉರ್ದು ಮಂತ್ರಗಳನ್ನ ಹೇಳುತ್ತಾ ಹೊರಗೆ ದೊಡ್ಡ ಕುಣಿಯೊಳಗೆ ಇರುವ ಕೆಂಡವನ್ನು ತುಳಿಯುತ್ತಾ ಹಾದು ಹೋಗಿ, ನಂತರ ಊರಿನ ಬೀದಿಗಳಲ್ಲಿ ಬರುತ್ತಿದ್ದರು. ಬರುವಾಗ ಜನರು ಮಂಡಕ್ಕಿ ಬೆಲ್ಲವನ್ನು ಅರ್ಪಿಸುತ್ತಾ ಕೈ ಮುಗಿಯುತ್ತಿದ್ದರು. ಹೀಗೆ ಹಬ್ಬವನ್ನ ಊರಿನ ಎಲ್ಲಾ ಜನರು ಭಾಗವಹಿಸಿ ಸಂಭ್ರಮದಿಂದ ಆಚರಿಸುತ್ತಿದ್ದರು ಅಲ್ಲಿ ಯಾವುದೇ ಜಾತಿ–ಧರ್ಮ ಮತ–ಪಂಥಗಳ ವಾಸನೆ ಇರುತ್ತಿರಲಿಲ್ಲ.

ಒಂದು ದಿನ ಆ ಮುಸಲ್ಮಾನ ಅಜ್ಜ ಸತ್ತು ಹೋದರು. ಇಡೀ ಹಳ್ಳಿ ಹಳ್ಳಿಯೇ ವಾರಗಟ್ಟಲೆ, ತಿಂಗಳುಗಟ್ಟಲೆ ಅಜ್ಜನ ನೆನಪು ಮಾಡಿಕೊಳ್ಳುತ್ತ ಪರಿತಪಿಸುತ್ತಾ ದುಃಖಿಸಿದ್ದು ನನಗೆ ಚೆನ್ನಾಗಿ ನೆನಪಿದೆ. ಅಂದಿನಿಂದ ನನ್ನೂರ ಸವಿ ಕಡಿಮೆಯಾದಂತೆ ನನಗನ್ನಿಸಿತು. ಊರಲ್ಲಿ ಏನೋ ಒಂದು ಬಹುಮುಖ್ಯವಾದದ್ದು 'ಮಿಸ್' ಆಗಿದೆ ಎಂದು ಅನಿಸತೊಡಗಿದ್ದು ಈಗಲೂ ಮುಂದುವರೆದಿದೆ ಎಂದರೆ ನನ್ನೂರ ಈ ಕಾಲದ ಹುಡುಗರು ನಂಬುವುದಿಲ್ಲ. ಇದೇ ಇಂದಿನ ದೊಡ್ಡ ಸಮಸ್ಯೆಯೊಂದರ ಮೂಲ ಇರಬಹುದು.



**(ಮೂಲತಃ ಚಿತ್ರದುರ್ಗದ ಬಳಿಯ ನಾಯಕನಹಟ್ಟಿಯವರಾದ ನಾಗಭೂಷಣ ಪಟೇಲ್ ಈಗ ಅಮೆರಿಕಾದ ಬೋಸ್ಟನ್ ನಗರದ ಮೆಸ್ಸಾಚುಸ್ಸೆಟ್ಸ್ ವಿಶ್ವವಿದ್ಯಾನಿಲಯದಲ್ಲಿ ಭೌತವಿಜ್ಞಾನಿಯಾಗಿ ಸಂಶೋಧನೆ ನಡೆಸುತ್ತಿದ್ದಾರೆ.)**

ಏಪ್ರಿಲ್ ೧೪ : ಅಂಬೇಡ್ಕರ್ ಜನ್ಮದಿನ

# ಅಂಬೇಡ್ಕರ್ ಅವರ ಸಮಾಜವಾದ : ಕೆಲವು ಆಲೋಚನೆಗಳು

-ಡಾ. ಆನಂದ ತೇಲ್ತುಂಬ್ಡೆ

**ಬುದ್ಧ ಮತ್ತು ಮಾರ್ಕ್ಸ್‌ರಿಬ್ಬರಿಂದಲೂ ಸ್ಫೂರ್ತಿ ಪಡೆದಿದ್ದ ಅಂಬೇಡ್ಕರ್ ಅವರು ಪ್ರತಿಪಾದಿಸಿದ ಸಮಾಜವಾದವು ಹಲವು ಕಾರಣಗಳಿಂದಾಗಿ ಹೇಗೆ ಅಂತಿಮವಾಗಿ ಅಸ್ಪಷ್ಟವಾಗಿ ಉಳಿಯಬೇಕಾಯಿತು ಎಂಬುದನ್ನು ತಮ್ಮ ಈ ಲೇಖನದಲ್ಲಿ ತೇಲ್ತುಂಬ್ಡೆ ಅವರು ವಿವರಿಸಿದ್ದಾರೆ**



**ಬಾ**ಬಾಸಾಹೇಬ್ ಅಂಬೇಡ್ಕರ್ ಅವರು ಭಾರತೀಯ ಸಮಾಜವನ್ನು ರಾಚನಿಕವಾಗಿ ಅಸಮಾನತೆಯಿಂದ ಕೂಡಿದ್ದು ಎಂದು ಪರಿಗಣಿಸುತ್ತಿದ್ದರು ಏಕೆಂದರೆ ಇಲ್ಲಿ ಒಂದು ನಿರ್ದಿಷ್ಟ ಜಾತಿಯಲ್ಲಿ ಹುಟ್ಟಿದ ಮನುಷ್ಯನಿಗೆ ಏನು ದೊರಕಬೇಕು ಎಂಬುದನ್ನು ನಿರ್ಧರಿಸುವುದು ಜಾತಿವ್ಯವಸ್ಥೆ. ಸಹಜವಾಗಿಯೇ ಆಸ್ತಿಸಮಾನತೆಯನ್ನು ತರುವ ವ್ಯವಸ್ಥೆ ಎಂಬ ಕಾರಣಕ್ಕೆ ಸಮಾಜವಾದದ ಕಡೆಗೆ ಅವರಿಗೆ ಆಕರ್ಷಣೆಯಿತ್ತು. ರಷ್ಯದ ಬೋಲ್ಷೆವಿಕ್ ಕ್ರಾಂತಿಯು ಸಮಾಜವಾದಿ ಭವಿಷ್ಯದ ಕಡೆಗಿನ ಪ್ರಜ್ಞಾಪೂರ್ವಕವಾದ ಪ್ರಥಮ ಪ್ರಯತ್ನ ಎಂಬ ಕಾರಣಕ್ಕೆ ಅವರು ಅದನ್ನು ಸ್ವಾಗತಿಸಿದ್ದರು. ಅದರೆ ಭಾರತದಲ್ಲಿ ಇಂತಹ ಉದಾಹರಣೆಯನ್ನು ಅನುಸರಿಸುವುದು ಬಂಡಿಯನ್ನು ಕುದುರೆಯ ಮುಂದಕ್ಕೆ ಕಟ್ಟಿದಂತೆ ಎಂದು ಅವರಿಗೆ ಅನಿಸುತ್ತಿತ್ತು.

ಜಾತಿ ವ್ಯವಸ್ಥೆಯನ್ನು ನಾಶಮಾಡದೆ ಭಾರತದಲ್ಲಿ ಸಮಾಜವಾದಿ ಕ್ರಾಂತಿಯನ್ನು ಉಂಟುಮಾಡುವುದು ಸಾಧ್ಯವಿಲ್ಲ ಎಂಬುದು ಅವರ ನಂಬಿಕೆಯಾಗಿತ್ತು. ಈ ದೃಷ್ಟಿಕೋನದಿಂದ ಅವರು ಮೊದಲಿಗೆ ಸಾಮಾಜಿಕ ಬದಲಾವಣೆಯನ್ನು ತರದೆ ಆರ್ಥಿಕ ಸುಧಾರಣೆಗಳನ್ನು ತರುವುದು ಸಾಧ್ಯವೆ? ಎಂದು ಸಮಾಜವಾದಿಗಳನ್ನು ಪ್ರಶ್ನಿಸುತ್ತಿದ್ದರು. ಸಮಾಜವಾದದ ಬಗ್ಗೆ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸುತ್ತಾ ಅವರು 'ಭಾರತದಲ್ಲಿ ಒಂದು ವರ್ಗವು ಇನ್ನೊಂದು ವರ್ಗವನ್ನು ಅಸಭ್ಯವಾಗಿ ನಡೆಸಿಕೊಳ್ಳುವುದು, ಮತ್ತು ದಮನಿಸುವುದು ಮುಂದುವರಿಯುವವರೆಗೆ ಒಂದು ಮುಕ್ತ ಸಮಾಜವನ್ನು ನಿರ್ಮಿಸುವುದು ನಮಗೆ ಸಾಧ್ಯವಾಗಬಹುದೆಂದು ನನಗೆ ಅನ್ನಿಸುತ್ತಿಲ್ಲ, ಸಮಾಜವಾದೀ ಆದರ್ಶದಲ್ಲಿ ನಂಬಿಕೆಯಿರುವ ನಾನು ವಿವಿಧ ಗುಂಪುಗಳನ್ನು ಮತ್ತು ವರ್ಗಗಳನ್ನು ಸಮಾನವಾಗಿ ನಡೆಸಿಕೊಳ್ಳಬೇಕೆಂದು ನಂಬುತ್ತೇನೆ. ಈ ಸಮಸ್ಯೆಗೆ, ಹಾಗೆಯೇ ಇತರೆ ಸಮಸ್ಯೆಗಳಿಗೂ ಕೂಡ ನಿಜವಾದ ಪರಿಹಾರವನ್ನು ಹೊಂದಿರುವುದು ಸಮಾಜವಾದ ಮಾತ್ರ ಎಂದು ಭಾವಿಸುತ್ತೇನೆ' ಎನ್ನುತ್ತಿದ್ದರು. ಸಮಾಜವಾದಿಗಳು ಸಮಾಜವಾದವನ್ನು ಅರ್ಥಮಾಡಿಕೊಂಡಿರುವ ರೀತಿಯನ್ನೂ ಪ್ರಶ್ನಿಸುತ್ತಿದ್ದರು.

ಸಮಾಜವಾದವೆಂಬುದು ಕೇವಲ ಒಂದು ದೂರದ ಆದರ್ಶವಾಗದೆ ಅದೊಂದು ಪ್ರಾಯೋಗಿಕ ಕಾರ್ಯಕ್ರಮವಾದಾಗ ಸಮಾಜವಾದಿಯೊಬ್ಬ ಸಮಾನತೆಯಲ್ಲಿ ನಂಬಿಕೆ ಹೊಂದಿದ್ದಾನೆಯೇ ಎಂಬ ಪ್ರಶ್ನೆ ಮುಖ್ಯವಾಗುವುದಿಲ್ಲ, ಒಂದು ವರ್ಗವು ಇನ್ನೊಂದು ವರ್ಗವನ್ನು ಕೆಟ್ಟದಾಗಿ ನಡೆಸಿಕೊಳ್ಳುವುದನ್ನು ಒಂದು ವ್ಯವಸ್ಥೆಯಾಗಿ, ಒಂದು ತತ್ವವಾಗಿ ಲಕ್ಷಿಸುತ್ತಾನೋ ಮತ್ತು ಈ ರೀತಿಯಲ್ಲಿ ಪೀಡನೆ ಮತ್ತು ದಮನಗಳು ಒಂದು ವರ್ಗವನ್ನು ಇನ್ನೊಂದು ವರ್ಗದಿಂದ ಬೇರ್ಪಡಿಸುವುದಕ್ಕೆ ಅವಕಾಶ ನೀಡುತ್ತಾನೋ ಎನ್ನುವುದು ಮುಖ್ಯವಾಗುತ್ತದೆ. ಆದರೆ ಭಾರತದ ದುಡಿಯುವ ಜನ ಕ್ರಾಂತಿಯನ್ನು ಸಾಧ್ಯಮಾಡಲು ಒಂದಾಗುವರೇ ಎಂಬ ಸಂಶಯ ಅವರಿಗಿತ್ತು. ಕ್ರಾಂತಿಯ ನಂತರ ಜಾತಿ ಮತ್ತು ವರ್ಗವನ್ನಾದರಿಸಿದ ತಾರತಮ್ಯಗಳು ಇರುವುದಿಲ್ಲ ಎಂಬುದು ತಿಳಿಯುವವರೆಗೆ ಆಸ್ತಿಯ ಸಮಾನತೆಗಾಗಿ ಜನ ಕ್ರಾಂತಿಯಲ್ಲಿ ಭಾಗವಹಿಸಲಾರರು. ಕ್ರಾಂತಿಯನ್ನು ಮುನ್ನಡೆಸುವ ಸಮಾಜವಾದಿಯೊಬ್ಬ ತಾನು ಜಾತಿಯನ್ನು ನಂಬುವುದಿಲ್ಲ ಎಂಬ ಆಶ್ವಾಸನೆ ನೀಡಿದರೆ ಸಾಲದು. ಈ ಆಶ್ವಾಸನೆಯು ಸಮಾನತೆ ಮತ್ತು ಭ್ರಾತೃತ್ವದ ಸ್ಫೂರ್ತಿಯಲ್ಲಿ ಇತರರ ಬಗೆಗಿನ ಮಾನಸಿಕ ಧೋರಣೆಯಲ್ಲಿ ವ್ಯಕ್ತವಾಗಬೇಕು.'ಎಂದು ಅವರು ನಂಬಿದ್ದರು.

ಸಮಾಜವಾದಿಗಳು ಸುಂದರವಾದ ಮಾತುಗಳನ್ನು ಆಡುವುದರಲ್ಲೇ ತೃಪ್ತಿ ಪಡದೆ, ಸಮಾಜವಾದವನ್ನು ಒಂದು ವಾಸ್ತವವನ್ನಾಗಿ ಮಾಡಬಯಸುವವರಾದರೆ, ಸಾಮಾಜಿಕ ಸುಧಾರಣೆಯ ಸಮಸ್ಯೆಯು ಮೂಲಭೂತವಾದುದು ಎಂಬುದನ್ನು ಅವರು ಗುರುತಿಸಲೇಬೇಕು, ಹಾಗೆ ಮಾಡದ ಹೊರತು ಕ್ರಾಂತಿಯು ಸಾಧ್ಯವಾಗದು. ಅದೃಷ್ಟವಶಾತ್ ಅದು ಸಾಧ್ಯವಾದರೂ ಮುಂದೆ ಅವರು ಸಾಮಾಜಿಕ ಸ್ಥಿತಿಯ ವಿಷಯದಲ್ಲಿ ತಿಣುಕಾಡಬೇಕಾಗುವುದು. ಕ್ರಾಂತಿಗೆ ಮೊದಲೇ ಅವರು ಜಾತಿಯ ಪರಿಗಣನೆ ಮಾಡದಿದ್ದರೆ ಕ್ರಾಂತಿಯ ನಂತರವಾದರೂ ಅದನ್ನು ಮಾಡಲೇ ಬೇಕಾಗುವುದು. ಎಂಬುದು ಅವರ ವಾದವಾಗಿತ್ತು.

ಮುಂದೆ ಅವರು ಸ್ವಾತಂತ್ರ್ಯ, ಸಮಾನತೆ ಭ್ರಾತೃತ್ವಗಳ ಪರಿಭಾಷೆಯಲ್ಲಿ ಈ ಮೌಲ್ಯಗಳನ್ನು ಅವುಗಳ ಅತ್ಯಂತಿಕ ಮಟ್ಟದಲ್ಲಿ ಸಾಧಿಸಬೇಕಾಗುತ್ತದೆ ಎಂಬುದನ್ನು ನಿರೂಪಿಸುತ್ತಾರೆ. ಈ ಘೋಷಣೆಗಳ ಮೂಲ ಪ್ರೇರಣೆಯಾದ ಫ್ರೆಂಚ್ ಕ್ರಾಂತಿಯು ಸ್ವಾತಂತ್ರ್ಯಕ್ಕೆ ಬಹಳವೇ ಒತ್ತು ನೀಡಿದರೂ ಮುಂದೆ ಅದು ಬಡವರನ್ನೂ ಶಕ್ತಿಹೀನರನ್ನೂ ಶೋಷಿಸಲು ಶ್ರೀಮಂತರಿಗೂ ಮತ್ತು ಶಕ್ತರಿಗೂ ಇರುವ ಸ್ವಾತಂತ್ರ್ಯವಾಗಿ ಅವನತಿ ಹೊಂದಿದ್ದನ್ನು, ರಷ್ಯನ್ ಕಮ್ಯೂನಿಸ್ಟರು ಅನುಸರಿಸಿದ ಸಮಾನತೆಯ ವಿಧಾನವು ಸ್ವಾತಂತ್ರ್ಯವನ್ನು ನಿರಾಕರಿಸಿದ್ದನ್ನು, ಇವೆರಡೂ ಒಂದಾಗಿ ಮೂರನೆಯ ಮೌಲ್ಯವಾದ ಭ್ರಾತೃತ್ವವನ್ನು ಕಡೆಗಣಿಸಿದವು ಎಂಬುದನ್ನು ಅವರು ಅರ್ಥ ಮಾಡಿಕೊಂಡಿದ್ದರು. ಹಾಗಾಗಿ ತಮಗೆ ಸ್ಫೂರ್ತಿ ತಮ್ಮ ಗುರುವಾದ ಬುದ್ಧನೇ ಹೊರತು ಫ್ರೆಂಚ್ ಕ್ರಾಂತಿಯಲ್ಲ ಎನ್ನುವ ವಿವರಣೆಯನ್ನು ಅವರು ನೀಡುತ್ತಿದ್ದರು. ವಾಸ್ತವದಲ್ಲಿ ಎರಡು ಸಹಸ್ರ ವರ್ಷಗಳ ಹಿಂದೆ ಬೌದ್ಧ ಧರ್ಮವು ಈ ಬೂರ್ಷ್ವಾ ಪರಿಕಲ್ಪನೆಯನ್ನು ಹೊಂದಿತ್ತು ಎಂದು ನಂಬುವುದು ಅಸಂಗತವೆನಿಸಿದರೂ ಇಂತಹ ನೀತಿಬೋಧೆಯನ್ನು ಒಂದು ಧಾರ್ಮಿಕ ಮೂಲದಿಂದ ಮಾತ್ರ ಗ್ರಹಿಸಿ ಸಾಕ್ಷಾತ್ಕರಿಸಿಕೊಳ್ಳುವುದು ಸಾಧ್ಯ ಎಂಬುದನ್ನು ಅವರು ಕಂಡುಕೊಂಡಿದ್ದುದನ್ನು ಅಲ್ಲಗಳೆಯಲಾಗದು.

ಅಂಬೇಡ್ಕರ್ ಅವರ ಚಿಂತನಾ ಕ್ರಮದಲ್ಲಿ ರಾಜ್ಯ ಮತ್ತು ಧರ್ಮಗಳೆರಡಕ್ಕೂ ಪ್ರಾಮುಖ್ಯತೆಯಿದೆ. ಜನರ ಮನಸ್ಸನ್ನು ರೂಪಿಸಿ ನಿಯಂತ್ರಿಸುವ ಪ್ರಾಥಮಿಕ ಶಕ್ತಿಯಾಗಿ ಧರ್ಮವು ಪ್ರಭಾವ ಬೀರಿದರೆ ಪ್ರಭುತ್ವವು ತನ್ನ ಬಲವನ್ನು ಬಳಸಿ ಜನರ ಬಾಹ್ಯ ನಡವಳಿಕೆಯು ಕಾನೂನಿಗೆ ಬದ್ಧವಾಗಿರುವಂತೆ ನೋಡಿಕೊಳ್ಳುವುದು. ಉದಾರವಾದದ ಚೌಕಟ್ಟಿನ ಒಳಗೆ ಅವರು ಜನರನ್ನು ನಿಯಂತ್ರಿಸಲು ಬೇಕಾದ ವ್ಯವಸ್ಥೆ ಎಂಬರ್ಥದಲ್ಲಿ ಇವೆರಡನ್ನೂ ನ್ನು ಪರಿಭಾವಿಸುತ್ತಾರೆ. ಮಾರ್ಕ್ಸ್‌ವಾದದ ಬಗೆಗೆ ಅವರಿಗಿದ್ದ ಅಭ್ಯಂತರಕ್ಕೆ ಕಾರಣವೆಂದರೆ ಮಾರ್ಕ್ಸ್‌ವಾದವು ಈ ಎರಡನ್ನೂ ನಿರಾಕರಿಸುವುದು. ಒಬ್ಬ ವಾಸ್ತವವಾದಿಯಾಗಿದ್ದ ಅವರು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳಂತಹ ಮೌಲ್ಯಗಳು ಒಂದು ಸ್ವಾಭಾವಿಕ ರೀತಿಯಲ್ಲಿ ಪ್ರಾಪ್ತವಾಗದೆ ಅವುಗಳ ಅತ್ಯಂತಿಕ ಮಟ್ಟದಲ್ಲಿ ಧರ್ಮ ಮತ್ತು ಪ್ರಭುತ್ವಗಳಿಗೆ ಹೊರತಾಗಿ, ಸಾಧ್ಯ ಎನ್ನುವ ಮಾರ್ಕ್ಸ್‌ವಾದಿ ಆದರ್ಶವನ್ನು ಕಲ್ಪಿಸಿಕೊಳ್ಳಲಾರದವರಾಗಿದ್ದರು

ಪರಿಶಿಷ್ಟ ಜಾತಿಗಳ ಒಕ್ಕೂಟದ(Scheduled Castes Federation-SCF) ಪರವಾಗಿ ಸಂವಿಧಾನ ಸಮಿತಿಗೆ ನೀಡುವುದಕ್ಕಾಗಿ ಅವರು ಬರೆದ 'ಪ್ರಭುತ್ವ ಮತ್ತು ಅಲ್ಪಸಂಖ್ಯಾತರು' ಎಂಬ ಭಿನ್ನವತ್ತಳೆಯಲ್ಲಿ ಅಂಬೇಡ್ಕರ್ ಅವರು ತಮ್ಮ ಸಮಾಜವಾದಿ ಕಲ್ಪನೆಗೆ ಒಂದು ಖಚಿತ ಅಭಿವ್ಯಕ್ತಿಯನ್ನು ನೀಡಿದರು. ಸಂವಿಧಾನ ಸಮಿತಿಯು ಅಳವಡಿಸಿಕೊಳ್ಳಬೇಕೆಂದು ನಿರೀಕ್ಷಿಸಲಾದ 'ರಾಜ್ಯ ಸಮಾಜವಾದ'ದ ಬಗೆಗಿನ ಪ್ರಸ್ತಾಪವನ್ನು ಈ ಭಿನ್ನವತ್ತಳೆ ಹೊಂದಿತ್ತು. ಆರ್ಥಿಕ ಸಮಾನತೆಯು ದೊರೆಯದ ಹೊರತು ರಾಜಕೀಯ ಸಮಾನತೆಯು ಬರೀ ತೋರಿಕೆಯೂ ಮತ್ತು ದುರ್ಬಲವೂ ಆಗುವುದು ಎಂಬುದು ಅವರಿಗೆ ಸ್ಪಷ್ಟವಾಗಿತ್ತು.ಈ ಪ್ರಸ್ತಾವನೆಯ ಪ್ರಮುಖ ಲಕ್ಷಣಗಳು ಹೀಗಿದ್ದವು ೧. ಪ್ರಮುಖ ಕೈಗಾರಿಕೆಗಳು ಸರ್ಕಾರದ ಒಡೆತನದಲ್ಲಿರಬೇಕು ೨.ಮುಖ್ಯವಲ್ಲದ ಮೂಲ ಕೈಗಾರಿಕೆಗಳನ್ನು ಸರ್ಕಾರವೇ ನೇರವಾಗಿ ಅಥವಾ ಅದರ ಸಂಸ್ಥೆಗಳ ಮೂಲಕ ನಡೆಸಬೇಕು.೩. ವಿಮಾ ಕ್ಷೇತ್ರವು ಸರ್ಕಾರದ ಏಕಸ್ವಾಮ್ಯದಲ್ಲಿರಬೇಕು ಮತ್ತು ಪ್ರತಿಯೊಬ್ಬ ಪ್ರಜೆಗೂ ತನ್ನ ವೇತನಕ್ಕೆ ಹೊಂದುವ ವಿಮೆ ಕಡ್ಡಾಯವಾಗಬೇಕು. ೪. ಕೃಷಿಯು ಸರ್ಕಾರೀ ಕೈಗಾರಿಕೆಯಾಗಬೇಕು ೫. ಖಾಸಗಿ ವ್ಯಕ್ತಿಗಳಿಂದ ಭೂಮಿಯನ್ನು ವಶಪಡಿಸಿಕೊಂಡು ಅದಕ್ಕೆ ಪರಿಹಾರವಾಗಿ ಸಾಲಪತ್ರಗಳನ್ನು ನೀಡಬೇಕು. ೬. ಹೀಗೆ ವಶಪಡಿಸಿಕೊಂಡ ಭೂಮಿಯನ್ನು ಗ್ರಾಮೀಣ ಕೃಷಿಸಮುದಾಯಗಳಿಗೆ ಗೇಣಿಗೆ ನೀಡಬೇಕು. ಜಾತಿ ಅಥವಾ ಪಂಥಗಳ ಪರಿಗಣನೆಯಿಲ್ಲದ ಈ ಸಮುದಾಯಗಳು ಸರ್ಕಾರದ ನಿಯಮಗಳಿಗೆ ಅನುಸಾರವಾಗಿ ಕೃಷಿ ನಡೆಸಬೇಕು. ಇವರಿಗೆ ಅಗತ್ಯವಾದ ಹಣಕಾಸು ಮತ್ತು ನೀರು ಗೊಬ್ಬರ ಬೀಜ ಇತ್ಯಾದಿಗಳನ್ನು ಸಹ ಸರ್ಕಾರವೇ ಒದಗಿಸಬೇಕು. ಬೆಳೆಯನ್ನು ಕೊಳ್ಳುವ ಮೂಲಕ ಸರ್ಕಾರವು ತನ್ನ ಸಾಲವನ್ನು ಹಿಂದಕ್ಕೆ ಪಡೆಯಬೇಕು. ಸರ್ಕಾರಕ್ಕೆ

ಪಾವತಿಸಬೇಕಾದ್ದನ್ನು ಪಾವತಿಸಿದ ನಂತರ ಉಳಿದ ಉತ್ಪನ್ನವನ್ನು ಸಮುದಾಯವು ಗೊತ್ತಾದ ರೀತಿಯಲ್ಲಿ ತಮ್ಮ ನಡುವೆ ಹಂಚಿಕೊಳ್ಳಬೇಕು.

ಮುಂದೆ ಅಂಬೇಡ್ಕರ್ ಅವರು ಜೋಗೇಂದ್ರನಾಥ್ ಮಂಡಲ್ ಅವರ ನೆರವಿನಿಂದ ಬಂಗಾಳದ ಕ್ಷೇತ್ರವೊಂದರಿಂದ ಸಂವಿಧಾನ ಸಮಿತಿಯನ್ನು ಪ್ರವೇಶಿಸಿದಾಗ ೧೩ನೇ ಡಿಸೆಂಬರ್ ೧೯೪೬ರಂದು ನೆಹರೂ ಪ್ರಸ್ತುತಪಡಿಸಿದ 'ಗುರಿಗಳ ಗೊತ್ತುವಳಿ'ಯ ಬಗ್ಗೆ ಮಾತನಾಡಲು ಅವರನ್ನು ಆಹ್ವಾನಿಸಲಾಯಿತು. ಡಿಸೆಂಬರ್ ೧೭ರ ಈ ಭಾಷಣದಲ್ಲಿ ಅವರು ನೆಹರೂ ಅವರ ಪೊಳ್ಳು ಮಾತುಗಾರಿಕೆಗಾಗಿ ಅವರನ್ನು ಖಂಡಿಸುತ್ತಾ, ರಾಜ್ಯ ಸಮಾಜವಾದದ ಯೋಜನೆಯ ಬಗ್ಗೆ ಈ ಕೆಲವು ಸೂಚನೆಗಳನ್ನು ನೀಡಿದರು:

'ಇಲ್ಲಿರುವ ಕೆಲವು ಉಪಬಂಧಗಳು ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ನ್ಯಾಯದ ಬಗ್ಗೆ ಮಾತನಾಡುತ್ತವೆ. ಈ ನಿರ್ಣಯದ ಹಿಂದೆ ಪ್ರಾಮಾಣಿಕತೆ ಇದ್ದರೆ ಅವು ಸಾಧ್ಯವಾಗುವಂತೆ ಮಾಡುವ ಕೆಲವು ಅನುಬಂಧಗಳಾದರೂ ಇಲ್ಲಿ ಇರಬೇಕಿತ್ತು, ಸಮಾನತೆ ಸಾಧಿಸಲು ಕೈಗಾರಿಕೆ ಮತ್ತು ಭೂಮಿಯ ರಾಷ್ಟ್ರೀಕರಣ ಆಗಬೇಕೆಂದು ಈ ನಿರ್ಣಯವು ಸ್ಪಷ್ಟ ಮಾತುಗಳಲ್ಲಿ ಹೇಳಬೇಕಿತ್ತು. ಮುಂದಿನ ಯಾವುದೇ ಸರ್ಕಾರದ ಆರ್ಥಿಕತೆಯು ಸಮಾಜವಾದಿ ಆರ್ಥಿಕತೆಯಾಗದೆ ರಾಜಕೀಯ ಸಾಮಾಜಿಕ ಆರ್ಥಿಕ ಸಮಾನತೆಯನ್ನು ಸಾಧಿಸಲು ಸಾಧ್ಯವಿಲ್ಲ. ಈ ಪ್ರಸ್ತಾವನೆಗಳನ್ನು ಘೋಷಿಸುವ ವಿಚಾರದಲ್ಲಿ ವೈಯಕ್ತಿಕವಾಗಿ ನನಗೆ ಯಾವುದೇ ಅಭ್ಯಂತರವಿಲ್ಲದಿದ್ದರೂ ಈ ನಿರ್ಣಯವು ನನಗೆ ನಿರಾಸೆಯನ್ನು ಉಂಟು ಮಾಡಿದೆ.' ಎಂದು ರಾಜ್ಯ ಸಮಾಜವಾದದ ಬಗೆಗಿನ ತಮ್ಮ ಯೋಜನೆಯ ಬಗ್ಗೆ ಸೂಚನೆಯನ್ನು ನೀಡಿದ್ದರು.

ಈ ನಿರ್ಣಯ ಮಂಡನೆಯ ಕೊನೆಯಲ್ಲಿ ಅವರು 'ನಾನು ಹೇಳಿರುವ ಮಾತುಗಳೊಂದಿಗೆ ಈ ವಿಚಾರವನ್ನು ಹೇಗಿದೆಯೋ ಹಾಗೇ ಬಿಡಲು ಬಯಸುತ್ತೇನೆ.' ಎನ್ನುತ್ತಾರೆ. ಈ ಮಾತುಗಳು ಆಶ್ಚರ್ಯ ಹುಟ್ಟಿಸುತ್ತವೆ. ಹಾಗೇ ಮುಂದಿನ ಘಟನೆಗಳು ಸೂಚಿಸುವಂತೆ, ಅವರ ಮತ್ತು ಕಾಂಗ್ರೆಸ್‌ನ ಮಧ್ಯೆ ಮೂಡಿದ ಸೌಹಾರ್ದದ ಸೂಚನೆ ಇಲ್ಲಿದೆಯೇ ಎಂಬ ಪ್ರಶ್ನೆಯೂ ಸಹ ಹುಟ್ಟುವಂತೆ ಮಾಡುತ್ತವೆ.

೧೯೪೭ರ ಜೂನ್ ೩ರಂದು ಗೌರ್ನರ್ ಜನರಲ್ ಮೌಂಟ್ ಬ್ಯಾಟನ್ ಪ್ರಸ್ತಾಪಿಸಿದ ದೇಶವಿಭಜನೆಯ ಯೋಜನೆಯ ಪ್ರಕಾರ ಅಂಬೇಡ್ಕರ್ ಅವರ ಕ್ಷೇತ್ರವು ಪಾಕಿಸ್ಥಾನದ ಭಾಗವಾಗಿದ್ದರಿಂದ ಅವರ ಸಂವಿಧಾನ ಸಮಿತಿಯ ಸದಸ್ಯತ್ವ ಕೊನೆಗೊಳ್ಳುತ್ತದೆ. ಮುಂದಿನ ಸಂವಿಧಾನ ಸಮಿತಿಯ ಅಧಿವೇಶನಕ್ಕೆ ಮೊದಲು ಅವರನ್ನು ತನ್ನ ಟಿಕೆಟ್‌ನ ಮೇಲೆ ಚುನಾಯಿಸಲು ಕಾಂಗ್ರೆಸ್ ನಿರ್ಧರಿಸುತ್ತದೆ. ಬೊಂಬಾಯಿ ಪ್ರಾಂತ್ಯದಿಂದ ಚುನಾಯಿತರಾಗಿದ್ದ ಬ್ಯಾರಿಸ್ಟರ್ ಎಂ. ಆರ್. ಜಯಕರ್ ಅವರು ಸಂವಿಧಾನ ಸಮಿತಿಯ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಿದಾಗ ಆ ಸ್ಥಾನಕ್ಕೆ ಜಿ. ವಿ. ಮಾವಲಂಕರ್ ಅವರನ್ನು ತರಬೇಕೆಂಬ ತನ್ನ ಉದ್ದೇಶವನ್ನು ಕೈಬಿಟ್ಟು ಅಂಬೇಡ್ಕರ್ ಅವರನ್ನು ಈ ಸ್ಥಾನಕ್ಕೆ ತರುವ ಬಗ್ಗೆ ಚಿಂತಿಸುತ್ತದೆ. ಮುಂದೆ ೧೯೪೭ ರ ಅಗಸ್ಟ್ ೨೯ರಂದು ಸಂವಿಧಾನದ ಕರಡು ರಚನಾ ಸಮಿತಿಗೆ ಆಯ್ಕೆಯಾದ ಅವರನ್ನು ನಂತರ ಈ ಸಮಿತಿಯ ಅಧ್ಯಕ್ಷರನ್ನಾಗಿ ಚುನಾಯಿಸಲಾಗುತ್ತದೆ.

ಅಂಬೇಡ್ಕರ್ ಅವರ ಬಗ್ಗೆ ನೆಹರೂ ಅವರಂಥ ನಾಯಕರು ತಮ್ಮ ನಿಲುವನ್ನು ಬದಲಾಯಿಸಿಕೊಳ್ಳಲು ಈ ಭಾಷಣವು ಸಹಕಾರಿಯಾಯಿತು. ಅ ಏನೇ ಆದರೂ ಇದೊಂದು ಚತುರ ನಡೆಯಂತೂ ಆಗಿತ್ತು. ಏಕೆಂದರೆ, ಸಂವಿಧಾನದ ಅತಿ ದೊಡ್ಡ ಬಲಿಪಶುವಾಗಿದ್ದ ಹಿಂದುಳಿದ ವರ್ಗದ ಒಬ್ಬ ಪ್ರತಿನಿಧಿಯಾಗಿದ್ದ ಅಂಬೇಡ್ಕರ್ ಅವರೇ ಸಂವಿಧಾನವನ್ನು ಎತ್ತಿ ಹಿಡಿಯುವಂತೆ ಮಾಡಲಾಗಿತ್ತು

ಇಡೀ ಸಂವಿಧಾನದಲ್ಲಿ ಅಂಬೇಡ್ಕರ್ ಅವರ ರಾಜ್ಯ ಸಮಾಜವಾದದ ಯಾವ ಅಂಶವೂ ಉಳಿದಿರಲಿಲ್ಲ. ೧೯೪೭ ರ ನವಂಬರ್ ೧೫ ರ ಸಂವಿಧಾನ ಸಮಿತಿಯ ಚರ್ಚೆಗಳ ಸಂದರ್ಭಗಳಲ್ಲಿ ಅಂಬೇಡ್ಕರ್ ಅವರಂತೆ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ವಿದ್ಯಾರ್ಥಿಯಾಗಿದ್ದ ಮತ್ತು ಸಂಯುಕ್ತ ಕಾರ್ಮಿಕ ಸಂಘಗಳ ಮಹಾಸಭೆಯ ಸ್ಥಾಪಕ ಅಧ್ಯಕ್ಷರಾದ ಕೆ.ಟಿ. ಶಾ ಅವರು ಸಂವಿಧಾನದ ಅನುಚ್ಛೇದ ೧ರಲ್ಲಿ 'ಜಾತ್ಯತೀತ' 'ಸಂಯುಕ್ತ' 'ಸಮಾಜವಾದಿ' ಎಂಬ ಪದಗಳನ್ನು ಸೇರಿಸ ಬೇಕೆಂದು ಒತ್ತಾಯಿಸಿದರು. ಆದರೆ ಆಶ್ಚರ್ಯವೆಂದರೆ,

ಸಂವಿಧಾನ ಸಮಿತಿಯ ತಮ್ಮ ಭಾಷಣದಲ್ಲಿ ನಮ್ಮ ಆರ್ಥಿಕತೆಯ ರಚನೆಯನ್ನು 'ಸಮಾಜವಾದಿ' ಎಂದು ಘೋಷಿಸಬೇಕು ಎಂದು ಒತ್ತಾಯಿಸಿದ್ದ ಅಂಬೇಡ್ಕರ್ ಅವರೇ ಈಗ ಸಂವಿಧಾನವೆಂಬುದು ರಾಜ್ಯದ ವಿವಿಧ ಅಂಗಗಳನ್ನು ನಿಯಂತ್ರಿಸುವ ಒಂದು ವ್ಯವಸ್ಥೆ. ರಾಜ್ಯದ ನೀತಿ ಏನಾಗಿರಬೇಕು, ತನ್ನ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ಹೇಗೆ ರೂಪಿಸಿಕೊಳ್ಳಬೇಕು ಮುಂತಾದ ವಿಷಯಗಳನ್ನು ಕಾಲ ಪರಿಸ್ಥಿತಿಗೆ ಅನುಗುಣವಾಗಿ ಜನರೇ ನಿರ್ಣಯಿಸಿಕೊಳ್ಳಬೇಕೇ ಹೊರತು ಇದನ್ನು ಸಂವಿಧಾನದಲ್ಲೇ ಅಡಕಗೊಳಿಸುವುದು ಪ್ರಜಾಪ್ರಭುತ್ವವನ್ನು ಸಂಪೂರ್ಣವಾಗಿ ನಾಶಪಡಿಸಿದಂತೆ ಎಂದು ಶಾ ಅವರ ಪ್ರಸ್ತಾಪವನ್ನು ಈ ಮಾತುಗಳೊಂದಿಗೆ ತಿರಸ್ಕರಿಸುತ್ತಾರೆ: 'ನಾವು ಮೂಲಭೂತಹಕ್ಕುಗಳನ್ನು, ರಾಜ್ಯ ನೀತಿಯ ನಿರ್ದೇಶಕ ತತ್ವಗಳನ್ನು ಸಹ ಅಳವಡಿಸಿಕೊಂಡಿದ್ದೇವೆ. ಈ ನಿರ್ದೇಶಕ ತತ್ವಗಳು ಸಮಾಜವಾದಿ ಅಲ್ಲದಿದ್ದರೆ ಮತ್ತೆ ಯಾವುದು ಸಮಾಜವಾದ ಎಂಬುದು ನನಗೆ ಅರ್ಥವಾಗುವುದಿಲ್ಲ' ಆದರೆ ಸಂವಿಧಾನ ರಚನೆಯಾಗಿ ಎರಡು ವರ್ಷಗಳಲ್ಲೇ ಅಂಬೇಡ್ಕರ್ ಅವರಿಗೆ ಈ ನಿರ್ದೇಶಕ ತತ್ವಗಳು ಅತ್ಯಂತ ನಿರುಪಯುಕ್ತ ಭಾಗವಾದದ್ದು ತಿಳಿಯಿತು. ಶಾ ಅವರು ಬಯಸಿದ್ದನ್ನು ೧೯೭೬ ರಲ್ಲಿ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಸಂವಿಧಾನಕ್ಕೆ ತರಲಾದ ೪೨ ನೆಯ ತಿದ್ದುಪಡಿಯಲ್ಲಿ ಸಂವಿಧಾನದ ಪೀಠಿಕೆಗೆ ಸೇರಿಸಲಾಯಿತು,

೧೯೫೩ ರ ಸೆಪ್ಟೆಂಬರ್ ೨ರಂದು ಗೌರ್ನರ್‌ಗಳ ಅಧಿಕಾರ ವ್ಯಾಪ್ತಿಯನ್ನು ಕುರಿತ ಚರ್ಚೆಯ ಸಂದರ್ಭದಲ್ಲಿ ಅಂಬೇಡ್ಕರ್ ಅವರೇ ಸಂವಿಧಾನದ ಶಿಲ್ಪಿ ಎಂಬ ಮಾತಿಗೆ ಕೆರಳಿ 'ನಾನೊಬ್ಬ ದುಡಿತದ ಬರಹಗಾರ(hack) ನಾನು ಏನು ಮಾಡಬೇಕೆಂದು ಬಯಸಲಾಯಿತೋ ಅದನ್ನು ನನ್ನ ಇಚ್ಛೆಗೆ ವಿರುದ್ಧವಾಗಿ ಮಾಡಿದ್ದೇನ., ಅಗತ್ಯವಾದಲ್ಲಿ ಸಂವಿಧಾನವನ್ನು ಸುಡುವ ಮೊದಲನೇ ವ್ಯಕ್ತಿ ನಾನೇ ಆಗಲೂ ಸಿದ್ಧ' ಎನ್ನುತ್ತಾರೆ.

೧೯೫೬ರಲ್ಲಿ ಕಠ್ಮಂಡುವಿನಲ್ಲಿ ನಾಲ್ಕನೆ ಬೌದ್ಧ ಸಮ್ಮೇಳನದಲ್ಲಿ ಮಾತನಾಡುತ್ತ, ಬುದ್ಧ ಮತ್ತು ಮಾರ್ಕ್ಸ್ ಇಬ್ಬರ ಗುರಿಯೂ ಒಂದೇ ಆದರೆ ಅದನ್ನು ಸಾಧಿಸಲು ಬುದ್ಧ ಸೂಚಿಸುವ ಮಾರ್ಗ ಶ್ರೇಷ್ಠಎನ್ನುತ್ತಾರೆ. ಅಂಬೇಡ್ಕರ್ ಅವರಿಗೆ ಸಮಾಜವಾದವನ್ನು ಸುಧಾರಣೆಗಳ ಮೂಲಕ ತರುವುದರ ಬಗ್ಗೆ ಒಲವಿತ್ತೇ ಹೊರತು ಹಿಂಸೆಯ ಮೂಲಕವಲ್ಲ. ಇತಿಹಾಸವನ್ನು ಪೂರ್ವ ನಿರ್ಧಾರಿತ ಎಂಬಂತೆ ಪರಿಗಣಿಸುವ ಮಾರ್ಕ್ಸ್‌ವಾದದ ನಿಲುವು ಅವರಿಗೆ ಸಮ್ಮತವಾಗಿರಲಿಲ್ಲ. ಕಮ್ಯೂನಿಸಂ ಎಂಬುದು ಧರ್ಮ, ಪ್ರಭುತ್ವ ಅಥವಾ ದೇವರು ಇಲ್ಲದಂತಹ ವ್ಯವಸ್ಥೆ ಎಂಬ ಬಗ್ಗೆಯೂ ಸಹ ಅವರಿಗೆ ಸಮ್ಮತಿಯಿರಲಿಲ್ಲ. ಸಮಾಜವಾದವನ್ನು ಪ್ರಜಾಪ್ರಭುತ್ವಾತ್ಮಕ ವಿಧಾನಗಳ ಮೂಲಕ ಜಾರಿಗೆ ತರಬೇಕು ಎಂಬುದು ಅವರ ನಂಬಿಕೆಯಾಗಿತ್ತು.

ಸಮಾಜವಾದದ ಬಗೆಗೆ ಫೇಬಿಯನ್ನರ ನಿಲುವೂ ಸಹ ಇದೇ ಆಗಿತ್ತು. ಫೇಬಿಯನ್ನರಾದ ಜಾನ್ ಡೆವೆ ಯವರ ಪ್ರಭಾವ ಕೊಲಂಬಿಯಾ ವಿಶ್ವವಿದ್ಯಾಲಯದ ದಿನಗಳಲ್ಲಿ ಅಂಬೇಡ್ಕರ್ ಅವರ ಮೇಲೆ ಆದದ್ದು ನಮಗೆ ತಿಳಿದಿದೆ. ಇದನ್ನು ಸ್ವತಃ ಅಂಬೇಡ್ಕರ್ ಅವರೇ ಒಪ್ಪಿಕೊಂಡಿದ್ದಾರೆ. ೧೮೮೪ರಲ್ಲಿ ಇಂಗ್ಲೆಂಡ್‌ನಲ್ಲಿ ಜನಿಸಿದ ಫೇಬಿಯನಿಸಂನಲ್ಲಿ ಈ ತತ್ವಗಳು ಅನುರಣಿಸಿದವು. ಸಮಾಜವಾದವನ್ನು ಕ್ರಾಂತಿಯಿಂದ ಸಾಧಿಸಲಾಗದು; ಅದನ್ನು ಸೈದ್ಧಾಂತಿಕ ಮನನದ(indoctrination) ಮೂಲಕ ಸಾಧಿಸಬಹುದು. ಮುಂದೆ ಈ ಬೌದ್ಧಿಕ ಕ್ರಾಂತಿಕಾರಿಗಳು ಅಧಿಕಾರವನ್ನು ಗಳಿಸಿ ಜಗತ್ತಿನ ಅಧಿಕಾರ ಚಲಾವಣೆಯ ಸಂಸ್ಥೆಗಳನ್ನು ಪ್ರಭಾವಿಸುವ ಮೂಲಕ ಸಮಾಜವಾದೀ ಏಕಪ್ರಪಂಚ ವ್ಯವಸ್ಥೆಯನ್ನು ತರುವರು ಎಂಬುದು ಫೇಬಿಯನ್ ವಾದದ ನಂಬಿಕೆ.

ಮಾರ್ಕ್ಸ್‌ವಾದಿ ಸಮಾಜವಾದವು ತನ್ನ ತತ್ವವನ್ನು ಆಚರಣೆಗೆ ತರಲು ಸಾಧ್ಯವಾಗದೆ ಸೋಲುಕಂಡಿದೆ ಎಂದು ಭಾವಿಸಲಾಗುವುದು. ಆದರೂ ಮಾರ್ಕ್ಸ್‌ವಾದದ ಮೂಲಭೂತ ತಾತ್ವಿಕ ಬುನಾದಿಯು ನಂಬಲರ್ಹವಾಗಿ ಉಳಿದಿದೆ. ಈ ರೀತಿಯ ಯಾವ ತಾತ್ವಿಕ ಬುನಾದಿಯಿಲ್ಲದ ಫೇಬಿಯನ್ ವಾದವು ನಿಧಾನವಾಗಿ ತನ್ನ ನಂಬಿಕೆಗೆ ವಿರುದ್ಧವಾದ, ಅಂದರೆ ಮುಕ್ತ ವ್ಯಾಪಾರೀ ಬಂಡವಾಳ ವ್ಯವಸ್ಥೆಯ ಸಮರ್ಥನೆಯಲ್ಲಿ ಅಂತ್ಯಗೊಂಡಿದೆ. ಇಷ್ಟೇ ಅಲ್ಲದೆ ಒಂದು ಗುಂಪಿನ ದಲಿತರು ಅಂಬೇಡ್ಕರ್ ಅವರು ಸಮಾಜವಾದಿಯೇ ಅಲ್ಲ ಎನ್ನುವ ಮಟ್ಟಕ್ಕೆ ಹೋಗಿದ್ದಾರೆ. ಆದರೆ ಅಂಬೇಡ್ಕರ್ ಅವರು ಸಮಾಜವಾದಿ ಎಂಬ ವಾಸ್ತವ ಬದಲಾಗುವುದಿಲ್ಲ.

ಯಾವ ದಲಿತರ ಏಳಿಗೆಗಾಗಿ ತಮ್ಮ ಜೀವನವನ್ನು ಅಂಬೇಡ್ಕರ್ ಅವರು ಮುಡಿಪಾಗಿಟ್ಟರೋ ಅಂತಹ ಬಹುಸಂಖ್ಯಾತ ದಲಿತರ ಸ್ಥಿತಿಯ ಹಿನ್ನೆಲೆಯಲ್ಲಿ ಅವರ ಸಮಾಜವಾದದ ಕಳಕಳಿಯನ್ನು ಪರಾಮರ್ಶಿಸುವ ಅಗತ್ಯವಿದೆ. ಹಾಗೆ ಮಾಡಲು ಅವರ ಅಧ್ಯಯನನದ ವಿಧಾನಗಳನ್ನು ಪುನರ್‌ಪರಿಶೀಲಿಸಬೇಕಿದೆ.

ಅಸ್ಮಿತಾವಾದ(identitarian) ಗೀಳನ್ನು ಹೊರತುಪಡಿಸಿ ನೋಡಿದರೆ ಅಂಬೇಡ್ಕರ್ ಅವರೇ ತಮ್ಮ ವಿಧಾನಗಳು ಗುರಿ ತಲುಪುವಲ್ಲಿ ಸೋತಿದ್ದನ್ನು ಕುರಿತು ತಮ್ಮ ಕೊನೆಗಾಲದಲ್ಲಿ ಪಶ್ಚಾತ್ತಾಪ ಪಟ್ಟದ್ದನ್ನು ಕಾಣಬಹುದು. ಅವರು ಪ್ರತಿಪಾದಿಸುತ್ತಿದ್ದ ಮಾರ್ಕ್ಸ್‌ವಾದದ ವಿಷಯಕ್ಕೂ ಇದು ಅನ್ವಯವಾಗುತ್ತದೆ, ಆದರೂ ಅದು ತನ್ನ ತಾತ್ವಿಕ ಪ್ರಾಮಾಣಿಕತೆಯ ಬಗ್ಗೆ ಹೆಮ್ಮೆ ಪಡಬಹುದು. ಸದ್ಯದ ವಾಸ್ತವಗಳಿಗೆ ತೆರೆದುಕೊಳ್ಳಲು ಸಾಧ್ಯವಾದರೆ, ಮಾರ್ಕ್ಸ್‌ವಾದವು ವ್ಯಾವಹಾರಿಕ ಪ್ರಯೋಜನವಾದ ಮತ್ತು ಫೇಬಿಯನ್ ವಾದಗಳಿಗಿಂತ ಬಹಳವೇ ಉತ್ಕೃಷ್ಟ ಎಂಬುದರಲ್ಲಿ ಅನುಮಾನವಿಲ್ಲ.



**(ಈಗ ಗೋವಾದಲ್ಲಿ ನೆಲೆಸಿರುವ ಆನಂದ ತೇಲ್ತುಂಬ್ಡೆ ಮ್ಯಾನೇಜ್‌ಮೆಂಟ್ ಕ್ಷೇತ್ರದ ಪರಿಣತರಾಗಿದ್ದು ಓರ್ವ ಅಂಬೇಡ್ಕರ್ ವಿದ್ವಾಂಸರೂ ಆಗಿದ್ದಾರೆ)**

(ಕನ್ನಡಕ್ಕೆ : **ಎಂ. ರಾಜು**
ಕೃಪೆ: **ಜನತಾ,** ೨೭, ಜನವರಿ, ೨೦೧೯)

# ಮಿತಿಗಳಲ್ಲೇ ಪರಿಪೂರ್ಣತೆ ಮತ್ತು ಸೌಂದರ್ಯ ಸಾಧನೆ ಇಂದಿನ ಅಗತ್ಯ

## ಮನುಷ್ಯನನ್ನು ಪ್ರಕೃತಿಯಿಂದ ಬೇರ್ಪಡಿಸುತ್ತಿರುವ ವಿಜ್ಞಾನವೆಂಬ ಅ-'ಜ್ಞಾನ' (ಭಾಗ-೩)

-ಡಿ.ಎಸ್. ನಾಗಭೂಷಣ

(ಕಳೆದ ಸಂಚಿಕೆಯಿಂದ ಮುಂದುವರೆದುದು)

**ಮೊ**ದಲು ನಿನ್ನನ್ನು ನೀನು ಅರ್ಥ ಮಾಡಿಕೋ. ಯಾರು ನೀನು? ಮನುಷ್ಯ ಅಂದರೆ ಏನು? ಎಲ್ಲಿದ್ದೆ ನೀನು? ಎಲ್ಲಿಂದ ಬಂದದಿಲ್ಲಿಗೆ ನೀನು? ಎಲ್ಲಿಗೆ ಹೋಗುವೆ? ನಿನನಗೆ ಈ ಮನುಷ್ಯ ಶಕ್ತಿ ಬಂದದ್ದು ಎಲ್ಲಿಂದ, ಯಾರಿಂದ, ಹೇಗೆ? ಯಾರು ನಿನಗೆ ಈ ಶಕ್ತಿ ಕೊಟ್ಟವರು? ಏನಾಗಿ ಬೆಳೆತೀಯ ನೀನು, ಏಕೆ? ಇದು ನಮ್ಮ ಮುಖ್ಯ ಪ್ರಶ್ನೆಗಳಗಬೇಕು. ಜಾನಪದವೂ ಸೇರಿದಂತೆ ನಮ್ಮ ತತ್ವ ಪರಂಪರೆ ಈ ಪ್ರಶ್ನೆಗಳ ಮೇಲೇ ಬೆಳೆದಿದೆ. ಇದರ ಭಾಗವಾಗಿ ನಾವು ಬೇರೆ ಬೇರೆ ಚಟುವಟಿಕೆ ಮಾಡಬೇಕಾಗಿತ್ತು. ಫುಕೊವೊಕಾ ಒಂದು ಮಾತು ಹೇಳ್ತಾನೆ 'ಅದು ಏನು?' ಎಂದು ಕೇಳುವ ಮುನ್ನ ಕೇಳುತ್ತಿರುವವನಿಗೆ ತಾನು ಯಾರೆಂದು ಮತ್ತು ಏನು ಎಂದರೆ ಏನೆಂದು ಸ್ಪಷ್ಟತೆ ಇಲ್ಲದಿದ್ದರೆ ಅದು ಏನೆಂದು ಸ್ಪಷ್ಟವಾಗುವುದಿಲ್ಲ ಎಂದು. ಜ್ಞಾನ ಪಡೆಯಲು ಇರಬೇಕಾದ ಮೂಲ ತಿಳುವಳಿಕೆ ಇದು. ಆದರೆ ಇಂದು ಈ ತಿಳುವಳಿಕೆ ಇಲ್ಲದ ನಾವು ಕತ್ತಲಲ್ಲಿ ತಡವಿದ್ದನ್ನೆಲ್ಲ ಮುಟ್ಟಿ ನೋಡಿ ಜ್ಞಾನ ಎನ್ನುತ್ತಿದ್ದೇವೆ. ಇದು ಇಂದಿನ ವಿಜ್ಞಾನದ ಸ್ಥಿತಿ.

ದುಡಿಮೆ ಮಾಡಬೇಕು ನಿಜ, ಬದುಕುವುದಕ್ಕೆ; ಆದರೆ ಅದು ಈ ಪ್ರಶ್ನೆಗಳೊಂದಿಗೆ ನಡೆಯಬೇಕು, ಆಗ ನಮ್ಮ ದುಡಿಮೆ ಸಾರ್ಥಕ ಅನ್ನಿಸುತ್ತದೆ, ತೃಪ್ತಿ ನೀಡುತ್ತೆ, ದುಡಿಮೆಯ ದಣಿವಾರಿಸುವ ಆನಂದವೂ ಸಿಗುತ್ತೆ.. ಆದರೆ ಅದನ್ನು ಬಿಟ್ಟು ನಾವು ಹುಟ್ಟಿರುವುದೇ ಸುಖಕ್ಕೋಸ್ಕರ, ಸುಖ ಪಡೋದು ಅಂತಂದ್ರೆ ಇವೊತ್ತಿಗಿಂತ ನಾಳೆ ಹೆಚ್ಚು ಸುಖಪಡಬೇಕು, ಇನ್ನೊಬ್ಬರಿಗಿಂತ ಚೆನ್ನಾಗಿ ಬದುಕ್ಬೇಕು. ಇದೇ ತಂತ್ರಜ್ಞಾನ ಚಾಲಿತ ಆಧುನಿಕ ಬದುಕಿನ ತತ್ವ ಅಗ್ಬೋಯಿತು. ಒಳ್ಳೊಳ್ಳೆ ಬಟ್ಟೆಗಳ್ವೊಳ್ಳೊಳ್ಳೆ ಮನೆಗಳು, ಒಳ್ಳೊಳ್ಳೆ ಮತ್ತು ಹೊಸ ಹೊಸ ಸಾಧನ ಸಲಕರಣೆಗಳಿಂದ ಸಜ್ಜಾದ ಬದುಕು. ಇದು ನಮ್ಮನ್ನು ನಮ್ಮಲ್ಲೇ ಪೂರ್ಣ ಮುಳುಗಿಸಿಬಿಡುವ ಬದುಕು. ಪಾಪಪ್ರಜ್ಞೆ ಕೆರಳಿದಾಗ ಇದು ಎಲ್ಲರಿಗೂ ಸಿಗಬೇಕು ಅಂತೀವಿ. ಅದಕ್ಕೇ ಬೇಕಾದ ಸಿದ್ಧಾಂತಗಳನ್ನೆಲ್ಲ ಕಲಿತು ಸಿದ್ಧಮಾಡಿಕೊಂಡು ಇಟ್ಕೊಂಡಿದ್ದೀವಿ ಆದರೆ ಇದು ಸಾಧ್ಯವಾ ಅಂತ ಈ ಭೂಮಿ ಮೇಲೆ ಆಣೆ ಇಟ್ಟು ಯೋಚನೆ ಮಾಡಿದ್ದೀವಾ? ಅದಕ್ಕೇ ಈಗ ಕೊಡಗಿನಲ್ಲಿ ಅಥವಾ ಕೇರಳದಲ್ಲಿ ಅನಾಹುತಗಳು ಆಯ್ತು ಅಥವಾ ಉತ್ತರಖಂಡದಲ್ಲಿ ಆಯ್ತು ಅಂತ ನಾವೇನಾದರೂ ನಮ್ಮ ಜೀವನ ಕ್ರಮಗಳಲ್ಲಿ ಬದಲಾವಣೆ ಮಾಡಿಕೊಂಡಿದ್ದೀವಾ? ಅನಗತ್ಯ ಖರದಿಗಳನ್ನು ನಿಲ್ಲಿಸಿದ್ದೀವಾ? ಮಾಲ್‌ಗೆ ಹೋಗೋದನ್ನ ನಿಲ್ಸಿದ್ದೀವಾ? ಏರ್ ಕಂಡೀಶನ್‌ಗಳನ್ನು ಹಾಕುವುದನ್ನು ನಿಲ್ಸಿದ್ದೀವಾ? ದೊಡ್ಡ ದೊಡ್ಡ ಕಾರುಗಳ ತಯಾರಿಕೆಗಳನ್ನ ನಿಲ್ಸಿದ್ದೀವಾ? ಬಲಿಷ್ಠವಾಗಬೇಕು ನಾವು. ಅದೇ ಮುಖ್ಯ ತತ್ವ ಇಂದು. ಬಲಿಷ್ಠತೆ ಇದೆಯಲ್ಲ ಇದು ಗಂಡು ಗುಣ. ಅದು ಭೂಮಿಯ ಮೇಲಿನ ಮನುಷ್ಯನ ದಿಗ್ವಿಜಯದ ಕನಸು ಬಿತ್ತಿದ ವಿಜ್ಞಾನ ನಮಗೆ ಕೊಟ್ಟಿರುವಂತದ್ದು ಇದರಿಂದ ನಮ್ಮ ಹೆಣ್ಣು ಗುಣವನ್ನ ನಾವು ಮರ್ತುಬಿಟ್ಟಿದ್ದೀವಿ. ಎಲ್ಲವನ್ನೂ ತಾರತಮ್ಯವಿಲ್ಲದೆ ಪೊರೆಯುವ ಗುಣವದು. ನಮ್ಮೊಳಗಿನ ಮಾರ್ದವತೆ, ಅಂತಃಕರಣ, ದಯೆ, ಕರುಣಾ ಗುಣಗಳು ಅವು. ಅವುಗಳ ಪಸೆಯೇ ಇಂದು ಆರಿಹೋಗಿದೆ.

ಧರ್ಮ ಅಂದರೆ ಮತ್ತೇನಿಲ್ಲ ಕರುಣಾ ಅಂತ. ಧರ್ಮ ಅಂದ್ರೆ, ವೇದ ಭಗವದ್ಗೀತೆ ಅಥವಾ ಕುರಾನ್ ಬೈಬಲ್ ಇವೆಲ್ಲಾ ಅಲ್ಲ. ಅವುಗಳ ಪಾರಾಯಣವೂ ಅಲ್ಲ. ಅವೆಲ್ಲ ಧರ್ಮದ ತೊಗಟೆ ಇದ್ದಂತೆ. ಧರ್ಮ ಅಂದ್ರೆ ಮೂಲತಃ ಕರುಣಾ. ಕರುಣಾ ಅಂದ್ರೆ ಕರುಣೆ ಅಂತ ಅಲ್ಲ. ಕರುಣೆ ಅಂದ್ರೆ ಇನ್ನೊಬ್ಬರನ್ನು ಕೆಳಗಿಟ್ಟು ನೋಡುವುದು ಅಯ್ಯೋ ಅನ್ನೋ ಮರುಕ ಅಲ್ಲ. ಕರುಣಾ ಅಂದರೆ ನೆರೆಹೊರೆಯವರೊಂದಿಗೆ ಬದುಕುವ ಕ್ರಮ ಅದು. ಕರುಣಾ ಅಂದರೆ ಪ್ರತಿಯೊಂದು ವಸ್ತುವೂ ಇನ್ನೊಂದರ ಅವಲಂಬನದಲ್ಲಿದೆ, ಅವು ಬೇರೆ ಬೇರೆ ಅಲ್ಲ, ಪ್ರತ್ಯೇಕ ಅಲ್ಲ. ಪ್ರತಿಯೊಂದು ವಸ್ತುವೂ ಪ್ರತಿಯೊಂದು ಪ್ರಾಣಿ ಪಕ್ಷಿಯೂ ಪ್ರತಿಯೊಂದು ಜೀವವೂ ಪ್ರತಿಯೊಂದು ಪ್ರಾಕೃತಿಕ ಅಂಶವೂ, ಆಕಾಶ ಇರಬಹುದು, ಗಾಳಿ ಇರಬಹುದು, ನೀರು ಇರಬಹುದು, ಬಂಡೆ ಇರಬಹುದು, ಎಲ್ಲವೂ ಒಂದಕ್ಕೊಂದು ಸಂಬಂಧಿಸಿವೆ, ಇದೊಂದು ದೊಡ್ಡ ಅಖಂಡ ಜಾಲ, ಎಲ್ಲೋ ಒಂದು ಕಡೆ ಇದರಲ್ಲಿ ಸಣ್ಣ ರಂಧ್ರ ಆದರೂ, ಅದು ಹರಿದುಹೋದ್ರೂ ಒಟ್ಟು ಜಾಲಕ್ಕೆ ಧಕ್ಕೆಯಾಗಿ ನನಗೆ ತೊಂದರೆಯಾಗ್ತದೆ ಅದರಿಂದ ಅನ್ನುವ ಅರಿವು ಮತ್ತು ಅದರಂತೆ ಬದುಕುವ ದಾರಿ. 'ಮಾಯಾಲೋಕ' ಅಂತ ಒಂದು ಕಾದಂಬರಿ ಇದೆ, ಪೂರ್ಣಚಂದ್ರ ತೇಜಸ್ವಿ ಅವರ ಕೊನೆಯ ಕಾದಂಬರಿ.



ಇದು ಅವರ ಪರಿಸರ ಕಥೆಗಳ ಕಾದಂಬರಿ ರೂಪ ಅನ್ನಬಹುದು. ಇದರಲ್ಲಿ ಒಂದು ಘಟನೆ ಆಗುತ್ತದೆ. ನಾಗೇಶ್ ಹೆಗಡೆಯವರು ಹೇಳಿದ್ರಲ್ಲ, ಮಾಟ ಮಂತ್ರ ಈಗಲೂ ಇದೆ, ವಿಧಾನಸೌಧದಲ್ಲಿ ಒಂದು ಸೈನ್ ಹಾಕಿದ್ರೆ ಎಲ್ಲೆಲ್ಲೋ ಢಮ್ ಅನ್ನುತ್ತೆ ಅಂತ ಹಂಗೆ. ಅದರಲ್ಲಿ ಒಂದು ಸಣ್ಣ ಊರದು. ಆ ಊರಲ್ಲಿ ಒಂದು ಸಣ್ಣ ಕೆರೆ ಇರುತ್ತೆ. ಆ ಸಣ್ಣ ಕೆರೆಯಲ್ಲಿ ಹುಂಡು ಕೋಳಿಗಳಿವೆ. ಹುಂಡು ಕೋಳಿಗಳು ತೇಲಿಕೊಂಡು, ಓಡಾಡಿಕೊಂಡು ಇವೆ. ಬೇರೆ ಊರಿನಿಂದ ಒಬ್ಬ ಅಪ್ಪಣ್ಣಪ್ಪ ಅನ್ನೋನು ಬರ್ತಾನೆ ಅಲ್ಲಿಗೆ. ಊರಿಗೆ ನೆಂಟ ಅವನು. ಬಂದು, ಒಂದು ಹುಂಡು ಕೋಳಿ ಶಿಕಾರಿ ಮಾಡ್ತಾನೆ. ಅವನು ಹೇಳ್ತಾನೆ, "ಇಂಥ ಕೋಳಿ ಮಾಂಸವನ್ನು ನಾನು ತಿಂದೇ ಇಲ್ಲ. ದೇವಲೋಕದ ರುಚಿ ಇದು" ಅಂತ. ಇದರ ಪರಿಣಾಮವಾಗಿಆ ಊರ್ನೋರೆಲ್ಲ ಕೋಳಿಗಳನ್ನು ಕೊಲ್ಲುವುದು ತಿನ್ನುವುದು, ಕೊಲ್ಲುವುದು ತಿನ್ನುವುದು ಮಾಡ್ತಾರೆ. ಅವು ಮರಿ ಹಾಕಿದ ಹಾಗೂ ತಿನ್ನುವುದು. ಅವು ಸರ್ವನಾಶ ಆಗೋ ತನಕ ತಿಂದ್ರು. ಆ ಹುಂಡು ಕೋಳಿಗಳ ಸಂತತಿ ನಾಶವಾಗುತ್ತಿದ್ದ ಹಾಗೆ, ಆ ಕೆರೆ ಬತ್ತಿ ಹೋಗುತ್ತೆ. ಆ ಕೆರೆ ಬತ್ತಿ ಹೋದ ಕೆಲವೇ ವರ್ಷಕ್ಕೆ, ಆ ಊರ ಸುತ್ತಮುತ್ತ ಧಾರಾಕಾರ ಮಳೆಯಾಗಿ ಜಲ ಪ್ರಳಯ ಆಗುತ್ತೆ.

ಇಲ್ಲಿ ತೇಜಸ್ವಿ ಏನು ಹೇಳ್ತಾ ಇದಾರೆ ಅಂತಂದ್ರೆ, ಪ್ರಕೃತಿ ಅಂದರೆ ನಮಗೆ ಕಾಣುವ ಅಥವಾ ತರ್ಕಕಕ್ಕೆ ಗೊತ್ತಾಗುವ ವಿದ್ಯಮಾನ ಅಲ್ಲ. ನಮಗೆ ಕಾಣುವ ವಿದ್ಯಮಾನದ ಹಿಂದೆ ಕಾಣದ ವಿದ್ಯಮಾನಗಳೂ ನಡಿತಾ ಇರುತ್ವೆ. ಉದಾಹರಣೆಗೆ ತೇಜಸ್ವಿಯವರ ಮನೆ ಹಿಂದೆ ಒಂದು ಕೆರೆ ಇರತ್ತೆ. ಆ ಕೆರೆಗೆ ನೀರು ಪೂರೈಸುವಂಥ ಸಣ್ಣ ತೊರೆ ಇರುತ್ತೆ. ತೇಜಸ್ವಿ ಸ್ವಲ್ಪ ತುಡುಗು ಸಾಹಸಿ. ಹಳೆ ಕಾಲದ ಮಾತಿದೆಯಲ್ಲ, ಋಷಿ ಮೂಲ, ನದಿ ಮೂಲ ಹುಡುಕ್ಬಾರ್ದು ಅಂತ. ನೋಡೇಬಿಡೋಣ ಈ ತೊರೆ ಮೂಲ ಎಲ್ಲಿದೆ ಅಂತ ಹೋಗ್ತಾರೆ. ಮನೆಯಾಚೆ ಒಂದಷ್ಟು ದೂರ ಆಚೆ ಹೋಗುತ್ತಿದ್ದ ಹಾಗೆ, ತೊರೆ ಸಣ್ಣ ಸಣ್ಣ ಸಣ್ಣದಾಗಿ ಹೋಗಿ ಕೊನೆಗೆ ಮಾಯ್ವಾಗಿ ಹೋಗ್ಬಿಡತ್ತೆ. ಆವಾಗ ಅನ್ನುತ್ತೆ, ಕಾಣುವ ಸತ್ಯದ ಹಿಂದೆ ಯಾವಾಗಲೂ ಮೂಲದಲ್ಲಿ ಕಾಣದಿರುವ ಸತ್ಯವೊಂದಿರತ್ತೆ ಅಂತ. ಗೊತ್ತಾಗದಿಲ್ಲ ಅದು. ಹುಡುಕೋಕಾಗೋದಿಲ್ಲ ಅದನ್ನ. ತೋಡಿದ್ರೂ ತೋಡಿದಂಗುನೂ ಹರಿವು ಕಾಣದಿಲ್ಲ. ಎಲ್ಲೋ ಅಂತರ್ಗಾಮಿಯಾಗಿ ನೀರು ಹರೀತಾ ಇರತ್ತೆ. ಸೈನ್ಸ್ ಏನ್ ಮಾಡ್ತು ಅಂದ್ರೆ, ಎಲ್ಲವೂ ಬರಿಗಣ್ಣಿಗೆ ಅಲ್ಲದಿದ್ರೂ ತಾನು ಕಂಡು ಹಿಡಿದ ಸೂಕ್ಷ್ಮಗ್ರಾಹಿಗೆ ಕಾಣತ್ತೆ ಅಂದುಕೊಂಡು ಬಿಡು. ಅಷ್ಟು ಇಷ್ಟೂ ಕಾಣಬಹುದೇನೋ. ಆದರೆ ಕಾಣುವುದು ಎಂದರೆ ಅರ್ಥವಾಗುವುದು ಎಂದಲ್ಲವಲ್ಲ? ಆದರೆ ಅದು ಎಲ್ಲವನ್ನೂ ಅರ್ಥ ಮಾಡ್ಕೋಬಹುದು, ವಿವರಿಸಬಹುದು ಅಂತ ಅಂದುಕೊಂಡು ಬಿಡ್ತು. ಅಂದ್ರೆ ತನಗೆ ಕಾಣದ್ದು, ಅರ್ಥವಾಗದ್ದು ಏನು ಇಲ್ಲ ಅನ್ನುವ ಭಾವನೆ. ಇದು ಈಗ ನಿಧಾನವಾಗಿ ಬದಲಾಗ್ತಿದೆ ಅನ್ನೋದು ಬೇರೆ ವಿಷಯ. ಆದರೆ ಅದಿನ್ನೂ ವಿಜ್ಞಾನದ ಪಾರಮ್ಯದಲ್ಲಿ ನಂಬಿಕೆ ಇಟ್ಟಿರೋಈ ಸಾಮಾನ್ಯ ಜನಕ್ಕೆ ತಲುಪಿಲ್ಲ. ಅವರು ಆಧುನಿಕ ವಿಜ್ಞಾನವನ್ನೂ, ಅದು ನಿರಾಕರಿಸುವ ಸಗುಣ ದೇವರನ್ನೂ ಒಟ್ಟೊಟ್ಟಿಗೇ ಇಟ್ಟು ಪೂಜಿಸುತ್ತಿದೆ! ಆಧುನಿಕ ವಿಜ್ಞಾನ ನಮ್ಮಲ್ಲಿ ಸೃಷ್ಟಿಸಿರೋ ಒಂದು ದೊಡ್ಡ-ಇವೊತ್ತಿನ ಎಲ್ಲ ಅನಾಹುತಗಳಿಗೆ

ಕಾರಣವಾಗಿರುವ ಒಂದು ದೊಡ್ಡ ಮಾನಸಿಕ ಒಡಕು ಇದು.

ಕಾಣುವ ಮತ್ತು ಕಾಣದಿರುವ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಗಾಂಧಿಯವರ ಒಂದು ಉಪಕಥೆ ಇದೆ. ಅವರು ಒಮ್ಮೆ ಹಡಗಲ್ಲಿ ಹೋಗ್ತಾ ಇದ್ದಾಗ. ಅವರ ಆಪ್ತನೊಬ್ಬ, ಒಬ್ಬ ಬೈನಾಕುಲರ್ ಅಂದ್ರೆ ದೂರದರ್ಶಕ ಬಳಸ್ತಾ ಇರ್ತಾನ.' ಗಾಂಧಿ ಅವನನ್ನು 'ಇದರಲ್ಲಿ ಏನು ನೋಡ್ತಿದೀಯಾ?' ಅಂತ ಕೇಳ್ತಾರೆ. ಅದಕ್ಕಾತ 'ಇದು ದೂರದರ್ಶಕ ಅಂತ. ನಮ್ಮ ಕಣ್ಣಿಗೆ ಕಾಣಿಸ್ದೇ ಇರೋ ವಸ್ತುಗಳನ್ನೆಲ್ಲ ಕಾಣಿಸೋ ಹಾಗೆ ಮಾಡುತ್ತೆ. ಬನ್ನಿ ನೀವು ನೋಡಿ' ಅಂತ ಹೇಳ್ತಾನೆ. ಆಗ ಗಾಂಧಿ ಹೇಳ್ತಾರೆ, 'ಕಣ್ಣಿಗೆ ಕಾಣುವ ಜಗತ್ತೇ ನನಗಿನ್ನೂ ಅರ್ಥ ಆಗಿಲ್ಲ. ಕಣ್ಣಿಗೆ ಕಾಣದ್ದನ್ನು ಕಟ್ಟಿಕೊಂಡು ನನಗೆ ಏನು ಆಗಬೇಕಾಗಿದೆ!' ಅಂತ. ಸೈನ್ಸ್‌ನ ಸಮಸ್ಯೆ ಇದೇ. ಕಾಣುವ ಜಗತ್ತನ್ನೇ ಅದಿನ್ನೂ ಅರ್ಥಮಾಡ್ಕಂಡಿಲ್ಲ, ಕಾಣದ ಜಗತ್ತಿನ ಕುತೂಹಲ ಹುಟ್ಟಿಸಿ ಅ ಕುತೂಹಲದ ಜಾಲದಲ್ಲೇ ಸಿಕ್ಕಿಹಾಕಿಕೊಂಡು ಹೊರಬರಲಾಗದೆ ಒದ್ದಾಡತಾ ಇದೆ. ಅದು ಆಸ್ತಿಕತೆ–ನಾಸ್ತಿಕತೆಗಳ ನಡುವೆಣ ಸಂದಿಗ್ಧತೆಯಲ್ಲಿ ಸಿಕ್ಕಿಹಾಕಿಕೊಂಡಿದೆ.

ಆದ್ದರಿಂದ ನಾವು ವಿಜ್ಞಾನವನ್ನು ಪರಮ ಧರ್ಮ ಅಂತ ನಂಬುವದನ್ನು ನಿಲ್ಲಿಸಬೇಕು ಮೊದಲು. ಅದಕ್ಕೆ ಬದಲಾಗಿ ನಮ್ಮ ಪುರಾತನ ವಿವೇಕ ಏನಿತ್ತೋ ಅದನ್ನು–ಬೆಳಗ್ಗೆ ಎದ್ದು ಧ್ಯಾನ ಮಾಡಿ, ಪೂಜೆ ಮಾಡಿ ಅಂತ ಹೇಳ್ತಾ ಇಲ ನಾನು ಲ್ಲ–ಇದೊಂದು ಅಖಂಡ ಜಗತ್ತು, ನನ್ನ ಜೊತೆಯಲ್ಲಿ ಇರುವವರು, ಜನ, ಪ್ರಕೃತಿ ಇವೆಲ್ಲವೂ ನಮ್ಮ ಜೊತೆ ಸಾವಯವವಾಗಿ ಇರಬೇಕಾದದ್ದು; ಅದಿಲ್ದೇ ಇದ್ದರೆ ನಾವು ಇರೋದಿಲ್ಲ ಅನ್ನುವ ಅರಿವನ್ನು ಮನನ ಮಾಡಿಕೊಳ್ಳಬೇಕು. ಅದರ ಭಾಗವಾಗಿ ಅದಕ್ಕೆ ಪೂರಕವಾದ ಶಿಕ್ಷಣವನ್ನು ನಾವು ಆರಂಭ ಮಾಡಿಕೊಳ್ಳಬೇಕು. ಆಗ ಸಹಜವಾಗಿಯೇ ಪರಿಸರ ಅಥವಾ ಭೂಮಿ ಸಂರಕ್ಷಣ ಈ ಶಿಕ್ಷಣದ ದೃಷ್ಟಿಕೇಂದ್ರವಾಗಿರುತ್ತದೆ.

ಇವತ್ತು ಶಿಕ್ಷಣ ಆಧುನಿಕವಾಗಿದೆ. ಆಧುನಿಕ ಶಿಕ್ಷಣ ಅಂತ ಅಂದರೆ ಏನೂಂದ್ರೆ, ಮಕ್ಕಳನ್ನು ತಂದೆ ತಾಯಿಗಳಿಂದ ಮತ್ತು ವರ ಊರುಗಳಿಂದ ದೂರ ತೆಗೆದುಕೊಂಡು ಹೋಗುವ ಒಂದು ಉಪಾಯ ಆಗಿದೆ. ಬೆಂಗಳೂರು ಇತ್ಯಾದಿ ಮಹಾನಗರಗಳಲ್ಲಿರುವವರಿಗೆ ಊರೇ ಇಲ್ಲದಾಗಿದೆ. ಈಗ ಜಿಲ್ಲಾ ತಾಲ್ಲೂಕು ಕೇಂದ್ರಗಳಿಗೂ ಅದೇ ಗತಿ ಆಗುತ್ತಿದೆ. ಅವಕ್ಕೆಲ್ಲ ಬಿಡಿಭಾಗಗಳೇ ಇಲ್ಲ. ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಚಹರೆಗಳೆ ಇಲ್ಲದ ಹೊಟ್ಟೆ ಮಾತ್ರ ಇರುವ ಪೆಡಂಭೂತಗಳಾಗ್ತಾ ಇವೆ. ನಾನು ಅಂದ್ರೆ ಯಾರು ನಿಜವಾಗಿ? ಒಂದು ಊರಲ್ಲಿ ಹುಟ್ಟುತ್ತೀವಲ್ಲ, ಯಾವುದೋ ಒಂದು ಹಳ್ಳಿಯಲ್ಲಿ ನಾನು ಹುಟ್ಟಿದೆ, ನಾನು ಅಂತ ಅಂದ್ರೆ ಬರೀ ನಾನಲ್ಲ. ನನ್ನ ಬಳಗ, ನನ್ನ ಊರು, ನನ್ನ ನದಿ, ನನ್ನ ಬೆಟ್ಟ, ನನ್ನ ಗುಡ್ಡ, ಇದೆಲ್ಲವೂ ಸೇರಿ ನಾನಾಗಿರ್ತಕ್ಕಂತದ್ದು. ಆಗಲೇ ನಾನು ಜೀವಂತವಾಗಿರುವುದು. ವಿದ್ಯಾಭ್ಯಾಸ ನನ್ನನ್ನ ಏನ್ ಮಾಡ್ತು? ನನ್ನನ್ನು ತೆಗೆದುಕೊಂಡು ಹೋಗಿ ಬೆಂಗಳೂರಿಗೆ ಹಾಕ್ತು. ಕೆಲಸಕ್ಕೆ ದೆಹಲಿಗೆ ತೆಗೆದುಕೊಂಡು ಹೋಗಿ ಹಾಕ್ತು. ಈ ನದಿ, ತೊರೆ, ಈ ತೋಪು, ಈ ಮೈದಾನ, ಈ ಗುಡ್ಡ, ತಂದೆ, ತಾಯಿ, ಬಂಧು, ಬಳಗ, ಸ್ನೇಹಿತರು ಎಲ್ಲ ಹೋಯ್ತು. ಅದರ ಜೊತೆನಲ್ಲಿ ನನ್ನ ಸಂವೇದನೆಯೂ ಬಸಿದುಹೋಗುವಂತಾಯ್ತು. ಹೀಗೆ ಮನುಷ್ಯನನ್ನ ಒಂದು ಯಂತ್ರವನ್ನಾಗಿ ಮಾಡ್ತಾ ಇದೆ ಈ ಆಧುನಿಕ ಶಿಕ್ಷಣ.

ಆದ್ದರಿಂದ ಮೊದಲಾಗಿ ನಾವು ಈ ವಿಜ್ಞಾನವನ್ನು ಧರ್ಮದ ಜೊತೆ –ಮತ ಅಲ್ಲ–ಜೋಡಿಸಬೇಕಾಗಿದೆ. ಅದನ್ನು ಲೋಕ ಕಾರುಣ್ಯದ ಜೊತೆ ಜೋಡಿಸಬೇಕಾಗಿದೆ. ನಾವು ದಯವೇ ಧರ್ಮದ ಮೂಲವಯ್ಯ ಅಂತ ಹೇಳಿದ್ವಿ. ನಾವು ದಯೆ ಅಂದ್ರೆ ಏನು ಇಲ್ಲ, Actively thinking about the others. ನನ್ನ ಜೊತೆಯಲ್ಲಿ ಇರುವವನು ನೆಮ್ಮದಿಯಿಂದ ಬಾಳಬೇಕು. ಅವನು ಹಾಗೆ ಬಾಳಿದರೆ ಮಾತ್ರ ನಾನು ನೆಮ್ಮದಿಯಿಂದ ಬಾಳ್ತೀನಿ ಅನ್ನುವ ಧರ್ಮ. ಅದರಲ್ಲಿ ನನ್ನ ಊರು, ನನ್ನ ಕೇರಿ. ನನ್ನ ಕೆರೆ, ತೊರೆ, ಗುಡ್ಡ ಎಲದರ ನೆಮ್ಮದಿಯೂ ಸೇರಿರುತ್ತದೆ. ಅದಕ್ಕೋಸ್ಕರನೇ ಗಾಂಧಿಯವರು ಆಧುನಿಕ ನಾಗರಿಕತೆಯ ವಿರುದ್ಧ ತಮ್ಮ ಚಿಂತನೆಯನ್ನು ಮಂಡಿಸಿದಾಗ ಮೂಲ ಕಾಂಗ್ರೆಸ್‌ನ ಸ್ವರಾಜ್ಯದ ಕಲ್ಪನೆಯನ್ನು ಮೂಲಭೂತವಾಗಿ ಬದಲಾಯಿಸಿ ಕೊಡುವಂತಾಗಿದ್ದು, ಸ್ವರಾಜ್ಯ ಅನ್ನೋದು ಬರೀ ದೇಶಕ್ಕೆ ಸಂಬಂಧಪಟ್ಟ ಕಲ್ಪನೆ ಅಲ್ಲ. ಇಂಗ್ಲಿಷರನ್ನ ಓಡಿಸಿ ನಾವು ಆಳಿಕೊಳ್ಳೋದು ಅಲ್ಲ. ಇಂಗ್ಲಿಷರು ಬಿತ್ತಿಹೋದ ಜೀವನದೃಷ್ಟಿ ಮತ್ತು ಕ್ರಮಗಳನ್ನೂ, ಆ ಮೂಲಕ ರಾಷ್ಟ್ರದ ಕಲ್ಪನೆಯನ್ನೂ ಬದಲಿಸಿಕೊಳ್ಳಬೇಕು. ನನ್ನ ಊರು, ನನ್ನ ಕೇರಿ, ಅದರ ಹಿತವನ್ನು ನಾನು ಮೊದಲು ಗಮನಿಸಬೇಕು. ಹಾಗೆ ಗಮನಕ್ಕೀಡಾದ ಊರುಗಳ ಒಕ್ಕೂಟವೇ ರಾಷ್ಟ್ರವೆನ್ನಿಸಿಕೊಳ್ಳಬೇಕು. ಆದ್ದರಿಂದ ನನ್ನ ಕಾರ್ಯಕ್ಷೇತ್ರ ಏನಿದ್ದರೂ ನನ್ನ ಊರು, ನನ್ನ ಕೇರಿ, ನನ್ನ ಸುತ್ತ–ಮುತ್ತ. ಅವರು ಹೇಳುತ್ತಾರೆ, ಸ್ವರಾಜ್ಯ ಎಂದರೆ ಏನಂತಂದ್ರೆ, ನಿನ್ನ ಕಾಲುಗಳು ಎಷ್ಟು ದೂರ ಹೋಗಬಲ್ಲವೋ ಅಷ್ಟು ಮಾತ್ರ, ವಾಹನಗಳಲ್ಲಿ ಹೋಗುವುದು ಅಲ್ಲ. ನೀನು ಮಾಡಬೇಕಾಗಿರತಕ್ಕ ಕೆಲಸ, ನಿನ್ನ ಕೈ ಎಷ್ಟು ಮಾಡಕ್ಕೆ ಸಾಧ್ಯವೋ ಅಷ್ಟು ಕೆಲಸ. ಸೃಷ್ಟಿ ನಿನಗೆ ಕೊಟ್ಟಿರುವುದು ಕೈ ಮತ್ತು ಕಾಲು, ಕಣ್ಣು ಕಿವಿ. ಇವನ್ನೇ ನೀನು ಬಳಸು. ನಿನ್ನ ಊರಿನ ದನ ಎಷ್ಟು ದೂರ ಹೋಗುತ್ತವೋ ಅಷ್ಟೇ ನಿನ್ನ ಊರು.

ಈ ವಿಚಾರಗಳೆಲ್ಲ ಇವತ್ತಿನ ವಿಜ್ಞಾನದ ವ್ಯಾಪ್ತಿಯ ಎದುರಿನಲ್ಲಿ ಮತ್ತು ನಮ್ಮ ಊರುಗಳು ಬದಲಾಗಿರುವ ಈ ಸಂದರ್ಭದಲ್ಲಿ ನಮಗೆ ತುಂಬಾ ಹಾಸ್ಯಾಸ್ಪದವಾಗಿ ಕಾಣುತ್ತವೆ. ಆದರೆ ದೇಶ, ರಾಷ್ಟ್ರ ಎಂಬ ಕಲ್ಪಿತ ಭಾವನೆಯಲ್ಲಿ ಸಿಲುಕಿ ನಾವು ನಮ್ಮನ್ನ, ನಮ್ಮ ಊರುಗಳನ್ನ, ನಮ್ಮ ನೆರೆಹೊರೆಯನ್ನ ಮರೆತು ಎಲ್ಲವನ್ನೂ ಅಭಿವೃದ್ಧಿ ಎಂಬ ಎಂದೂ ನಿಲ್ಲದ ಕಾಮಗಾರಿ ನಿರ್ವಹಿಸುವ ದಂಧೆಕೋರ ರಾಜಕಾಣಿಗಳಿಗೆ, ಅವರನ್ನು ಸಾಕುವ ಕಂಟ್ರ್ಯಾಕ್ಟುದಾರರಗಳಿಗೆ, ವಾಣಿಜ್ಯೋದ್ಯಮಿಗಳಿಗೆ ವಹಿಸಿಕೊಟ್ಟಿರುವುದರಿಂದಲೇ ಇಂಥ–ಕೊಡಗು, ಕೇರಳಗಳಲ್ಲಾದಂಥ ಅನಾಹುತಗಳಿಗೆ ಒಳಗಾಗ್ತಾ ಇರುವುದು.

ಸ್ವರಾಜ್ಯ ಅಂತಂದ್ರೆ ನಮ್ಮ ಪರವಾಗಿ ಇನ್ನೊಬ್ಬರು ಆಳುವುದಲ್ಲ. ಈ ಪರೋಕ್ಷ ಪ್ರಜಾಪ್ರಭುತ್ವದಲ್ಲಿ ನಾವು ಆಳಳು ಪ್ರತಿನಿಧಿಗಳನ್ನು ಕಳಿಸುತ್ತೇವೆ. ಆ ಪ್ರತಿನಿಧಿಗಳು ಯಾರು ಏನು ಅಂತ ನಮಗೆ ಹತ್ತಿರದಿಂದ ನೋಡಿ ಗೊತ್ತಿರಲ್ಲ. ಸುಮ್ಮೇ ಸುದ್ದಿ, ಪ್ರಚಾರ ಕೇಳಿ ಅಥವಾ ದುಡ್ಡಿನ, ಜಾತಿಯ ಆಮಿಷಗಳಿಗೆ ಒಳಗಾಗಿ ವೋಟ್ ಹಾಕಿ ಕಳಿಸ್ಬಿಟ್ಟೇವೆ ಅಷ್ಟೇ. ಅದಕ್ಕೆ ಬದಲಾಗಿ ಸ್ವತಃ ನೀವೇ ಆಳಬೇಕು. ನಿಮ್ಮ ಗ್ರಾಮವನ್ನ, ಊರನ್ನ ಅಥವಾ ನೆರೆಹೊರೆಯನ್ನ. ಅದು ಸಾಧ್ಯವಾಗುವುದು, ನಾವು ಒಂದು ಚಿಕ್ಕ ಚಿಕ್ಕ ಸಮುದಾಯಗಳಾಗಿ ಸಂಘಟಿತಗೊಂಡು ನಮ್ಮ ಪ್ರತಿನಿಧಿಯನ್ನು ನಮ್ಮ ಆಪ್ತರಲ್ಲೇ ಒಬ್ಬನನ್ನೋ, ಒಬ್ಬಳನ್ನೋ ಆಯ್ದುಕೊಳ್ಳುವ ವ್ಯವಸ್ಥೆ ಆದಾಗ. ಆಗ ಅವನು ಅಥವಾ ಅವಳು ಸಮುದಾಯದ ಇಚ್ಛೆಗೆ ವಿರುದ್ಧ ಹೋಗಲು ಸಾಧ್ಯವಾಗದಷ್ಟು ನೈತಿಕ ಒತ್ತಡ ನಿರ್ಮಾಣ ಆಗುತ್ತೆ. ರಾಷ್ಟ್ರ ಕಟ್ಟುವ ಎಲ್ಲ ಕೆಲಸ ಇಲ್ಲಿಂದ ಹೀಗೆ ಆರಂಭವಾಗಬೇಕು, ನೋಟ ನಮ್ಮೂರಿನಿಂದ ರಾಷ್ಟ್ರದೆಡೆಗೆ; ರಾಷ್ಟ್ರದೆಡೆಯಿಂದ ನಮ್ಮೂರೆಡೆಗಲ್ಲ. 'ಸ್ವರಾಜ್ಯ'ದ ಅರ್ಥ ಇದು.

ಇದಕ್ಕೆ ಒಂದು ದೊಡ್ಡ ಸಂಕಲ್ಪ ಬೇಕು. ಪ್ರಗತಿ ಅಂದರೆ ವಿವೇಕವೇ ಹೊರತು, ವಿನಾಶವಲ್ಲ ಎಂಬ ಹೊಸ ಅರಿವು ಬೇಕು. ಈ ಅರಿವು ಮೂಡಿಸುವ ಕೆಲಸ ಇಂಥ ವೇದಿಕೆಗಳಿಂದ ನಡೆಯಬೇಕು. ಇಂತಹ ಸ್ವರಾಜ್ಯದಲ್ಲಿ ಊರು ಅಥವಾ ಸಮುದಾಯ ಮುಖ್ಯವಾಗಿ ಅನ್ಯ ಆಕರ್ಷಣೆಗಳು ನಿಯಂತ್ರಿತವಾಗುತ್ತವೆ. ನಮ್ಮೂರ ಪ್ರಾಕೃತಿಕ ಸಂಪತ್ತು ಮುಖ್ಯವೆನಿಸುತ್ತದೆ. ಅವನ್ನು–ನಮ್ಮ ಬೆಟ್ಟ ಗುಡಗ್ಗಗಳನ್ನು, ನದಿಗಳನ್ನು, ಅದರ ಮರಳನ್ನು, ಗೋಮಾಳಗಳನ್ನು, ಸೊಪ್ಪು ಬೆಟ್ಟಗಳನ್ನು, ನಮ್ಮ ಪ್ರಾಣಿ ಪಕ್ಷಿಗಳನ್ನು ಕಾಪಾಡಿಕೊಂಡು ನಾವೆಷ್ಟು ನೆಮ್ಮದಿಯಿಂದ ಬದುಕಬಹುದೋ ಅಷ್ಟು ಸುಖ–ಸೌಲಭ್ಯಗಳೊಂದಿಗೆ ಬದುಕುವ ಹೊಸ ಕ್ರಮ ನಿಧಾನವಾಗಿಯಾದರೂ ಆರಂಭವಾಗಬಹುದು.

ಇಂದು ಗಾಂಧಿ ಹೇಳುವ ಕನಿಷ್ಠ ಅಗತ್ಯಗಳ ಸಂತ ಜೀವನ ಅಸಾಧ್ಯ ಎನ್ನಿಸಬಹುದು. ಆದರೆ ಅವರ ಶಿಷ್ಯ ರಾಮಮನೋಹರ ಲೋಹಿಯಾ ಹೇಳುವ ಒಂದು ಸರಳ ಸಭ್ಯಜೀವನಮಟ್ಟ ಎಲ್ಲರಿಗೂ ಸಮ್ಮತಾರ್ಹವೆನಿಸಬಹುದು. ಅದು ಅತಿಗಳಿಗೆ ಹೋಗಿ ಪರಿಸರವನ್ನು ಹಾಳು ಮಾಡದಂಥಹ 'ಅಭಿವೃದ್ಧಿ' ಚಟುವಟಿಕೆಗಳಿಂದ ಕೂಡಿದ ಸಂಯಮದ, ಸಾಮುದಾಯಿಕತೆಯ ಮಿತಿಗಳುಳ್ಳ ಸರಳ ಸುಂದರ ಬದುಕು. ಇದನ್ನು ಲೋಹಿಯಾ ತಮ್ಮ ಸೌಂದರ್ಯ ಮೀಮಾಂಸೆಯಲ್ಲಿ ತನ್ನ ಮಿತಿಗಳಲ್ಲೇ ಪರಿಪೂರ್ಣವಾದ ಸೌಂದರ್ಯ ಎಂದು ಕರೆಯುತ್ತಾರೆ. ಪುರಾಣದ ಶ್ರೀರಾಮ ಮತ್ತು ನಮ್ಮ ಕಾಲದ ಗಾಂಧಿ ಇದಕ್ಕೆ ಎರಡು ಪ್ರತೀಕಗಳು. ಇದು ನಮ್ಮ ಮಿತಿಗಳ ವಿವೇಕದಲ್ಲಿ ಇದ್ದರೆ ಮಾತ್ರ ಸೌಂದರ್ಯ. ಆದರೆ ನಾವು ಈ ವಿವೇಕದ ಅರಿವಿನಾಚೆ ಹೋಗಿ, ಬೇರೆಯವರು ನಮ್ಮ ಹಾಗೆ ಬದುಕೋದಕ್ಕೆ ಸಿದ್ಧರಿದ್ದಾರಾ? ಅವರನ್ನು ಕನ್ವರ್ಟ್ ಮಾಡಕ್ಕೆ ಆಗತ್ತಾ ನಾವು? ಅಂತ ಯೋಚನೆ ಮಾಡೋದಕ್ಕೆ ಶುರು ಮಾಡಿದರೆ ಮತ್ತೆ ನಾವು ಅದೇ ಅನಾಹುತಕಾರಿ ಸ್ಥಿತಿಗೆ ವಾಪಸ್ ಬರ್ತೀವಿ. ಆದ್ದರಿಂದ ಸಣ್ಣ ಸಣ್ಣ ಸಮುದಾಯಗಳಾಗಿ ನಾವು ಬಾಳುವ ಮಾದರಿ ಕಂಡುಕೊಳ್ಳದ ಹೊರತು, ಇದು ಬಹಳ ದೊಡ್ಡ ಸವಾಲೇ ಆದರೂ, ಇದೆಲ್ಲ ಆಗಿಹೋಗದ ವ್ಯವವಹಾರ ಎಂದು ಯೋಚಿಸುವ ಸಿನಿಕರಾಗದೆ, ಆ ಕಡೆ ಗುರಿ ಇಟ್ಟುಕೊಂಡು ನಾವು ಯೋಚನೆ ಮಾಡದ ಹೊರತು, ಕ್ರಮವಾಗಿ ಒಂದೊಂದೇ ಹೆಜ್ಜೆ ಇಡದ ಹೊರತುಈ ಕೇರಳ, ಕೊಡಗು ಅಥವಾ ಚಾಮರಾಜನಗರ ಯಾವುದೂ ಉಳಿಯುವುದಿಲ್ಲ. ಸರ್ವನಾಶಕ್ಕೆ ನಿಧಾನವಾಗೋ ದಿಢೀರೆಂದೋ ಗೊತ್ತಿಲ್ಲ ನಾವು ಸಿದ್ಧವಾಗಬೇಕಾಗ್ತದೆ. ನಮಸ್ಕಾರ.

**(ಮುಗಿಯಿತು)**

**( ಇದು ಸೆಪ್ಟಂಬರ್ ಹತ್ತರಂದು ಚಾಮರಾಜನಗರದ ದೀನಬಂಧು ಮತ್ತು ಇತರ ಸ್ಥಳೀಯ ಸಂಘ–ಸಂಸ್ಥೆಗಳ ಆಶ್ರಯದಲ್ಲಿ ಪರಿಸರ ವಿಕೋಪಗಳ ಬಗ್ಗೆ ಆಯೋಜಿಸಿದ್ದ 'ಹಸಿರು ಚಾಮರ' ಎಂಬ ಕಾರ್ಯಾಗಾರದಲ್ಲಿ ಆಡಿದ ಮಾತುಗಳ ಬರಹ ರೂಪ)**

(ಧ್ವನಿಯಿಂದ ಲಿಪಿಗೆ : **ರೇಖಾಂಬ ಟಿ.ಎಲ್**)



# ಲೋಕಸಭಾ ಚುನಾವಣೆ: ಆಯ್ಕೆ ಯಾರು? ಏಕೆ?



ಮತ್ತೊಮ್ಮೆ ಲೋಕಸಭಾ ಚುನಾವಣೆಗಳಿಗೆ ದೇಶ ಸಿದ್ಧವಾಗುತ್ತಿದೆ. ಸ್ವಾತಂತ್ರ್ಯೋತ್ತರ ಭಾರತದ ಇತಿಹಾಸದ ಎರಡನೇ ಮಹತ್ವದ ಚುನಾವಣೆ ಇದು ಎಂದು ಹೇಳಲಾಗುತ್ತಿದೆ. ಮೊದಲ ಮಹತ್ವದ ಚುನಾವಣೆ ೧೯೭೭ರಲ್ಲಿ ನಡೆದಿತ್ತು. ಅದು ಸರ್ವಾಧಿಕಾರದಿಂದ ದೇಶವನ್ನು ಬಿಡುಗಡೆಗೊಳಿಸಬಲ್ಲ ಚುನಾವಣೆಯಾಗಿತ್ತು. ಜನತೆಯ ಆದೇಶದಂತೆ ದೇಶ ಸರ್ವಾಧಿಕಾರದಿಂದ ಬಿಡುಗಡೆ ಹೊಂದಿತು ಕೂಡ. ಈಗ ದೇಶದ ಮುಂದೆ ಅದೇ ಸವಾಲಿದೆ ಎಂಬೊಂದು ಅಭಿಪ್ರಾಯವಿದೆ. ದೇಶ ಮೋದಿಯವರ ಆಡಳಿತ ಶೈಲಿಯ ಮೂಲಕ ಸರ್ವಾಧಿಕಾರದತ್ತ ಜಾರುತ್ತಿದೆ ಎಂಬ ಆತಂಕ ಕೆಲವು ವಲಯಗಳಲ್ಲಾದರೂ ದಟ್ಟವಾಗಿದೆ. ವಿಪರ್ಯಾಸವೆಂದರೆ ಆಗ ಸರ್ವಾಧಿಕಾರದ ವಿರುದ್ಧ ಹೋರಾಡಿದ್ದಾಗಿ ಹೇಳಿಕೊಳ್ಳುವ ಆರೆಸ್ಸೆಸ್ ಈಗ ಪ್ರಭುತ್ವದ ಬೆನ್ನಿಗಿದೆ. ಸರ್ವಾಧಿಕಾರ ಹೇರಿದ್ದ ಕಾಂಗ್ರೆಸ್ ಈಗ ಸರ್ವಾಧಿಕಾರದ ವಿರುದ್ಧ ಕೂಗು ಹಾಕುತ್ತಿದೆ! ಇತಿಹಾಸ ಮರುಕಳಿಸುವುದೇ ಹೀಗೆ, ವಿಪರ್ಯಾಸದೊಂದಿಗೆ ಎಂಬ ಮಾತು ಹೇಗೂ ಇದೆಯಲ್ಲ!

ಆದರೆ ಇಂದು ಆಯ್ಕೆ ಗ್ರಹೀತ ಸರ್ವಾಧಿಕಾರ ಮತ್ತು ಪ್ರಜಾಪ್ರಭುತ್ವದ ನಡುವೆ ಎಂದು ಹೇಳುವಷ್ಟು ಅದು ಸರಳವಾಗಿಲ್ಲ. ಮೋದಿ ೨೦೧೪ರ ಚುನಾವಣೆಗಳಲ್ಲಿ ಹುಟ್ಟಿಸಿದ್ದ ಸದಾಶಯ ಇಂದು ಸಾಕಷ್ಟು ಬತ್ತಿಹೋಗಿದೆ. ಕಾರಣ, ಅವರು ಬಹು ವಿಶ್ವಾಸದಿಂದ ಭರವಸೆ ನೀಡಿದ್ದ 'ಒಳ್ಳೆಯ ದಿನ'ಗಳ ಸುಳಿವಿಲ್ಲ! ಅಭಿವೃದ್ಧಿಯ ಕಥೆಯೂ ನಿರಾಶಾದಾಯಕವಾಗಿದೆ. ಕೋಮು ಸೌಹಾರ್ದದ ಮತ್ತು ನಾಗರಿಕ ಹಕ್ಕುಗಳ ಪರಿಸ್ಥಿತಿ ಆತಂಕಕಾರಿಯಾಗಿದೆ. ಆದರೂ ಒಂದಷ್ಟು ಭಾಗದ ಜನತೆಗೆ ಮೋದಿಯವರ ಬಗ್ಗೆ ಭರವಸೆ ಪೂರ್ಣ ಹೋಗಿಲ್ಲ. ಮೋದಿ ಅವರ ರಾಷ್ಟ್ರೀಯ ರಾಜಕಾರಣ ಪ್ರವೇಶಕ್ಕೆ ಕಾರಣವಾದ ಈ ಹಿಂದಿನ ಸರ್ಕಾರದ ಆಡಳಿತದ ಕೆಟ್ಟ ನೆನಪುಗಳು ಇವರಲ್ಲಿನ್ನೂ ದಟ್ಟವಾಗಿರುವಂತಿದೆ. ಮೋದಿ ಪರ ಪ್ರಚಾರದ ಅಬ್ಬರವೂ ಅದು ಮಸುಕಾಗದಂತೆ ನೋಡಿಕೊಳ್ಳುತ್ತಿದೆ. ಜೊತೆಗೆ ಹೊಸ ಆಡಳಿತ ಸಂಸ್ಕೃತಿಯ ಹಾಡನ್ನೂ ಹಾಡಿ ಜನರನ್ನು ರಂಜಿಸಲಾತ್ತಿದೆ. ಆದರೆ ಮೋದಿ ಸರ್ಕಾರ ಹೋಗಬೇಕು ಎಂದು ಹೇಳುತ್ತಿರುವ ವಿರೋಧಪಕ್ಷಗಳು ಈ ಕೆಟ್ಟ ನೆನಪನ್ನು ಅಳಿಸುವ ಮತ್ತು ಈ ಹೊಸ ಆಡಳಿತ ಸಂಸ್ಕೃತಿಯ ಹಾಡಿನ ಶೃತಿ ಪ್ರಜಾಪ್ರಭುತ್ವದ ಲಯಕ್ಕೆ ಹೊಂದುತ್ತಿಲ್ಲ ಎಂಬುದನ್ನು ಜನರಿಗೆ ಮನದಟ್ಟು ಮಾಡುವ ಯಾವ ಗಂಭೀರ ಪ್ರಯತ್ನವನ್ನೂ ಮಾಡುತ್ತಿಲ್ಲ. ಬಹುಶಃ ಅವಕ್ಕೆ ಆ ಸೂಕ್ಷ್ಮತೆಯಾಗಲೀ, ಶಕ್ತಿಯಾಗಲೀ ಇಲ್ಲ. ಕರ್ನಾಟಕ ಸರ್ಕಾರ ನಡೆಯುತ್ತಿರುವ ಪರಿಯನ್ನು ನೋಡಿದರೇ ಇದು ಗೊತ್ತಾಗುವಂತಿದೆ

ಆದರೆ ಮುಖ್ಯ ಪ್ರಶ್ನೆ ಪ್ರಜಾಪ್ರಭುತ್ವದ, ಅದರ ಅಸ್ತಿವಾರದ ತತ್ವಗಳ ಮತ್ತು ಸಂಸ್ಥೆಗಳ ಉಳಿವಿನದು. ಏಕವ್ಯಕ್ತಿ ಅಧಿಕಾರದ ವ್ಯವಸ್ಥೆ ಅದು ಎಷ್ಟೇ ದಕ್ಷವಾಗಿದ್ದರೂ, ಯಾವತ್ತೂ ಮಾನವತೆಗೆ ಅಪಾಯಕಾರಿಯೇ. ಈ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳ ಮಹಾಘಟಬಂಧನ ಜನರ ವಿಶ್ವಾಸ ಗಳಿಸಿ ಗೆಲ್ಲುವ ಸಾಧ್ಯತೆ ಎಷ್ಟು? ಹೇಳುವುದು ಕಷ್ಟ. ಈ ಕುತೂಹಲದೊಂದಿಗೆ ಪತ್ರಿಕೆ ನಮ್ಮ ಕೆಲ ಆಯ್ದ ಪ್ರಾಜ್ಞ ಓದುಗರಿಗೆ ಇಂದಿನ ರಾಜಕೀಯ ಪರಿಸ್ಥಿತಿಯನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಿ ಅಭಿಪ್ರಾಯಗಳನ್ನು ತಿಳಿಸಲು ಕೇಳಿತು. ನಮ್ಮ ಪತ್ರಿಕೆಯ ಓದುಗರಾಗಿ, ಹೆಚ್ಚಿನವರು ಸಹಜವಾಗಿಯೇ ಮೋದಿ ಬೇಡ ಎನ್ನುತ್ತಿದ್ದಾರೆ. ಆದರೆ ಬೇಕು ಎನ್ನುವವರೂ ಕೆಲವರಿದ್ದಾರೆ. ಏಕೆಂದು ಓದಿ ನೋಡಿ.–ಸಂ.





## ಸ್ಥಿರತೆ ಎಂಬುದು ಯಥಾಸ್ಥಿತಿವಾದ



**ಈ** ದೇಶದ ದುರದೃಷ್ಟವೆಂದರೆ ಓರ್ವ ಬೂಸಿ ಬಸವನನ್ನು ಪ್ರಗತಿಯ ಹರಿಕಾರ ಎಂದು ಬಿಂಬಿಸಿರುವುದು ಮತ್ತು ಎಲ್ಲ ಮಾಧ್ಯಮ ವರ್ಗದವರು ಈತನ ಬಗ್ಗೆ ಡೋಲು ಬಾರಿಸುತ್ತಿರುವುದು. ಈತನ ವೈಶಿಷ್ಟ್ಯ ಸಾಧನೆಗಳೇನು? ಎಂದರೆ, ಸ್ವಾಯತ್ತ ಸಂಸ್ಥೆಗಳಾದ ಆರ್.ಬಿ.ಐ., ಸಿ.ಬಿ.ಐ. ಮತ್ತು ನ್ಯಾಯಾಂಗಗಳ ಬೆನ್ನು ಮುರಿದಿರುವುದು ಹಾಗೂ ಅವುಗಳ ಮಾನ ಹರಾಜಿಗೆ ಹಾಕಿರುವುದು. ಇವರ ಅಭಿವೃದ್ಧಿ ಏನೆಂದರೆ ಗುಂಪು ದಾಳಿ–ಹತ್ಯೆ ಇಡೀ ದೇಶದಲ್ಲಿ ಭಯದ ವಾತಾವರಣವನ್ನು ಸೃಷ್ಟಿಸಿರುವುದು. ರಾಷ್ಟ್ರೀಯತೆ, ದೇಶಪ್ರೇಮ ಮತ್ತು ಪಾಕಿಸ್ಥಾನದ ಮೇಲಿನ ದ್ವೇಷ ಯಾವ ಉದ್ಯೋಗವನ್ನು ಸೃಷ್ಟಿಸಲಾರದು.

ಚರ್ಚಾಪಟುವಿನಂತೆ ವಾಕ್ಚತುರತೆಯನ್ನು ಪ್ರದರ್ಶಿಸುವುದೇ ಆರ್ಥಿಕ ಜ್ಞಾನವೆಂದು ತಿಳಿದಿರುವ ಹುಂಬ ಹಣಕಾಸಿನ ಮಂತ್ರಿಯಿಂದ ಏನು ಸಾಧಿಸಲಾದೀತು? ಮೋದಿಯವರು ಸೋಲದಿದ್ದರೆ ದೇಶಕ್ಕೆ ಉಳಿಗಾಲವಿಲ್ಲವೆಂಬ ಸೂಚನೆಯು ಭಾರತದ ಗ್ರಾಮಾಂತರ ಜನಗಳಲ್ಲಿ ಮನೆ ಮಾಡಿದೆ ಎಂದು ನನಗೆ ಅನಿಸುತ್ತದೆ.

ಸ್ಥಿರ ಸರ್ಕಾರವನ್ನು ಕೊಡಲು ಸಾಧ್ಯವಾಗದಿದ್ದರೂ ಮಹಾಘಟ ಬಂಧನವು ಸರ್ಕಾರ ರಚಿಸಬೇಕೆಂಬುದು ನನ್ನ ಆಸೆ. ಇವರು ಜಗಳವಾಡಿಕೊಂಡರೂ ಮೋದಿಗಿಂತ ಒಳ್ಳೆಯ ಆಡಳಿತ ದೊರಕುತ್ತದೆ ಎನ್ನುವುದು ನನ್ನ ಅನಿಸಿಕೆ. ಸ್ಥಿರತೆ ಎಂಬುದು ಯಥಾಸ್ಥಿತಿವಾದ, ಸ್ಥಿರತೆಯನ್ನು ಆಶಿಸುವುದು ಏಕವ್ಯಕ್ತಿ ಸರ್ಕಾರವನ್ನು ಆಹ್ವಾನಿಸಿದಂತೆ. ಈ ದುರಂತದಿಂದ ಪಾರಾಗಲು ಮಹಾ ಘಟಬಂಧನವೇ ದಾರಿ.

**–ಪ್ರೊ. ಬಿ.ಎನ್.ಶ್ರೀರಾಮ**
**ನಿವೃತ್ತ ಪ್ರಾಧ್ಯಾಪಕರು ಮತ್ತು ಹಿರಿಯ ಸಮಾಜವಾದಿಗಳು ಮೈಸೂರು**

## ಅಸ್ಥಿರತೆ ಉಂಟಾದರೂ ಜನ ಸಹಿಸಿಕೊಳ್ಳಬಹುದು....

**ನ**ರೇಂದ್ರ ಮೋದಿ ಸರ್ಕಾರದ ಮೇಲೆ ಭ್ರಷ್ಟಾಚಾರದ ಆರೋಪವಿಲ್ಲ. ಅದು ರಾಷ್ಟ್ರೀಯ ಹೆದ್ದಾರಿ ನಿರ್ಮಾಣ, ವ್ಯಾಪಾರ ವಹಿವಾಟುಗಳು ಸುಗಮವಾಗಿ ನಡೆಯುವಂತೆ ನಿಯಮಗಳ ಪರಿಷ್ಕರಣ ಮತ್ತು ಜಿಎಸ್‌ಟಿ ಮೂಲಕ ಸರ್ಕಾರದ ಆದಾಯದ ಹೆಚ್ಚಳದ ಕ್ರಮಗಳನ್ನು ಕೈಗೊಂಡಿದ್ದು ಇವುಗಳಿಂದಾಗಿ ಮುಂದೆ ಸರ್ಕಾರ ಜನಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳಲು ನೆರವಾಗಬಹುದು. ಆದರೆ 'ಮೋದಿಯವರು ಒಬ್ಬ ಜನಸಮ್ಮತಿವಾದಿ(ಪಾಪ್ಯುಲಿಸ್ಟ್) ರಾಜಕಾರಣಿ ಎಂದು ಹೇಳಬಹುದು. ಜನರಿಗೆ ಬೇಕಾದ ಸೌಲಭ್ಯ–ಸವಲತ್ತುಗಳನ್ನು ಅವರಿಗೆ ನ್ಯಾಯಸಮ್ಮತ ಎನ್ನುವ ರೀತಿಯಲ್ಲಿ ತಾನು ಒದಗಿಸಲು ಶ್ರಮಿಸುತ್ತಿದ್ದೇನೆ. ಅದು ಜನಕ್ಕೆ ಒಪ್ಪಿಗೆಯಾಗುವುದು ಮುಖ್ಯವೇ ಹೊರತು ನನ್ನ ರೀತಿ ನೀತಿಗಳನ್ನು ಪ್ರಶ್ನಿಸುವವರಿಗೆ ಆ ಬಗ್ಗೆ ಉತ್ತರಿಸುವ ಅಗತ್ಯವಿಲ್ಲ ಎಂಬುದು ಅವರ ಧೋರಣೆ. ಆ ಧೋರಣೆ ಜನತಂತ್ರ ವ್ಯವಸ್ಥೆಗೆ ವಿರುದ್ಧವಾಗಿರುವುದರಿಂದ ಮೋದಿಯವರು ಜನತಂತ್ರಕ್ಕೆ ಲಾಯಕ್ಕಾದವರಲ್ಲ ಎಂಬುದು ಸ್ಪಷ್ಟ ಅವರು ಮುಂದಿನ ಚುನಾವಣೆಯಲ್ಲಿ ಗೆದ್ದರೆ ದೊಡ್ಡ ಅನಾಹುತವೇನೂ ಆಗುವುದಿಲ್ಲ. ನಮ್ಮ ಸರ್ಕಾರ ಆಡಳಿತ ವ್ಯವಸ್ಥೆ ಜನಸ್ಪಂದಿಯಾಗದ್ದರೆ ಮೋದಿಯಂಥವರು ಜನಮನ್ನಣೆ ಗಳಿಸುತ್ತಲೇ ಇರಲಿಲ್ಲ ಎಂಬುದನ್ನು ನಾವು ಮನಗಾಣಬೇಕು



ಮೋದಿ ಅವರ ನೋಟು ಅಮಾನ್ಯೀಕರಣದ ನಿರ್ಧಾರದಿಂದ ಸಾಮಾನ್ಯ ರೈತರು ಕೂಲಿಕಾರ್ಮಿಕರು, ಸಣ್ಣ ವ್ಯಾಪಾರಿಗಳೆಲ್ಲ ಅಪಾರ ಕಷ್ಟ ನಷ್ಟಗಳನ್ನು ಅನುಭವಿಸಿದರು. ಆದರೂ ಅವರು ಬೀದಿಗಿಳಿದು ಪ್ರತಿಭಟಿಸಲಿಲ್ಲ. ಹಾಗೆಯೇ ಈ ಸರ್ಕಾರಿ ಇಲಾಖೆಗಳು ಸಂಗ್ರಹಿಸಿರುವ ಮಾಹಿತಿಯ ಪ್ರಕಾರ ದೇಶದಲ್ಲಿ ನಾಲ್ಕು ದಶಕಗಳಲ್ಲಿ ಕಂಡಿರದಿದ್ದಂತಹ ನಿರುದ್ಯೋಗದ ಪ್ರಮಾಣ ಇದ್ದರೂ ಜನ ಪ್ರತಿಭಟಿಸುತ್ತಿಲ್ಲ. ಮೋದಿಯವರು ಸೋತು ಹತ್ತಾರು ಪಕ್ಷಗಳ ಸಮ್ಮಿಶ್ರದ ಸರ್ಕಾರ ಬಂದು ಅಸ್ಥಿರತೆ ಉಂಟಾದರೂ ಜನ ಸಹಿಸಿಕೊಳ್ಳಬಹುದು. ನಮ್ಮಲ್ಲಿ ಅತಿ ಹೆಚ್ಚು ವಿದ್ಯಾವಂತ ಜಾಗೃತ ಜನರಿರುವ ಕೇರಳದಲ್ಲಿ ೨೫ ವರ್ಷಗಳಿಂದ ಸಮ್ಮಿಶ್ರ ಸರ್ಕಾರಗಳೇ ಆಳುತ್ತಿವೆಯಲ್ಲ? ಅಲ್ಲಿನ ಜನರು ಉದ್ಯೋಗ ಹುಡುಕಿಕೊಂಡು ಸರ್ವಾಧಿಕಾರಿ ಶೇಖ್‌ಗಳ ನಾಡುಗಳಿಗೆ ವಲಸೆ ಹೋಗುತ್ತಿಲ್ಲವೇ? ಇನ್ನು ಮುಂದೆ ಇಡೀ ಭಾರತದೆಲ್ಲಡೆಯ ಜನರಿಗೆ ಇದೇ ಪರಿಹಾರವಾಗಬಹುದು.

**–ಗಿರೀಶ. ವಿ,. ವಾಘ್**
**ನಿವೃತ್ತ ಪತ್ರಕರ್ತರು ಮತ್ತು ಚಿಂತಕರು, ಬೆಂಗಳೂರು**

## ಮಹಾಘಟಬಂಧನ ಒಂದು ಭ್ರಾಂತಿ!

**ಗ**ಮನೀಯ ಸಾಧನೆಗಳು ಆಗಿಲ್ಲ ಎನ್ನಿಸಿದರೂ, ಏನೂ ಆಗಿಯೇ ಇಲ್ಲ ಎನ್ನುವುದು ಸಹ ಸತ್ಯಕ್ಕೆ ದೂರವಾದ ಮಾತು. ಚುನಾವಣೆಯ ವಾಗ್ದಾನಗಳು ಕೇವಲ ಪ್ರಚಾರ ತಂತ್ರ; ಅವು ಸಂಪೂರ್ಣವಾಗಿ ಕಾರ್ಯಗತವಾಗುತ್ತವೆ ಎಂದು ನಿರೀಕ್ಷಿಸುವುದು ಅಸಮರ್ಥನೀಯ. ಈ ಮಾತು ಮೋದಿ ಅವರ ಭರವಸೆಗಳು



ಮತ್ತು ಅವರ ಸರ್ಕಾರದ ನೆರವೇರಿಕೆಗಳಿಗೆ ಕೂಡಾ ಅನ್ವಯಿಸುತ್ತದೆ. ಸರ್ಕಾರದ ನೇರ ಭ್ರಷ್ಟಾಚಾರದ ಮಾತುಗಳು ಅಷ್ಟಾಗಿ ಕೇಳಿ ಬಾರದೆ ಇದ್ದದ್ದು ಸಮಾಧಾನದ ವಿಚಾರ.

ಅಭಿವೃದ್ಧಿಯ ಹೊಸ ಶಕೆ ಇನ್ನೂ ಮರೀಚಿಕೆ. ಮೋದಿಯವರ ಏಕ ಪಾತ್ರಾಭಿನಯ ಸರ್ವಾಧಿಕಾರಕ್ಕಿಂತ ಭಿನ್ನ ಸ್ವರೂಪದ್ದು; ಸರ್ವಾಧಿಕಾರದೊಂದಿಗೆ ಸಮೀಕರಿಸಲಾಗದು. ಫ್ಯಾಸಿಸ್ಟ್ ಪ್ರವೃತ್ತಿಗಳು ಕಾರ್ಯರೂಪದಲ್ಲಿ ಆಚರಣೆಗೊಂಡ ನಿದರ್ಶನಗಳು ಅಪರೂಪ. ಮೋದಿ ಗೆದ್ದರೆ ದೇಶಕ್ಕೆ ಗಂಡಾಂತರ ಎನ್ನುವ ಮಾತನ್ನು ಜನ ಅಷ್ಟಾಗಿ ಸ್ವೀಕರಿಸುತ್ತಾರೆ ಎನ್ನುವ ನಿರೀಕ್ಷೆ ಅತಿಶಯವಾದದ್ದು.

ಮಹಾಘಟಬಂಧನ ಒಂದು ಭ್ರಾಂತಿ. ವಿಭಿನ್ನ ನಂಬಿಕೆಗಳ, ವೈಯಕ್ತಿಕ ಆಸಕ್ತಿಗಳ ನಾಯಕರು, ತಮ್ಮ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶದ ಒಳಿತಿಗಾಗಿ ಒಂದಾಗುತ್ತಾರೆ ಎಂದು ಭಾವಿಸುವುದು ಮಾನವ ಸಹಜ ಪ್ರವೃತ್ತಿಗಳ ನಿರಾಕರಣೆ. ಆ ಬಗೆಯ ಪರಾರ್ಥತೆ ನನ್ನ ಕಲ್ಪನೆಗೆ ಮೀರಿದ್ದು. ನಮ್ಮದೇ ದೇಶದಲ್ಲಿ ತುರ್ತು ಪರಿಸ್ಥಿತಿಯ ನಂತರದಲ್ಲಿ ನಡೆದ ಘಟನೆಗಳೇ ಇದಕ್ಕೆ ಸ್ಪಷ್ಟ ಪುರಾವೆ.

**–ಪ್ರೊ. ಎಚ್.ಎಸ್. ಈಶ್ವರ**

**ನಿವೃತ್ತ ಸಮೂಹ ಸಂವಹನ ಪ್ರಾಧ್ಯಾಪಕರು, ಬೆಂಗಳೂರು**

## ಅಸ್ಥಿರತೆಯೊಂದೇ ಅಧಿಕಾರವನ್ನು ನಿಯಂತ್ರಣದಲ್ಲಿಡಬಹುದು



**ನ**ರೇಂದ್ರ ಮೋದಿ ಸರಕಾರ ದೃಢ ಮತ್ತು ಸ್ಪಷ್ಟ ನಿರ್ಧಾರಗಳನ್ನು ಕೈಗೊಳ್ಳುವ ಮಟ್ಟಿಗೆ ವಿಭಿನ್ನವಾಗಿಯೂ, ವಿಶಿಷ್ಟವಾಗಿಯೂ ಗುರುತಿಸಲ್ಪಡಬೇಕು ನಿಜ. ಪ್ರಶ್ನೆ ಇರುವುದು ಅದು ಯಾವ ರೀತಿಯ ನಿರ್ಧಾರಗಳನ್ನು ದೃಢವಾಗಿಯೂ, ಸ್ಪಷ್ಟವಾಗಿಯೂ ತೆಗೆದುಕೊಂಡಿತು ಎನ್ನುವುದು. ಸರಕಾರಗಳು ಯಾವತ್ತೂ ಮಾಡುವ ಮತ್ತು ಮಾಡಲೇ ಬೇಕಾದ ಕೆಲ ಕೆಲಸಗಳಿವೆ. ಅದನ್ನು ಹಿಂದಿನ ಸರಕಾರಕ್ಕೆ ಹೋಲಿಸಿದರೆ ಮೋದಿ ಸರಕಾರ ಸ್ವಲ್ಪ ಕ್ಷಮತೆಯಿಂದ, ಎದ್ದು ಕಾಣುವ ಹಾಗೆ ಮಾಡಿದೆ. ಅದು ಹಳೆಯ ಐಟಿಐ ಮಾದರಿಯನ್ನು ಮೀರಿ ಕೌಶಲ್ಯ ತರಬೇತಿ ಪ್ರಾರಂಭಿಸಿದ್ದಿರಬಹುದು ಅಥವಾ ಹಳೆಯ ಗ್ರಾಮ ನೈರ್ಮಲ್ಯಕ್ಕೆ ಸ್ವಚ್ಛ ಭಾರತ ಎಂಬ ಮೆರುಗು ನೀಡಿದ್ದಿರಬಹುದು.

ಇವುಗಳಾಚೆಗೆ ಮೋದಿ ಸರಕಾರ ಕೈಗೊಂಡ ದೊಡ್ಡ ನಿರ್ಧಾರಗಳನ್ನೆಲ್ಲಾ ನೋಡಿದರೆ ಅದಕ್ಕೆ ಅಭಿವೃದ್ಧಿಯ ವಿಚಾರದಲ್ಲಾಗಲೀ, ಪ್ರಜಾತಂತ್ರದ ವಿಚಾರದಲ್ಲಾಗಲೀ ಭರವಸೆ ಮೂಡಿಸುವಂತಹಾ ದೂರದೃಷ್ಟಿಯಾಗಲೀ, ಪ್ರಬುದ್ಧವಾದ ಚಿಂತನೆಗಳಾಗಲೀ ಇದೆ ಎನ್ನುವುದಕ್ಕೆ ಯಾವುದೇ ಪುರಾವೆ ಕಾಣಿಸುತ್ತಿಲ್ಲ. ಎಪ್ಪತ್ತು ವರ್ಷ ದೇಶದಲ್ಲಿ ಏನೂ ಆಗಿಲ್ಲ, ಮೋದಿ ಪ್ರಧಾನಿಯಾದ ನಂತರವೇ ಎಲ್ಲವೂ ಪ್ರಾರಂಭವಾದದ್ದು, ಮೋದಿ ಇಲ್ಲದೆ ಹೋದರೆ ಮತ್ತೆ ಕರಾಳಯುಗ ಪ್ರಾರಂಭವಾಲಿದೆ ಎನ್ನುವ ಮಾತು ಹಾಸ್ಯಾಸ್ಪದವಾಗಿದೆ ಮಾತ್ರವಲ್ಲ ಅಹಂಕಾರದಿಂದ ಕೂಡಿದೆ. ಐದು ವರ್ಷಗಳಲ್ಲಿ ಮೋದಿಯವರ ಸ್ಥಿರ ಸರಕಾರ ದೇಶದ ಸಾಂಸ್ಥಿಕ ಸ್ವರೂಪದ ಮೇಲೆ ಮಾಡಿದ ಪ್ರಹಾರ ನೋಡಿದರೆ ಸ್ಥಿರ ಸರಕಾರ ಯಾಕಾದರೂ ಬೇಕು ಎನ್ನುವ ಪ್ರಶ್ನೆ ಮೂಡುತ್ತವೆ. ಪ್ರಾಯಃ ಅಸ್ಥಿರತೆಯೊಂದೇ ಅಧಿಕಾರವನ್ನು ನಿಯಂತ್ರಣದಲ್ಲಿಡಬಹುದು ಅನ್ನಿಸುತ್ತದೆ. ಸರಕಾರವೊಂದು ಒಂದಿಷ್ಟು ಮಾನವೀಯವಾಗಿ ಇರಬಹುದಾದರೆ, ಸ್ವಲ್ಪ ಅಸ್ಥಿರತೆ, ಸ್ವಲ್ಪ ಅದಕ್ಷತೆ, ಸ್ವಲ ಆರ್ಥಿಕ ಹಿಂದುಳಿದಿರುವಿಕೆ ಇತ್ಯಾದಿಗಳೆಲ್ಲಾ ಕೆಟ್ಟದಲ್ಲ.

**–ಎ. ನಾರಾಯಣ**

**ಸಾರ್ವಜನಿಕ ನೀತಿ ಮತ್ತು ಅರ್ಥಶಾಸ್ತ್ರ ಪ್ರಾಧ್ಯಾಪಕರು, ಅಂಕಣಕಾರರು, ಬೆಂಗಳೂರು**

## ಪುನಃ ಬಂದರೆ ಹೆಚ್ಚು ಪ್ರಬುದ್ಧತೆ ತೋರಬಹುದು



**ಮೋ**ದಿ ಆಡಳಿತ ಜನರ ನಿರೀಕ್ಷೆಗಳನ್ನೆಲ್ಲ ಹುಸಿ ಮಾಡಿದೆ ಎಂಬ ಮಾತು ಸಮಂಜಸವಲ್ಲ. ಚುನಾವಣೆ ಕಾಲಕ್ಕೆ ಏನೇ ಭರವಸೆ ನೀಡಿದ್ದರೂ, ಸಮಸ್ಯೆಗಳಿಗೆ ಮಾಂತ್ರಿಕ ಪರಿಹಾರಗಳನ್ನು ನೀಡಲಾಗದು. ಈ ಹಿಂದಿದ್ದ ಸರಕಾರದ ಸಾಧನೆಗಳಿಗೆ ಹೋಲಿಸಿದಲ್ಲಿ ೧) ಆಡಳಿತದಲ್ಲಿ ಪಾರದರ್ಶಕತೆ ಇದೆ. ಜನಪರ ಕಾಳಜಿ ಇದೆ, ಹಗರಣಗಳಿಲ್ಲ. ರಫೇಲ್ ವ್ಯವಹಾರ ಕುರಿತು ಮಾತ್ರ ಮೋದಿಯವರ ನಡೆ ಪೂರ್ಣ ಸಂಶಯಾತೀತವಾಗಿಲ್ಲ. ಆದರೆ ವ್ಯವಸ್ಥೆ ಸುಧಾರಣೆ, ಕರ ಸಂಗ್ರಹದ ತಳಹದಿಯನ್ನು ವಿಸ್ತರಿಸಿದುದು, ತಿಂದುಂಡು ಎದ್ದು ಹೋಗಿದ್ದ ಹಿಂದಿನ ಅವಧಿಯ ರಾಜಕಾರಣಿಗಳ ಬೆನ್ನು ಬಿದ್ದದ್ದು, ಹೊರದೇಶಗಳಲ್ಲಿ ದೇಶದ ಗೌರವ ಹೆಚ್ಚಿಸಿದ್ದು ಅವರ ವಿಶೇಷ ಸಾಧನೆಗಳೆನ್ನಬಹುದು.

ಅಭಿವೃದ್ಧಿಗೆ ಮೋದಿ ಆಡಳಿತ ಹೆಚ್ಚು ಒತ್ತು ಕೊಟ್ಟದ್ದು ನಿಜ. ಅದೇ ಕಾಲಕ್ಕೆ ಕೇಸರಿ ಪಡೆಯ ಕೆಲ ವರ್ತನೆಗಳು ಆತಂಕಕಾರಿಯಾಗಿದ್ದಿದು ಇಂಥ ವರ್ತನೆಗಳು ಎಲ್ಲ ಸರ್ಕಾರಗಳ ಕಾಲದಲ್ಲೂ ಆಗಿವೆ. ಮೋದಿ ಮತ್ತೆ ಬಂದರೆ ದೇಶಕ್ಕೆ ಉಳಿಗಾಲವಿಲ್ಲ ಅನ್ನುವ ಮಾತು ಸರಿಯಲ್ಲ. ಅವರು ಪುನಃ ಬಂದರೆ ಹೆಚ್ಚು ಪ್ರಬುದ್ಧತೆ ತೋರಬಹುದು.

ಯಾವುದೇ ಸೈದ್ಧಾಂತಿಕ ಬಲವಿಲ್ಲದ, ಕೇವಲ ಮೋದಿ ವಿರೋಧ ಮತ್ತು ಸ್ವಹಿತಾಸಕ್ತಿಗೋಸ್ಕರ ಒಂದಾಗಿರುವ ಮಹಾಘಟಬಂಧನದ ನೇತಾರರು ಸಮರ್ಥ ಪರ್ಯಾಯ ನೀಡಬಲ್ಲರೆಂದು ಅನಿಸುವದಿಲ್ಲ. ಅವರಲ್ಲಿ ಬಹಳಷ್ಟು ಜನ ಕಳಂಕಿತರು.ಅಂಥ ಸರಕಾರಗಳ ಅವಧಿಯಲ್ಲಿಯೇ ಹಿಂದೆ ಹೆಚ್ಚು ಹಗರಣಗಳು ನಡೆದದ್ದು.

**–ವೆಂಕಟೇಶ ಮಾಚಕನೂರ**

**ನಿವೃತ್ತ ಶಿಕ್ಷಣ ಆಯುಕ್ತರು ಮತ್ತು ಲೇಖಕರು, ಧಾರವಾಡ**

## ಘಟಬಂಧನ ನಮ್ಮ ಅನಿವಾರ್ಯ ಕರ್ಮ



**ಮೋ**ದಿಯ ಆಡಳಿತ ವೈಶಿಷ್ಟ್ಯವೆಂದರೆ ಮಾತಿನ ಮೋಡಿ. ಭಾವವೇಶದ ಅಬ್ಬರದ ಮಾತುಗಳಲ್ಲಿ ಒಳ್ಳೆಯ ಆಡಳಿತ ಕೊಡುವ ಆಶಯವಿದ್ದರೂ ಪ್ರಯೋಗದಲ್ಲಿ ವೈಫಲ್ಯತೆಯೇ ಎದ್ದುಕಾಣುತ್ತಿದೆ. ಅಂತರಾಷ್ಟ್ರೀಯ ಸಂಬಂಧಗಳ ವಿಷಯದಲ್ಲಿ ಸ್ವಲ್ಪ ಯಶಸ್ಸು ಸಾಧಿಸಿರುವುದು ಕಂಡುಬರುತ್ತದೆ. ಆದರೆ ದೇಶದ ರಾಜಕಾರಣ ಮತ್ತು ಆಡಳಿತಗಳ ವಿಷಯದಲ್ಲಿ ಹೊಸದೊಂದು ಪಲ್ಲಟ ತರಲು ಅವರು ಸಮರ್ಥರಾಗಿದ್ದಾರೆ ಎನಿಸುವುದಿಲ್ಲ. ಅಭಿವೃದ್ಧಿಯ ಹೊಸ ಶಕೆಯ ಮಾತು ಉತ್ಪ್ರೇಕ್ಷೆಯಿಂದ ಕೂಡಿದೆ. ವಾಸ್ತವದಲ್ಲಿ ಅಂತಹ ಸಾಧನೆಯೇನೂ ಕಾಣುವುದಿಲ್ಲ.

ಮೋದಿ ಆಡಳಿತದಲ್ಲಿ ಪ್ಯಾಸಿಸ್ಟ್ ಶಕ್ತಿಗಳು ವಿಕಾರವಾಗಿ ಬೆಳೆಯುತ್ತಿರುವುದು ಸತ್ಯ. ಸರ್ಕಾರವನ್ನು ವಿರೋಧಿಸುವ ಜನರನ್ನು ದಮನ ಮಾಡುವ; ಸಾಧ್ಯವಾದರೆ ಮುಗಿಸಿಬಿಡುವ ಕೋಮುಶಕ್ತಿಗಳು ಅಟ್ಟಹಾಸದಿಂದ ಮೆರೆಯುತ್ತಿದ್ದಾರೆ ಎನಿಸಿದೆ!.

3. ಮೋದಿ ಸೋತರೆ ಅಧಿಕಾರಕ್ಕೆ ಬರುವ ಸಾಧ್ಯತೆ ಇರುವ ಮಹಾಘಟಬಂಧನ ಸ್ಥಿರ ಸರ್ಕಾರ ಕೊಡುವ ಯಾವ ಭರವಸೆಯು ಕಾಣುತ್ತಿಲ್ಲ. ಅಹಂ-ಪ್ರತಿಷ್ಠೆಗಳಲ್ಲಿ ಪಕ್ಷಗಳು ನರಳುತ್ತಿವೆ ಎನಿಸುತ್ತಿದೆ. ಆದರೆಮೋದಿಯವರ ಅಟ್ಟಹಾಸ-ಹಾವಳಿಗಳ ಬದಲು ಈ ವ್ಯವಸ್ಥೆಯೇ ಮೇಲು ಎನ್ನುವ ಅನಿವಾರ್ಯ ಕರ್ಮ ನಮ್ಮದಾಗಿದೆ.

**–ಪ್ರೊ. ಬಿ. ಪಿ. ವೀರೇಂದ್ರಕುಮಾರ್**

**ಪ್ರಾಧ್ಯಾಪಕರು ಮತ್ತು ಚಿಂತಕರು, ಬೆಂಗಳೂರು**

## ಫ್ಯಾಸಿಸ್ಟ್ ಪ್ರವೃತ್ತಿ ಹೆಚ್ಚಾಗಿದೆ ಎಂದೇ ಅರ್ಥ



**ಕ**ಳೆದ ಐದು ವರ್ಷಗಳಲ್ಲಿ ಮೋದಿಯವರ ಸಾಧನೆ ಎಂದರೆ ನಮ್ಮ ಜನ ಸಾಮಾನ್ಯರು ಬ್ಯಾಂಕ್ ಖಾತೆ ತೆರೆಯುವುದನ್ನು , ಎ.ಟಿ.ಎಂ ಕಾರ್ಡುಗಳನ್ನು ಬಳಸಿ ಬ್ಯಾಂಕ್ ಬ್ಯಾಲೆನ್ಸ ನೋಡುವುದನ್ನು ಕಲಿತದ್ದು. ಸರ್ಕಾರಿ ಯಂತ್ರದ ಕಾರ್ಯ ರೂಪದಲ್ಲಿ ಯಾವುದೇ ಬದಲಾವಣೆಯ ತಳಮಟ್ಟದಲ್ಲಿ ನನಗೆ ಸ್ಪಷ್ಟವಾಗಿ ಕಂಡಿಲ್ಲ. ಆದರೆ ಜನಸಾಮಾನ್ಯರ ಶಬ್ದ ಭಂಡಾರ ಒಂದಿಷ್ಟು ಶ್ರೀಮಂತಗೊಂಡಿತು ಎಂಬುದರಲ್ಲಿ ಎರಡು ಮಾತಿಲ್ಲ. ಉದಾಹರಣೆಗೆ 'ಸರ್ಜಿಕಲ್ ಸ್ಟ್ರೈಕ್' 'ಲಿಂಚಿಂಗ್' 'ಡಿ ಮಾನಿಟೈಸೇಶನ್' ಎಂಬಂತಹ ಹೊಸ ಶಬ್ದಗಳನ್ನು ಕಲಿತರು. ಗಾಂಧಿಗಿಂತ ಗಾಂಧಿ ಕನ್ನಡಕವನ್ನು ಗುರುತಿಸುವುದನ್ನು ಜನ ಕಲಿತರು.

'ಅಭಿವೃದ್ಧಿ' ಎಂಬ ಶಬ್ದ ನಮ್ಮನ್ನು ನಮ್ಮ ಗೋರಿಗಳ ಕಡೆಗೆ ವೇಗದಲ್ಲಿ ಕರೆದೊಯ್ಯುವುದನ್ನು ವಿವರಿಸುವ ಶಬ್ದ ಎಂಬುದು ನನ್ನ ಇತ್ತೀಚಿನ ತಿಳಿವಳಿಕೆ. ನೀವೂ ಅದನ್ನು ಒಪ್ಪುವುದಾದರೆ ಅಭಿವೃದ್ಧಿಯ ಹೊಸ ಶಕೆಯನ್ನು ಮೋದಿ ಪ್ರಾರಂಭಿಸಿದ್ದಾರೆ ಎನ್ನುವುದಕ್ಕಿಂತ ಅದರ ವೇಗವನ್ನು ಹೆಚ್ಚಿಸಿದ್ದಾರೆ ಎಂಬುದನ್ನು ಒಪ್ಪಬಲ್ಲೆ. ಹಲವು ದಶಕದ ಗೆಳೆಯರೇ ಅವರ ಗೆಳೆಯರನ್ನು ಸಾಮಾಜಿಕ ಮಾಧ್ಯಮಗಳಲ್ಲಿ 'ಅರ್ಬನ್ ನಕ್ಸಲ್', 'ರಾಷ್ಟ್ರ ವಿರೋಧಿ' ಎಂದು ಕರೆಯತೊಡಗಿದರೆ ಫ್ಯಾಸಿಸ್ಟ್ ಪ್ರವೃತ್ತಿ ಹೆಚ್ಚಾಗಿದೆ ಎಂದೇ ಅರ್ಥ.

ಈಗಿನ ದುರಂತವೆಂದರೆ ಮಹಾಘಟಬಂಧನವೆಂಬ ದುರ್ಬಲ ಗುಂಪಿನ ಮೇಲೆ ನಂಬಿಕೆ ಇಡಬೇಕಾದ ಪ್ರಸಂಗವೇ ಆಗಿದೆ. ಇವರು ಮೋದಿಗಿಂತ ವಾಸಿ ಎನ್ನಲಾಗುವುದಿಲ್ಲ. ಆದರೆ ಅವರವರಲ್ಲೇ ಕಚ್ಚಾಡುತ್ತ ಕೂಡುವುದರಿಂದ ಜನ ಸಾಮಾನ್ಯರ ತಂಟೆಗೆ ಅವರು ಬರಲಾರರು ಎಂಬ ನಂಬಿಕೆ.

**–ಸಂತೋಷ ಕೌಲಗಿ**

**ಕಾರ್ಯದರ್ಶಿ, ಜನಪದ ಟ್ರಸ್ಟ್, ಸಾಮಾಜಿಕ ಕಾರ್ಯಕರ್ತರು ಮೇಲುಕೋಟೆ**

## ಹೇಳಲು ಉಳಿದಿರುವುದಾದರೂ ಏನು?



**ಮೋ**ದಿ ತನ್ನ ಮಾತು ಉಳಿಸಿಕೊಂಡಿಲ್ಲ; ಕಪ್ಪು ಹಣ ಹಿಂದಕ್ಕೆ ತರಲಿಲ್ಲ, ಉದ್ಯೋಗ ಸೃಷ್ಟಿ ಆಗಿಲ್ಲ. ದುರ್ಬಲರು ಮತ್ತಷ್ಟು ಅಂಚಿಗೆ ಸರಿದಿದ್ದಾರೆ, ತಾವು ಹಿಂದಿಗಿಂತ ಈಗ ಚೆನ್ನಾಗಿದ್ದೇವೆ ಎಂಬ ಭ್ರಮೆಯಲ್ಲಿ ಮುಳುಗಿದ್ದಾರೆ.... ಮೋದಿಯ ಜಾಣ ನಡಿಗೆಯೋ... ವ್ಯವಸ್ಥೆಯ ದೌರ್ಬಲ್ಯವೋ ಯಾರೂ ಎಚ್ಚರಗೊಳ್ಳುತ್ತಿಲ್ಲ. ಕನಸು ಕಾಣುತ್ತಿದ್ದಾರೆ. ನಮಗೆ ಅಸಹಿಷ್ಣತೆ ಬೇಡ, ಅಸಮಾನತೆ ಬೇಡ, ಜಾತಿ ಧರ್ಮಗಳ ಕಾರಣದಿಂದ ಜನ ಸಾಯುವುದು ಬೇಡ. ಎಂದಮೇಲೆ ನಮಗೆ ಮೋದಿ ಬೇಡ.

ಆದರೆ ಪರ್ಯಾಯವೇನು? ಎಂದೂ ಕಾಲಿಗೆ ಮಣ್ಣನ್ನು ಮೆತ್ತಿಸಿಕೊಳ್ಳದೆ ಓಡಾಡುವ ರಾಹುಲ್‌ಗಾಂಧಿ ಪರ್ಯಾಯವೇ? ತಂಬಾಕು ಬೆಳೆಗಾರರ ಕಷ್ಟಕ್ಕೆ ಸ್ಪಂದಿಸಿ ಕಣ್ಣೀರು ಹಾಕುವ ನಮ್ಮ ದೇವೇಗೌಡರು ಪರ್ಯಾಯವೇ? ತನ್ನ ಹುಟ್ಟುಹಬ್ಬಕ್ಕೆ ದುಡ್ಡುಕೊಡಲಿಲ್ಲ ಎಂಬ ಕಾರಣಕ್ಕೆ ಪ್ರಾಮಾಣಿಕ ಅಧಿಕಾರಿಯ ಹತ್ಯೆಗೆ ಕಾರಣವಾದರೂ ತನ್ನ ಹುಟ್ಟುಹಬ್ಬವನ್ನು ಯಾವ ಅಪರಾಧಿ ಪ್ರಜ್ಞೆಯೂ ಇಲ್ಲದೇ ವೈಭವದಿಂದ ಆಚರಿಸುವ ಮಾಯಾವಾತಿಯವರು ನಮಗೆ ಪರ್ಯಾಯವೇ? ದುಷ್ಟರ ಸಂಘ ಮಾಡಿಯಾದರೂ ಒಳಿತಿನ ಕನಸು ಕಾಣುವ ನಿತೀಶ್ ಕುಮಾರ್ ರವರಿಗೆ ದೇಶ ರಾಜಕಾರಣದಲ್ಲಿ ದೊಡ್ಡ ಭವಿಷ್ಯ ಇದೆಯೆ? ಇದೆಲ್ಲಾ ಬರೀ ಮಾತು. "ಗೊಣಗಿ ಗೊಣಗಿ ಕ್ರಾಂತಿ ತಪ್ಪಿಸಿ" ಎಂಬ ಪಾ.ವೆಂ. ಅವರ ಮಾತಿನಂತೆ ಮಾತು ಖರ್ಚುಮಾಡಿ ನಮಗೆ ಹೇಳಲು ಉಳಿದಿರುವುದಾದರೂ ಏನು? 'let nature take its own course' ಎಂದು ಹೇಳಿ ಸುಮ್ಮನಾಗಬೇಕಲ್ಲವೆ?

**–ಜಿ.ಎಸ್. ಜಯದೇವ,**
**ಧರ್ಮದರ್ಶಿ, ದೀನಬಂಧು ಟ್ರಸ್ಟ್ ಮತ್ತು ಶಿಕ್ಷಣ ತಜ್ಞರು, ಚಾಮರಾಜನಗರ**

## ಏಕಪಕ್ಷದ ಸರ್ಕಾರಕ್ಕಿಂತ ಸಂಮಿಶ್ರ ಸರ್ಕಾರಗಳೇ ಹೆಚ್ಚು ಜನಪರ



**ಕ**ಳೆದ ಐದು ವರ್ಷಗಳ ಮೋದಿಯವರ ಆಡಳಿತಾವಧಿ ಶೇಕಡ ೮೦ ಭರವಸೆಗಳ ಕಾಲ; ಎದುರಾಳಿಯನ್ನು ಸ್ಥಾನದ ಘನತೆ ಮರೆತು ಹಂಗಿಸುವ, ಕಿಚಾಯಿಸುವ, ರಾಜಕೀಯ ವಿರೋಧಿಗಳ ನೈತಿಕ ಸ್ಥೈರ್ಯ ಕುಂದಿಸಲು ನಿರಂತರವಾಗಿ ಪ್ರಯತ್ನಿಸಿದ ಕಾಲ; ಪೊಳ್ಳು ಭರವಸೆಗಳ ಮೂಲಕ – ಉದ್ಯೋಗ ಸೃಷ್ಟಿಸಲು ವಿಫಲವಾದ ನಂತರ– ಅಮಾಯಕರನ್ನು ವಿಶೇಷವಾಗಿ ಯುವಜನತೆಯನ್ನು ಪಾಕಿಸ್ತಾನದ ವಿರುದ್ಧ ನಿಲ್ಲಿಸಿದ ಕಾಲ! ನೋಟು ಅಮಾನ್ಯೀಕರಣವು ಅರ್ಥ ವ್ಯವಸ್ಥೆಗೆ ಮತ್ತು ಪ್ರಗತಿಗೆ ಭಾರೀ ಹೊಡೆತ ನೀಡಿದ್ದರೂ ದೇಶದ ಆರ್ಥಿಕ ಪರಿಸ್ಥಿತಿ ಸದೃಢವಾಗಿದೆ, ಕಪ್ಪು ಹಣವನ್ನು ಹೊರತೆಗೆಯಲಾಗಿದೆ, ಉಗ್ರರಿಗೆ ಹಣಕಾಸಿನ ನೆರವು ನಿಂತಿದೆ, ದೇಶ ಎಂದೂ ಕಂಡರಿಯದ ರೀತಿಯಲ್ಲಿ ಅಭಿವೃದ್ಧಿಯಾಗಿದೆ, ಸುರಕ್ಷಿತವಾಗಿದೆ ಎಂದು ಜಾಹೀರಾತು ಮತ್ತು ಮನ್ ಕಿ ಬಾತ್ ಮೂಲಕ ಸುಳ್ಳುಗಳನ್ನು ಬಿತ್ತಿದ ಕಾಲ! ಬಹಳ ಮುಖ್ಯವಾಗಿ, ಫ್ಯಾಸಿಸಂನ ಆತಂಕ ಹುಟ್ಟಿಸುವಂತಹ ಏಕವ್ಯಕ್ತಿ ಸರ್ಕಾರದ ಕಾಲ!

ಸದ್ಯದ ರಾಜಕೀಯ ಯಾವುದೇ ತತ್ವ ಸಿದ್ಧಾಂತಗಳ ಮೇಲೆ ನಡೆಯುತ್ತಿಲ್ಲ. ಆದರೂ ವಿರೋಧ ಪಕ್ಷಗಳಿಗೆ ಸದ್ಯ ಆತಂಕಕಾರಿ ಆಡಳಿತದ ನೇತೃತ್ವ ವಹಿಸಿರುವ ಕೋಮುವಾದಿ ಪಕ್ಷದ ವಿರುದ್ಧ ಸಂಘಟಿತ ಹೋರಾಟ ನಡೆಸಲು ಅವಕಾಶ ಇದೆ. ೧೯೯೧ರಿಂದ ಇಲ್ಲಿಯವರೆಗೆ ಕೇಂದ್ರದಲ್ಲಿ ಎಲ್ಲ ಸರ್ಕಾರಗಳು ಸಂಮಿಶ್ರ ಸರ್ಕಾರಗಳೇ!! ಹೀಗಾಗಿ ಮಹಾಘಟಬಂಧನ ಕುರಿತು ಮೋದಿಯವರ ಲೇವಡಿಯನ್ನು ನಿರ್ಲಕ್ಷಿಸಿ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ರಾಜಕೀಯ ಪರ್ಯಾಯವೊಂದನ್ನು ಕಂಡುಕೊಳ್ಳಲು ಸಾಧ್ಯವಿದೆ.ಎಷ್ಟೋ ವೇಳೆ ಏಕಪಕ್ಷದ ಸರ್ಕಾರಕ್ಕಿಂತ ಸಂಮಿಶ್ರ ಸರ್ಕಾರಗಳೇ ಜನಪರ ಕೆಲಸ ಮಾಡಿರುವ ನಿದರ್ಶನ ಇದೆ. ಹೀಗಾಗಿ ದೀರ್ಘಾಯುಷಿಯಾದ ಬಿಜೆಪಿ ನೇತೃತ್ವದ ಸರ್ಕಾರಕ್ಕಿಂತ ಅಲ್ಪಾಯುಷಿಯಾದರೂ ಚಿಂತೆಯಿಲ್ಲ ಜನಪರ ಕೆಲಸ ಮಾಡುವ ಸಂಮಿಶ್ರ ಸರ್ಕಾರವೇ ಬರಲಿ!!

**–ಪ್ರೊ. ಎಂಜಿ. ಚಂದ್ರಶೇಖರಯ್ಯ**
**ನಿವೃತ್ತ ಪ್ರಾಧ್ಯಾಪಕರು ಮತ್ತು ಲೇಖಕರು, ದೊಡ್ಡಬಳ್ಳಾಪುರ**

## ಮುಕ್ತ ಚರ್ಚೆ ಸಾಧ್ಯವಿರುವ ರಾಜಕೀಯ ವಾತಾವರಣ ಬೇಕಿದೆ

**ಬ**ಹುಮತದಿಂದ ಅಧಿಕಾರಕ್ಕೆ ಬಂದ ಬಿಜೆಪಿ ಐದು ವರ್ಷಗಳ ಸ್ಥಿರ ಸರ್ಕಾರವನ್ನು ಒದಗಿಸಿದೆ. ಮೋದಿ ಪ್ರಧಾನಮಂತ್ರಿಯಾದ ಹೊಸತರಲ್ಲಿ ಒಳ್ಳೆಯ ದಿನಗಳ ಭರವಸೆಯನ್ನು ಹುಟ್ಟಿಸಿದ್ದು, ಅದರಲ್ಲಿ ಎಷ್ಟು ಸಫಲರಾಗಿದ್ದಾರೆ ಎಂಬುದಕ್ಕೆ ಉತ್ತರ ಕೊಡುವ ಕಾಲ ಬಂದಿದೆ. ಆಳುವ ವರ್ಗದವರು ಕಾರ್ಪೋರೇಟ್ ವಲಯದ ಉದ್ಯಮಿಗಳ ಹಿತಾಸಕ್ತಿಯನ್ನು ರಕ್ಷಣೆ ಮಾಡುತ್ತಿರುವುದರಿಂದ ಸಾಮಾನ್ಯ ಜನರನ್ನು ಕೇಳುವವರೇ ಇಲ್ಲದಂತಾಗಿದೆ. ಜನರಿಗೆ ಉದ್ಯೋಗ ಒದಗಿಸುವುದು, ರೈತರ ಸಮಸ್ಯೆಗಳಿಗೆ ಶಾಶ್ವತ ಯೋಜನೆಗಳನ್ನು ಜಾರಿಗೆ ತರುವ ವಿಷಯಗಳೆಲ್ಲಾ ಹಿನ್ನೆಲೆಗೆ ಸರಿದಿವೆ. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರನಾಶದಿಂದ ಆಗಿರುವ ಅನಾಹುತದಿಂದ ಜನರು ತೊಂದರೆಗೀಡಾಗಿರುವುದನ್ನು ಮರೆತಂತೆಯೇ ಇದೆ, ಚರಿತ್ರೆಯ ವಿಷಯಗಳನ್ನೆತ್ತಿಕೊಂಡು, ಬಾಬರ್, ನೆಹರೂ ಬಗ್ಗೆ ಮಾತಿನ ಸಮರ ನಡೆಯುತ್ತಿರುವುದರಿಂದ ಜನರಿಗೆ ಏನು ಬೇಕಾಗಿದೆ ಎಂಬುದರ ಬಗ್ಗೆ ಗಂಭೀರವಾದ ಚರ್ಚೆಗಳಾಗುತ್ತಿಲ್ಲ. ಅಲ್ಪಸಂಖ್ಯಾತರಲ್ಲಿ ಅಸುರಕ್ಷತೆಯ ಮನಸ್ಥಿತಿ ಉಂಟಾಗಿದ್ದು, ಇದನ್ನು ಹೋಗಲಾಡಿಸುವಂತಹ ಸರ್ಕಾರ ಬರಬೇಕು.



ಅಧಿಕಾರ, ಹಣಕ್ಕಾಗಿ ಪಕ್ಷಾಂತರ ಮಾಡುವಂತಹವರೇ ಇರುವಾಗ ವಿರೋಧ ಪಕ್ಷಗಳ ಮೈತ್ರಿಕೂಟವಾದ ಮಹಾಘಟಬಂಧನ ಸಹ ಐದು ವರ್ಷ ಉಳಿಯುವುದು ಕಷ್ಟ ಎಂಬ ಮಾತಲ್ಲಿ ಹುರುಳಿಲ್ಲದಿಲ್ಲ. ಕರ್ನಾಟಕದಲ್ಲೇ ಮಹಿಳೆಯೊಬ್ಬರ ರಾಜಕೀಯ ಪ್ರವೇಶಕ್ಕೆ ಅವಮಾನಕರವಾದ ರೀತಿಯಲ್ಲಿ ವಿರೋಧಿಸಿರುವವರು ಸಹ ಮೈತ್ರಿಕೂಟಕ್ಕೆ ಸೇರಿದವರೇ. ಮಹಿಳೆಯರಿಗೆ ಶೇಕಡಾ ೩೩ ರಷ್ಟು ಮೀಸಲಾತಿ ಒದಗಿಸದಿದ್ದರೆ ನಮ್ಮ ದೇಶದ ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಜಯಗಳಿಸಲು ಸಾಧ್ಯವೇ ಇಲ್ಲವೇನೋ! ಇದನ್ನೆಲ್ಲಾ ಮುಕ್ತವಾಗಿ ಚರ್ಚಿಸಲು ಸಾಧ್ಯವಿರುವ ರಾಜಕೀಯ ವಾತಾವರಣ ಅಗತ್ಯ ಎಂಬ ಕಾರಣಕ್ಕಾದರೂ ಬದಲಾವಣೆ ಬೇಕು. ಸ್ಥಿರತೆ–ಅಸ್ಥಿರತೆಯ ಪ್ರಶ್ನೆ ನಂತರದ್ದು; ಸದ್ಯಕ್ಕೆ ದಾರಿ ತಪ್ಪಿಸುವಂಥದ್ದು.

**–ಕೆ. ಪದ್ಮಾಕ್ಷಿ**
**ನಿವೃತ್ತ ಸರ್ಕಾರಿ ಅಧಿಕಾರಿ, ಮಹಿಳಾ ಜಾಗೃತಿ ಕಾರ್ಯಕರ್ತೆ, ಶಿವಮೊಗ್ಗ**

## ಪ್ರಾಮಾಣಿಕತೆ, ಸ್ವಚ್ಛತೆ ವ್ಯಸನಗಳಾಗಬಾರದು



**ಸಾ**ರ್ವತ್ರಿಕ ಚುನಾವಣೆ ಹೊಸ್ತಿಲಲ್ಲಿ ನಿಂತು ದೇಶದ ವಾಸ್ತವಿಕ ಸ್ಥಿತಿ–ಗತಿಗಳನ್ನು ಹಾಗೂ ಜನತೆಯ ಮುಂದಿರುವ ಆಯ್ಕೆಗಳನ್ನು ಗಮನಿಸಿದಾಗ ಖೇದವೆನಿಸುತ್ತದೆ. ಗಾಂಧೀಜಿಯ ನೆರಳಿನ ನೆರವಿನಿಂದ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿದು ತ್ಯಾಗಿಗಳು, ಮೇಧಾವಿಗಳನ್ನೊಳಗೊಂಡ ಹಿರಿಯರಿಂದ ದೇಶದ ಆಡಳಿತಕ್ಕೆ ಭದ್ರ ತಳಪಾಯ ಹಾಕಿತು. ಆದರೆ . ಇತ್ತೀಚಿನ ದಶಕಗಳಲ್ಲಿ ಕಾಂಗ್ರೆಸ್ಸಿನ ಧೋರಣೆ ತಾನು ಆಳುವುದಕ್ಕಾಗಿ ಅನುಭವಿಸುವದಕ್ಕಾಗಿ ಎಂಬಂತೆ ಬದಲಾಗಿ ಜನತೆಯಿಂದ ದೂರ ಸರಿದಿದೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯನ್ನು ಅರಗಿಸಿಕೊಳ್ಳಲಾರದೇ ಅವರನ್ನು ಹತ್ಯೆಗೈದ ಹಿಂಸಾ ಪರಂಪರೆಯ ಧಾರೆಗಳಿಂದ ಉದಯಿಸಿದ ಬಿಜೆಪಿ ಪಕ್ಷವು ಕಾಂಗ್ರೆಸ್ಸಿನಿಂದ ತೆರವಾದ ಸ್ಥಳದಲ್ಲಿ ಕಾಲೂರಿ ಗಟ್ಟಿ ಧ್ವನಿಯ ಭಾವುಕ ಘೋಷಣೆಗಳ ಮೂಲಕ ಅಧಿಕಾರ ಪಡೆದು ೫ ವರ್ಷಗಳನ್ನು ಪೂರೈಸಿ ಮರಳಿ ಹೂಂಕರಿಸುತ್ತಿದೆ. ತನ್ನ ಅಧಿಕಾರ ಅವಧಿಯ ಸಾಧನೆಗಳಿಗೆ ಬದಲಾಗಿ ದೇಶದ ಸೈನಿಕ ಪಡೆಯನ್ನೇ ಪ್ರಚಾರ ಸಾಮಗ್ರಿ ಮಾಡಿಕೊಂಡು ತನ್ನ ದೇಶ ಪ್ರೇಮವನ್ನು ಮೆರೆಯುತ್ತಿದೆ. ಈ ಪಕ್ಷದ ಆಡಳಿತದಲ್ಲಿ, ದೇಶದ ಸ್ವಾಯತ್ತ ಸಂಸ್ಥೆಗಳಾದ ಶ್ರೇಷ್ಠ ನ್ಯಾಯಾಲಯ, ರಿಜರ್ವ ಬ್ಯಾಂಕ್, ಚುನಾವಣಾ ಆಯೋಗ ಹಾಗೂ ಉನ್ನತ ತನಿಖಾ ಸಂಸ್ಥೆಗಳ ಕುರಿತು ಬೀದಿಬೀದಿಯಲ್ಲಿ ಚರ್ಚಿಸುವಂತಾಗಿರುವುದು ದೇಶದ ಭವಿಷ್ಯದ ದೃಷ್ಟಿಯಿಂದ ಆತಂಕಕಾರಿ ಬೆಳವಣಿಗೆಯಾಗಿದೆ. ಮನೆಯ ಚಿಕ್ಕಪುಟ್ಟ ಭಾಗಗಳಿಗೆ ಜಖಂ ಆದರೆ ಸರಿಪಡಿಸಬಹುದು. ಆದರೆ ಮನೆಯ ತಳಪಾಯಕ್ಕೆ ಧಕ್ಕೆಯಾಗದಂತೆ ದೇಶದ ಸಂವಿಧಾನದ ಆಶಯದಂತೆ ಮತ ಚಲಾಯಿಸಬೇಕಾಗಿದೆ. ಹಾಗಾಗಿ–

೧. ವ್ಯಕ್ತಿಗತ ಬಲಿಷ್ಠ ನಾಯಕ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ.
೨. ಸೂಜಿ ಹುಡುಕಲು ಬಣವಿಗೆ ಬೆಂಕಿ ಹಚ್ಚಲಾಗದು.
೩. ಪ್ರಾಮಾಣಿಕತೆ, ಸ್ವಚ್ಛತೆ ವ್ಯಸನಗಳಾಗಬಾರದು.
೪. ಧರ್ಮ, ದೇಶ, ಭಾಷೆ ಇವೆಲ್ಲವುಗಳಿಗಿಂತ ಮಾನವನ ಬದುಕು ಮುಖ್ಯ

**–ಅಜ್ಜಪ್ಪ ಬಿರಡಿ**
**ಸಹಕಾರಿ ಸಂಸ್ಥೆಯೊಂದರ ನಿವೃತ್ತ ಕಾರ್ಯದರ್ಶಿ ಮತ್ತು ರೈತರು, ಗೋಕಾಕ**

(೧೪ನೇ ಪುಟಕ್ಕೆ

# ಮೋದಿ ಸರ್ಕಾರ ಮತ್ತೆ ಏಕೆ ಬೇಡ? ಕೆಲ ಗಣ್ಯರ ಅಭಿಪ್ರಾಯಗಳು



ನರೇಂದ್ರ ಮೋದಿಯವರು ರಫೇಲ್ ಒಪ್ಪಂದದಲ್ಲಿ ವೈಯಕ್ತಿಕ ಹಸ್ತಕ್ಷೇಪ ನಡೆಸಿರುವುದು, ನೋಟು ರದ್ದತಿ ಮಾಡಿ ಕಪ್ಪುಹಣವಿದ್ದ ಕುಳಗಳಿಗೆ ಅದನ್ನು ಬಿಳಿ ಮಾಡಿಕೊಳ್ಳಲು ಅವಕಾಶ ನೀಡಿದ್ದಲ್ಲದೆ ಹಲವು ಸಣ್ಣಪುಟ್ಟ ಉದ್ಯೋಗ-ಉದ್ಯಮಗಳನ್ನು ನಾಶ ಮಾಡಿದ್ದು, ಉದ್ಯೋಗ ಸೃಷ್ಟಿಗೆ ಪೂರಕವಾಗದ ಆರ್ಥಿಕ ನೀತಿ ಜಾರಿ ಇವೆಲ್ಲವೂ ಅವರ ಜನವಿರೋಧಿ ಆಡಳಿತ ನೀತಿಗೆ ಹಿಡಿದ ಕೈಗನ್ನಡಿ. ಸಂಸತ್ತಿಗೆ ಭಾಷಣ ಮಾಡಲು ಮಾತ್ರ ಬಂದು ಅದರ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸದೆ ಅವಜ್ಞೆ ತೋರುವ ಮತ್ತು ಅವರ ರಾಜಕೀಯ ಜೀವನದಲ್ಲಿ ಒಮ್ಮೆಯೂ ಪತ್ರಿಕಾ ಗೋಷ್ಠಿ ನಡೆಸದೆ ನೇರ ಸಂವಾದಗಳಿಂದ ತಪ್ಪಿಸಿಕೊಳ್ಳುವ ಅವರ ವರ್ತನೆ ಅವರ ವ್ಯಕ್ತಿತ್ವ ಪ್ರಜಾಸತ್ತಾತ್ಮಕವೂ ಅಲ್ಲ, ದಿಟ್ಟವಾದದೂ ಅಲ್ಲ, ದಕ್ಷವಾದದ್ದೂ ಅಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ.

**–ಎಚ್.ಎಸ್. ದೊರೆಸ್ವಾಮಿ,** ಹಿರಿಯ ಸ್ವಾತಂತ್ರ್ಯಹೋರಾಟಗಾರರು



ಮೋದಿ ನಾಟಕದವರಂತೆ ಸಕಲ ಮೇಕ್‌ಅಪ್‌ನೊಂದಿಗೆ ಜನರ ಮುಂದೆ ಬರುತ್ತಿರುವುದು ಅವರ ರಾಜಕಾರಣದ ಉದ್ದೇಶಗಳ ಬಗ್ಗೆ ಅನುಮಾನ ಬರುವಂತಾಗಿದೆ. ಅವರು ದೇಶದ ಪ್ರಧಾನಮಂತ್ರಿಯಾಗದೆ ಹಿಂದುತ್ವವನ್ನು ಒಪ್ಪುವ ಜನರ ಪ್ರಧಾನಮಂತ್ರಿಯಂತೆ ವರ್ತಿಸುತ್ತಿರುವ ಕಾರಣ ದೇಶದಲ್ಲಿ ದ್ವೇಷದ ರಾಜಕಾರಣ ಬೆಳೆಯುತ್ತಿದೆ.

**–ಕಡಿದಾಳು ಶಾಮಣ್ಣ,** ಹಿರಿಯ ಸಮಾಜವಾದಿಗಳು, ರೈತ ಮುಖಂಡರು



ಐದು ವರ್ಷಗಳ ಆಡಳಿತ ನಿಜವಾಗಿ ದಕ್ಷವಾಗಿತ್ತು. ಆದರೆ ಅದು ದೊಡ್ಡ ಕೈಗಾರಿಕೋದ್ಯಮಿಗಳಿಗೆ ಮತ್ತು ವಾಣಿಜ್ಯ ಸಂಸ್ಥೆಗಳಿಗೆ ಅತಿ ಲಾಭ ಮಾಡಿಕೊಡುವಂತಹ ದಕ್ಷತೆ!. ಈ ಉದ್ಯಮಿಗಳು ಮತ್ತು ಸಂಸ್ಥೆಗಳು ತಮ್ಮ ದುರ್ವ್ಯವಹಾರಗಳಿಗಾಗಿ ಸರ್ಕಾರಿ ಸಂಸ್ಥೆಗಳು ವಿಧಿಸಿದ ಕೋಟ್ಯಾಂತರ ರೂಪಾಯಿಗಳ ದಂಡವನ್ನೂ ಸರ್ಕಾರ ಮಾಫಿ ಮಾಡಿದೆ. ಇದೆಲ್ಲದರ ಒಟ್ಟು ಪರಿಣಾಮವೆಂದರೆ ನಮ್ಮ ಪರಿಸರ ನಾಶ. .

**–ಡಾ. ಎ.ಎನ್. ನಾಗರಾಜ್,** ವಿಶ್ವ ಆರೋಗ್ಯ ಸಂಸ್ಥೆಯ ಮಾಜಿ ವಿಜ್ಞಾನಿ



ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಮೈಗೂಡಿಸಿಕೊಂಡ ಪ್ರಜಾತಂತ್ರದಲ್ಲಿ 'ಹೊಸ ಮನುಷ್ಯ' ನಿಜವಾದ ಅರ್ಥದಲ್ಲಿ ಸಾಧ್ಯವಾಗಬೇಕಾದರೆ, ಕೇಂದ್ರದಲ್ಲಿನ ಸದ್ಯದ ವ್ಯವಸ್ಥೆ ಮತ್ತು ಅದರ ನಾಯಕತ್ವಗಳು ನಿರ್ಗಮಿಸಬೇಕು. ಇವು ನಿರ್ಗಮಿಸಬೇಕಾದರೆ ನಾವು ಮತದಾರರು ಈ ಚುನಾವಣೆಯಲ್ಲಿ ನಮ್ಮ ಆಯ್ಕೆಗಳನ್ನು ದೃಢತೆ ಮತ್ತು ಬದ್ಧತೆಯಿಂದ ಹಾಗೂ ಭವಿಷ್ಯದ ಕುರಿತಾದ ಅದಮ್ಯ ವಿಶ್ವಾಸದಿಂದ ಚಲಾಯಿಸಬೇಕು.

**–ಪ್ರೊ. ಜಿ.ಕೆ. ಗೋವಿಂದರಾವ್.** ನಿವೃತ್ತ ಪ್ರಾಧ್ಯಾಪಕರು ಮತ್ತು ಚಿಂತಕರು



ಕಳೆದ ಐದು ವರ್ಷಗಳ ಆಡಳಿತವನ್ನು ಗಮನಿಸಿದಾಗ ಏಕವ್ಯಕ್ತಿ ಆಡಳಿತ ನಡೆಸುತ್ತಿದ್ದು, ನಾಮಕಾವಸ್ತೆ ಪಕ್ಷ, ಪ್ರಣಾಳಿಕೆ. ಮಂತ್ರಿಮಂಡಲ ಇದೆ. ಕಾರ್ಪೋರೇಟ್ ಕಂಪನಿಗಳಿಗೆ ರತ್ನಗಂಬಳಿ ಹಾಸಿ, ಉದ್ಯೋಗ ಸೃಷ್ಟಿ ಭರವಸೆ ಹುಸಿಯಾಗಿ ಜನರ ಜೀವನ ದುರ್ಭರವಾಗಿದೆ. ಭಾವನಾತ್ಮಕ ವಿಷಯಗಳನ್ನು ಉದ್ದೀಪಿಸಿ ಮುಗ್ಧ ಜನರನ್ನು ಹಾದಿ ತಪ್ಪಿಸುತ್ತಿರುವುದು ಅಕ್ಷಮ್ಯ.

**–ಸಿ. ಚೆನ್ನಬಸವಣ್ಣ,** ಪುಸ್ತಕ ಪ್ರಕಾಶಕರು ಮತ್ತು ಚಿಂತಕರು



ಮೋದಿ ಸರಕಾರ ಮತ್ತು ಅದರ ಒಕ್ಕೂಟ ಪಕ್ಷಗಳ ಸಿದ್ಧಾಂತವೇ ಹಿಂದುಯೇತರ ಪ್ರಜೆಗಳನ್ನು 'ಅನ್ಯರು'ಎಂದು ಗ್ರಹಿಸಿ ದ್ವೇಷಿಸುವುದು. ೨) ಮೋದಿ ಸರಕಾರದ ಹಲವು ದುಡುಕಿನ ಆರ್ಥಿಕ ಕ್ರಮಗಳು ಜನಸಾಮಾನ್ಯರ ಜೀವನೋಪಾಯಗಳನ್ನು ಕಸಿದು ಅವರನ್ನು ನಿರ್ಗತಿಕರನ್ನಾಗಿಸಿವೆ. ೩) ಮೋದಿ ಸರಕಾರದ ವಿದೇಶಾಂಗ ನೀತಿ ಅಮೇರಿಕದ ಸಾಮ್ರಾಜ್ಯಶಾಹಿಯನ್ನು ಮತ್ತು ಜನಾಂಗದ್ವೇಷಿ ಇಸ್ರೇಲ್‌ನ್ನು ಓಲೈಸುವಂತಹದ್ದು.

**–ಜಿ. ರಾಜಶೇಖರ,** ಹಿರಿಯ ಲೇಖಕರು ಮತ್ತು ಚಿಂತಕರು

ಶಿಕ್ಷಣ, ಮಾಧ್ಯಮಗಳು, ಪ್ರಗತಿಯ ಪರಿಕಲ್ಪನೆ ಮುಂತಾದ ಹಲವು ಸಂಗತಿಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಭ್ರಮೆಗಳನ್ನು ಬಿತ್ತುತ್ತಿರುವ, ಉಸಿರು ಕಟ್ಟಿಸುತ್ತಿರುವ ಇಂದಿನ ಸನ್ನಿವೇಶವು ಸರ್ವಾಧಿಕಾರದ ಹಿಂದಿನ ಹಂತವೆನ್ನಿಸುತ್ತಿದೆ. ವಿರೋಧಪಕ್ಷಗಳ



'ಬಿಜೆಪಿ ೨೦೧೯ರ ಚುನಾವಣೆಯನ್ನು ಗೆಲ್ಲುತ್ತದೆ ಮತ್ತು ಮುಂದಿನ ೫೦ ವರ್ಷ ಆಡಳಿತ ನಡೆಸುತ್ತದೆ' ಎಂದು ಅಮಿತ್ ಶಾಹ್ ದಿಲ್ಲಿಯಲ್ಲಿ ಕಳೆದ ಸೆಪ್ಟೆಂಬರ್‌ನಲ್ಲಿ ಹೇಳಿದ್ದು ಜನತಂತ್ರದ ಮೂಲ ಆಶಯವನ್ನೇ ಬುಡಮೇಲು ಮಾಡುವಂತಿದೆ.

**ಕ್ರೆಡಿಟ್ ಸ್ವಿಸ್ ಹಣಕಾಸು ಸಂಸ್ಥೆ ಮಾಹಿತಿಯ ಪ್ರಕಾರ ಡಾಲರ್ ಲೆಕ್ಕದಲ್ಲಿ ಕೋಟ್ಯಧೀಶರ ಮತ್ತು ಶತಕೋಟ್ಯಧೀಶರ ಸಂಖ್ಯೆ ಒಂದೇಸಮನೆ ಏರುತ್ತಿದ್ದು ಕ್ರಿಶ ೨೦೨೩ ವೇಳೆಗೆ ಅದು ಐದೂವರೆ ಲಕ್ಷ ತಲುಪಲಿದ್ದು, ಅಮೇರಿಕಾ ಮತ್ತು ಚೀನಾ ದೇಶಗಳಲ್ಲಿ ಈ ಸಂಪತ್ತು ಸಿದ್ಧ ವಸ್ತುಗಳ ಉತ್ಪಾದನೆ, ಉದ್ಯೋಗ ಸೃಷ್ಟಿ ಅಥವಾ ರಫ್ತು ವಹಿವಾಟಿನಂಥ ಅಭಿವೃದ್ಧಿ ಚಟುವಟಿಕೆಗಳಿಂದಾಗಿ ಜಮೆ ಆಗುತ್ತಿದ್ದರೆ ನಮ್ಮ ದೇಶದಲ್ಲಿ ಇದು ಗಣಿಗಾರಿಕೆ, ರಿಯಲ್ ಎಸ್ಟೇಟ್ ಮತ್ತು ಸಾಮೂಹಿಕ ಆಸ್ತಿಯ ಕಬಳಿಕೆಯಿಂದಾಗಿಯೇ ಹೆಚ್ಚಾಗಿ ಜಮೆ ಆಗುತ್ತಿದೆ ವಿನಾ ತಳಮಟ್ಟದವರನ್ನು ಒಳಗೊಳ್ಳಬೇಕೆಂಬ ಅಭಿವೃದ್ಧಿ ಧೋರಣೆಯ ಯಾವ ಲಕ್ಷಣಗಳೂ ಈ ಪರಿಯ ಸಂಪತ್ತಿನ ಕ್ರೋಢೀಕರಣದಲ್ಲಿಯಾಗಲೀ ಆಳುವ ಪಕ್ಷದ ನೀತಿನಿರೂಪಣೆಯಲ್ಲಾಗಲೀ ಕಾಣಿಸುತ್ತಿಲ್ಲ.**

**ದೇಶದ ಒಳಗಿನ ಹಾಗು ಗಡಿಯಾಚೆಗಿನ ಅನ್ಯಧರ್ಮೀಯರನ್ನು ಹತ್ತಿಕ್ಕಿ ದೇಶದ ಬಲವರ್ಧನೆ ಮಾಡಬೇಕೆಂಬ ಹುನ್ನಾರ ಬಿಜೆಪಿಯ ಎಲ್ಲ ಸ್ತರದ ವಕ್ತಾರರಲ್ಲೂ ಕಾಣುತ್ತಿದ್ದು ಇದು ಹಿಂಸೆ ಮತ್ತು ಜನಾಂಗೀಯ ದ್ವೇಷವನ್ನು ಸದಾಕಾಲ ಪೋಷಿಸುತ್ತಾ ಹೋಗಲಿದೆ ಎಂಬ ಸೂಚನೆ ಕಾಣುತ್ತಿದೆ.**

**–ನಾಗೇಶ ಹೆಗಡೆ,** ಖ್ಯಾತ ವಿಜ್ಞಾನ ಲೇಖಕರು ಮತ್ತು ಪರಿಸರವಾದಿಗಳು



ಭ್ರಷ್ಟಾಚಾರ, ಅಸಾಮರ್ಥ್ಯ ಮತ್ತು ಕೋಡಂಗಿತನಗಳ ಬಗ್ಗೆ ಅಸಮಾಧಾನವಿದ್ದರೂ ಶ್ರೀಯುತ ಮೋದಿಯವರ ಅಧಿಕಾರದ ಮುಂದುವರಿಕೆಯನ್ನು ವಿರೋಧಿಸುವುದು ಅನಿವಾರ್ಯವಾಗಿದೆ. ಏಕೆಂದರೆ ನಮ್ಮ ದೇಶವನ್ನು 'ಅತ್ಯಾಧುನಿಕ'ವಾದರೂ ಗೊಡ್ಡು ಮೌಲ್ಯಗಳಿಂದ ತುಂಬಿದ ಹತ್ತೊಂಬತ್ತನೆಯ ಶತಮಾನಕ್ಕೆ ಕರೆದೊಯ್ಯುವುದನ್ನು ನಾನು ಒಪ್ಪುವುದಿಲ್ಲ.

**–ಡಾ. ಎಚ್.ಎಸ್. ರಾಘವೇಂದ್ರರಾವ್,** ನಿ. ಪ್ರಾಧ್ಯಾಪಕರು, ವಿಮರ್ಶಕರು



ಮೋದಿ ಐದು ವರ್ಷಗಳ ಹಿಂದೆ ಅಧಿಕಾರಕ್ಕೆ ಬಂದಾಗ ನೀಡಿದ್ದ ವಿದೇಶಗಳಲ್ಲಿರುವ ಭಾರತೀಯರ ಕಪ್ಪು ಹಣ ವಾಪಸ್ ತಂದು ನಮಗೆಲ್ಲ ಹಂಚುವ, ರೈತರ ಆದಾಯವನ್ನು ದ್ವಿಗುಣಗೊಳಿಸುವ, ಸ್ವಾಮಿನಾಥನ್ ವರದಿಯನ್ನು ಜಾರಿಗೆ ತರುವ, ಯುವಜನರ ಕೈಗಳಿಗೆ ಕೆಲಸ ಕೊಡುವ ಹೀಗೆ ಯಾವ ವಾಗ್ದಾನವನ್ನೂ ಈಡೇರಿಸದೆ ವಚನಭ್ರಷ್ಟರೂ ವಿಫಲ ಆಡಳಿತಗಾರರೂ ಆಗಿದ್ದು ಈಗ ಇದನ್ನು ಮರೆಮಾಚಿಕೊಳ್ಳಲು ನಮ್ಮ ಸೇನೆಯ ಪರಾಕ್ರಮವನ್ನು ತಮ್ಮ ಪರಾಕ್ರಮವೆಂದು ಬಿಂಬಿಸಿಕೊಳ್ಳ ಹೊರಟಿದ್ದಾರೆ.

**–ಅನಸೂಯಮ್ಮ,** ರೈತ ಹೋರಾಟಗಾರರು



ಭಾರತೀಯ ನಾಗರೀಕತೆ ಹಾಗೂ ಸಮಾಜಗಳ ಪರಿಕಲ್ಪನೆಯ ಸಂಪೂರ್ಣ ವಿನಾಶವು ಆಗದೇ ಇರುವುದಕ್ಕಾಗಿ, ಈ ದೇಶದ ಬಹುಮುಖತ್ವವನ್ನು ಹಿಂಸೆಯ ಪ್ರಯೋಗವಿಲ್ಲದೆ ಉಳಿಸಿ ಕಾಪಾಡಬಲ್ಲ, ಸಮಾನತೆಯ ಆಶಯವನ್ನು ನಮ್ಮ ರಾಜಕೀಯ ಬದುಕಿನ ವಾಸ್ತವವನ್ನಾಗಿಸಿರುವ ಸಂವಿಧಾನವನ್ನು ಉಳಿಸುವುದಕ್ಕಾಗಿ ಹಾಗೂ ನವ ಸಾಹುಕಾರಶಾಹಿ ಬಂಡವಾಳ ಶಕ್ತಿಗಳನ್ನು ಸಂಪೂರ್ಣವಾಗಿ ಬೆಂಬಲಿಸಿ ಅಪಾರವಾದ ಅಸಮಾನತೆ, ಬಡತನ ಹಾಗೂ ಸಾಮಾಜಿಕ ಅನ್ಯಾಯವನ್ನು ಉಂಟುಮಾಡುವ ಪ್ರಭುತ್ವವು ಬೆಳೆಯದೇ ಇರುವುದಕ್ಕಾಗಿ ಮೋದಿಯವರನ್ನು ಪ್ರಜಾಪ್ರಭುತ್ವದ ಮೂಲಕವೇ ಸೋಲಿಸುವುದು ಅನಿವಾರ್ಯವಾಗಿದೆ.

**–ಡಾ. ರಾಜೇಂದ್ರ ಚೆನ್ನಿ, ನಿ.** ಪ್ರಾಧ್ಯಾಪಕರು ಮತ್ತು ಚಿಂತಕರು



ಪ್ರಶ್ನಿಸುವುದನ್ನು ಕಲಿಸುವ, ಇತಿಹಾಸವನ್ನು ವೈಚಾರಿಕವಾಗಿ ಶೋಧಿಸುವ, ವರ್ತಮಾನದ ರಾಜಕೀಯ ವಿನ್ಯಾಸಗಳನ್ನು ದಿಟ್ಟವಾಗಿ ವಿಶ್ಲೇಷಿಸುವ, ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು, ಪ್ರಜಾಪ್ರಭುತ್ವದ ಬೇರುಗಳನ್ನು ಬಲಗೊಳಿಸಲು ಮುಕ್ತ ಚಿಂತನೆ ವಿಮರ್ಶೆ ಮತ್ತು ಜನರ ಯೋಚನಾ ಶಕ್ತಿಯನ್ನು ತೀಕ್ಷ್ಣಗೊಳಿಸಲು ಬೌದ್ಧಿಕ ಸಂವಾದಗಳನ್ನು ಪ್ರೋತ್ಸಾಹಿಸುವ ಸರಕಾರ ನನಗೆ ಬೇಕು. ಅದನ್ನು ಯಾರಾದರೂ ಕೊಡಲಿ..

**–ಡಾ. ಪುರುಷೋತ್ತಮ ಬಿಳಿಮಲೆ,** ಪ್ರಾಧ್ಯಾಪಕರು, ಜಾನಪದ ವಿದ್ವಾಂಸರು

ಒಂದು ಲಘು ಶೈಲಿಯ ಬರಹ

# ಪ್ರಶಸ್ತಿ ಪುರಾಣ

–ವಿಜಯೇಂದ್ರ ಪಾಟೀಲ



ಚಿತ್ರ: ಗುಜ್ಜಾರಪ್ಪ

> ಕೆಲ ಪ್ರಶಸ್ತಿಗಳು ಗಾಂಧಿ-ನೆಹರೂ ಅವರ ಕಾಲ ಬಳಿ ಕುಳಿತು ತೆಗೆಸಿದ ಫೋಟೋಗಳಂತೆ ಮರ್ಯಾದೆ ತರಿಸುತ್ತವೆ. ಕೆಲವು ವರದಕ್ಷಿಣೆ ಕೊಟ್ಟು ಕೊಂಡು ತಂದ ಗಂಡನಂತೆ ಕಳಾಹೀನವಾಗಿರುತ್ತವೆ. ಇನ್ನೂ ಕೆಲವು ದಾವೂದ್ ಇಬ್ರಾಹಿಂ ಜೊತೆ ಹೆಗಲ ಮೇಲೆ ಕೈ ಹಾಕಿ ತೆಗೆಸಿಕೊಂಡ ಫೋಟೋದಂತೆ ಮುಚ್ಚಿಡುವಂತಿರುತ್ತದೆ. ಮತ್ತೆ ಕೆಲವು ಎದರಲ್ಲೋ ಸಿಕ್ಕಿ ಹಾಕಿಕೊಂಡು ಜಾಮೀನಿನ ಮೇಲೆ ಬಿಡಿಸಿಕೊಂಡು ಬಂದು ಮನೆಯಲ್ಲಿ ತಲೆ ಕೆಳಗೆ ಹಾಕಿ ಕುಳಿತಿರುವಂತಿರುತ್ತವೆ. ಇವೆಲ್ಲ ಹೇಳುವಾಗ ಎದೆ ಸೆಟೆಸಿ ನಿಂತ ಜಗಜಟ್ಟಿಯಂತೆ, ಕಣ್ತುಂಬ ನಗು ತುಳುಕಿಸಿಗೊಂಡ ಮಗುವಿನಂತೆ, ಬೆಳೆದು ನಿಂತ ಪೈರುಗಳಂತೆ ಕಾಣುವ ಪ್ರಶಸ್ತಿಗಳ ಇರುವಿಕೆಯನ್ನೂ ನಾವು ಗಮನಿಸಬೇಕು.. ಪ್ರಶಸ್ತಿಗಾರಿಕೆ ಇಂದು ಒಂದು ಬಹುಮಗ್ಗಲಿನ ಉದ್ದಿಮೆ

**ಈ** ಪ್ರಶಸ್ತಿಗಳೇ ಇರದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಎಂದು ಏನನ್ನೂ ಬರೆಯದ ಯಾವ ಪ್ರಶಸ್ತಿಯನ್ನೂ ಪಡೆಯದ ನಾನು ಅಂದುಕೊಂಡದ್ದಿದೆ. ಆದರೆ ಅಕಸ್ಮಾತ್ ನನ್ನದೂ ಒಂದು ಪುಸ್ತಕ ಇದ್ದಿದ್ದರೆ ನಾನೂ ಹೀಗೆ ಅಂದುಕೊಳ್ಳುತ್ತಿದ್ದೇನೇ ಅಂತ ಕೇಳಿದರೆ ನನ್ನ ಬಾಯಿಯೇ ಬಂದಾಗುತ್ತದೆ. ಚಿಕ್ಕ ವಯಸ್ಸಿನ, ಮದುವೆಯಾಗದ ನರ್ಸ್ ಒಬ್ಬಳು ಹೆರಿಗೆಯ ಬಗ್ಗೆ ಎಷ್ಟು ಅಧಿಕೃತವಾಗಿ ಮಾತಾಡಬಲ್ಲಳೋ ಅಷ್ಟೇ ಅಧಿಕೃತವಾಗಿ ನಾನು ಏನನ್ನೂ ಬರೆಯದಿದ್ದಾಗಲೂ ಪ್ರಶಸ್ತಿಗಳ ಬಗ್ಗೆ ಮಾತಾಡಬಲ್ಲೆ. ಆಕೆಯಷ್ಟೇ ಲೋಕಜ್ಞಾನ ನನಗೆ ಈ ಕ್ಷೇತ್ರದಲ್ಲಿ ಇದೆ.....

ನನ್ನ ಗೆಳೆಯನೋರ್ವನ ಅಂಕಲಿಪಿ ಗಾತ್ರದ ಪುಸ್ತಕವೊಂದು ನಾಳೆ ಬಿಡುಗಡೆಯಾಗಲಿತ್ತು ಎನ್ನುವಾಗ ಆತ ಆತಂಕದಿಂದ ಮನೆಗೇ ಬಂದ. ನಿನಗೆಂಥ ಆತಂಕ, ಈ ಸಂತೋಷ ಸಮಾರಂಭದಲ್ಲಿ.? ಎಂದು ಪ್ರಶ್ನಿಸಿದೆ. ಏಕೆಂದರೆ ಆಗಲೇ ಹಿರಿಯ ವಿಮರ್ಶಕರೊಬ್ಬರು ಹೊಟೇಲ್ ಸೇರಿ ಸಂಜೆಯ ದಂದುಗದಲ್ಲಿ ಮುಳುಗುತ್ತಿದ್ದರು .ಸ್ವಾಮೀಜಿಗಳೊಬ್ಬರು ಆಶೀರ್ವಚನದ ಆಶ್ವಾಸನೆ ಕೊಟ್ಟಿದ್ದರು. ಬಂಧು– ಬಳಗ ಆಗಲೇ ಬಂದು ಬೀಡು ಬಿಟ್ಟಿತ್ತು. ಪ್ರೇಕ್ಷಕರಿಗಾಗಿ ಚಹ–ತಿಂಡಿ; ಅತಿಥಿಗಳಿಗಾಗಿ ಹಾರ ತುರಾಯಿಗಳ ವ್ಯವಸ್ಥೆ ಆಗಲೇ ಆಗಿದ್ದಿತು. ಹೀಗಿರುವಾಗ ಅವನ ಆತಂಕ ಅರ್ಥವಾಗಲಿಲ್ಲ. ಆತ ಅನುಮಾನಿಸುತ್ತಲೇ ತನ್ನ ಅಂತರಾತ್ಮ ಪ್ರಕಟಪಡಿಸಿದ. "ಯಾರ ಯಾರದೋ ಸಹಾಯ ಪಡೆದು ಕಷ್ಟಪಟ್ಟು ಇದನ್ನು ಬರೆದೆ. ದೇವರ ದಯ. ದುಡ್ಡಿತ್ತು. ಪ್ರಕಟಿಸಿದೆ. ಈಗ ಮತ್ತಷ್ಟು ಖರ್ಚು ಮಾಡಿ ಬಿಡುಗಡೆ ಸಮಾರಂಭ ಏರ್ಪಡಿಸಿದ್ದೇನೆ. ಆದರೆ ಇಷ್ಟು ಕಷ್ಟಪಟ್ಟದ್ದಕ್ಕೆ ಪ್ರತಿಫಲವಾಗಿ ಒಂದಾದರೂ ಪ್ರಶಸ್ತಿ ಬರಬಹುದೇ?"

ಆ ಕ್ಷಣದಲ್ಲಿ ನನಗೆ ಆತ ಶಸ್ತ್ರ ತ್ಯಜಿಸಿದ ಅರ್ಜುನನಾಗಿ ಕಂಡ. ನನ್ನಲ್ಲಿದ್ದ ಕೃಷ್ಣ ಪರಮಾತ್ಮ ಎದ್ದು ಕುಳಿತ. ತಲೆಯ ಸುತ್ತ ಸಿನಿಮಾದಲ್ಲಿ ಕಾಣುವ ಪ್ರಭಾವಳಿ ಸುತ್ತತೊಡಗಿತು.ಅದೇ ಕಾವಿನಲ್ಲಿ ಉಪದೇಶಿಸತೊಡಗಿದೆ:. " ಒಂದು ಸಾವಿರ ಪುಸ್ತಕ ಬಂದರೆ ಅದರಲ್ಲಿ ಪ್ರಯತ್ನ ಪಟ್ಟರೆ ೩೦೦ ವಾಚನಾಲಯಕ್ಕೆ ಹೋಗುತ್ತವೆ. ೨೦೦ ಮುಫತ್ತಾಗಿ ಹಂಚಲ್ಪಡುತ್ತವೆ.ಉಳಿದದ್ದು ಕಾಲು ಮುರಿದುಕೊಂಡ ಸರಸ್ವತಿಯಂತೆ ಮನೆಯ ಮೇಲ್ಭಾಗದಲ್ಲಿ ವಾಸ್ತವ್ಯ ಅರಸಿ ಹೋಗುತ್ತವೆ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೇ? ಒಂದು ಹೆಣ್ಣಿಗೆ ಒಂದು ಗಂಡು ಎಂಬ ನಾಣ್ನುಡಿ ಕೇಳಿಲ್ಲವೇ? ದೈವ ಬಲವಿದ್ದರೆ ಈ ಅಂಕಿ ದುಪ್ಪಟ್ಟೂ ಆದೀತು. ಅದೇ ರೀತಿ, ಒಂದು ಪುಸ್ತಕಕ್ಕೆ ಒಂದಾದರೂ ಪ್ರಶಸ್ತಿ ಎಬುದು ಎಲ್ಲರ ಅನುಭವ ಮತ್ತು ನಂಬಿಕೆ. ಪ್ರಯತ್ನಕ್ಕೆ ಫಲ ಇದ್ದೇ ಇದೆ. ಭಯ ಪಡಬೇಡ. ನಮ್ಮೂರಲ್ಲೇ ಮೂರು ಪ್ರಶಸ್ತಿಗಳಿವೆ." ಎಂದು ಅಭಯ ನೀಡಿದೆ.

ನನ್ನ ಈ ಪರಿಯ ಅಭಯ ಕೂಡ ಅವಗೆ ಕಡಿಮೆ ಬಿದ್ದಂತೆ ಕಂಡಿತು. "ಆದರೆ ಈ ಮೂರೂ ನಮ್ಮ ಜನರಿಗಲ್ಲವಲ್ಲ?" ಎಂಬ ಒಳ ಸತ್ಯವನ್ನು ಹೊರಗೆ ಹಾಕಿದ. ನಾನು ಪ್ರಸಂಗಾವಧಾನದಿಂದ 'ಚರಿಪಾರಣ್ಯದ ಪಕ್ಷಿಗೊಂದು ತರು ಗೊಡ್ಡಾಗಲ್ ಫಲಂ ತೀವಿದಾ? ಮರಗಳ್ ಪುಟ್ಟವೇ? ' ಎಂದು ಕೇಳಿ 'ಎಳೆಗರುಂ ಎಮ್ಮೆಯಾಗದೆ ಲೋಕದೊಳ್..?' ಎಂದೂ ಕೇಳಿದೆ. ಆತ ಅಂಥ ಸೂಕ್ಷ್ಮನಲ್ಲವೆಂದು ಸ್ಪಷ್ಟವಾಗಿಯೂ ಹೇಳಿದೆ. "ನಿಮ್ಮ ಜನರ ' ಪ್ರಶಸ್ತಿ ಕೇಂದ್ರಗಳು ಇತ್ತ ೨೮ ಕಿಲೋಮೀಟರ್‌ನಲ್ಲೂ ಅತ್ತ ೪೦ ಕಿಲೋ ಮೀಟರ್‌ನಲ್ಲೂ ಕಾರ್ಯ ನಿರ್ವಹಿಸುತ್ತಿಲ್ಲವೇ?" ಎಂದು ಕೇಳಿದೆ. ಆತ ಹಗುರಾಗಿ ಬಿಟ್ಟ. ಪ್ರಶಸ್ತಿ ನೀಡುವವರ ಮುಖಗಳು ಅವನ ಮುಂದೆ ಬಂದು ನಿಂತಂತಾಯಿತು. ಕಣ್ಣಲ್ಲಿ ಕೃತಜ್ಞತೆ ಮೂಡಿಸಿದ. ಜೊತೆಗೆ ಉತ್ಸಾಹಿತನಾದ. 'ಗೆಳೆಯಾ, ನಾಳೆ ಪುಸ್ತಕ ಬಿಡುಗಡೆ ಆಗುವಾಗಲೇ ಯಾವುದೋ ಕಡೆಯಿಂದ ಒಂದು ಪ್ರಶಸ್ತಿ ಹಾರಿಬಂದರೆ ಎಂಥಾ ಗಮ್ಮತ್ತು! ನಾಳೆ ಬಪ್ಪದು ನಮಗಿಂದೇ ಬರಲಿ ಎಂಬುದರಲ್ಲಿ ತಪ್ಪಿದೆಯೇ? ಇಷ್ಟಕ್ಕೂ ಈ ಮಾತು ಹೇಳಿದ್ದು ನಾನೇ? ಇದಕ್ಕಾಗಿ ನೀನೇನಾದರೂ ಮಾಡಬಲ್ಲೆಯಾ?" ಎಂದು ಅಲವತ್ತುಕೊಂಡ.

ನನಗೆ ಇದ್ದಕ್ಕಿದ್ದಂತೆ ನನ್ನ ಪೌರೋಹಿತ್ಯದಲ್ಲೇ ಯಾರೋ ಒಬ್ಬರು ಬಾಲ್ಯ ವಿವಾಹದ ತಯಾರಿ ನಡೆಸುತ್ತಿದ್ದಾರೆಂದು ಅನ್ನಿಸ ತೊಡಗಿತು. ಅದೇ ಭಾವದಲ್ಲಿ " ಪ್ರಾಪ್ತ ವಯಸ್ಕನಾಗು. ಆ ಮೇಲೆ ಮದುವೆ. ಮದುವೆಗೂ ಮಗುವಿಗೂ ಕನಿಷ್ಠ ಕಾಲಾಂತರದ ಅಗತ್ಯವಿದೆ" ಎಂದು ಅರ್ಧಮರ್ಧ ಎಚ್ಚರದಲ್ಲಿ ಮಾತನಾಡಿದೆ. ಅವನಿಗೆ ಎಷ್ಟು ತಿಳಿಯಿತೋ ಏನೊ, " ನಾಳೆ ಸಿಗೋಣ" ಎಂದವನೇ ಹೊರಟು ಹೋದ. ಗೀತೋಪದೇಶದ ಭರದಲ್ಲಿ ನಾನು ಅವನಿಗೆ ಆಡಿದ ಮಾತುಗಳನ್ನು ಪರಾಮರ್ಶಿಸ ತೊಡಗಿದೆ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೇ? ಹಾಗಾದರೆ ಹಳೆಯ ಕಾಲದ ಹಲವಾರು ಪ್ರತಿಭೆಗಳಿಗೆ ಹುಲ್ಲೂ ಸಿಗಲಿಲ್ಲವಲ್ಲ! ಒಂದು ಹೆಣ್ಣಿಗೆ ಒಂದು ಗಂಡು ಎಂಬುದು ಬಹಳಷ್ಟು ಜನರ ವಿಷಯದಲ್ಲಿ ಸುಳ್ಳೇ ಆಯಿತಲ್ಲ! ಪ್ರಶಸ್ತಿಯ ವಿಷಯದಲ್ಲಿ ಬಹುಜನ ಬ್ರಹ್ಮಚಾರಿಗಳಾಗಿಯೇ ಉಳಿದರಲ್ಲ! ಗ್ರಂಥ ಪ್ರಕಟಿಸಿ, ತಲೆ ಮೇಲೆ ಹೊತ್ತು, ಹಳ್ಳಿ ಹಳ್ಳಿ ಸುತ್ತಿ ನಾಲ್ಕಾಣೆ–ಎಂಟಾಣೆಗಳಿಗೆ ತರಕಾರಿಯಂತೆ ಮಾರಿದವರಿದ್ದುದು ಸುಳ್ಳೇ? ಒಂದು ದೇವರಾಜ ಬಹದ್ದೂರ್ ಸಿಕ್ಕಿದರೆ ದೇವರೇ ಸಿಕ್ಕಂಥ ಧನ್ಯತಾಭಾವ! ಒಟ್ಟಾರೆ ಪಟ್ಟ ಕಷ್ಟಕ್ಕೆ ತಕ್ಕ ಪ್ರಶಸ್ತಿಗಳಿರಲಿಲ್ಲ. ಇಷ್ಟು ದಿನಗಳಾದ ಮೇಲೆ ಅವರ ಕುರಿತು ಆಲೋಚಿಸುತ್ತಿರುವುದೇ ಅವರಿಗೆ ನಾವು ಕೊಡುವ ಪ್ರಶಸ್ತಿ. ಬೇಕಾದರೆ ಹಣವಿಲ್ಲದ, ಹಾರವಿಲ್ಲದ ಒಣ ಒಣ ಪ್ರಶಸ್ತಿ ಅಂತ ಬೇಕಾದರೆ ಕರೆಯೋಣ. ಇಂಥವರ ಪಟ್ಟಿ ಪ್ರಕಟಿಸಿ ಪ್ರಶಸ್ತಿ ಪಡೆವವರೂ ಇದ್ದಾರೇನೋ ಎಂದು ಒಂದು ಕ್ಷಣ ಹೊಳೆದು ಗಾಬರಿಯಾಯಿತು. ಇರಲಿ ಬಿಡಿ. ಹಳೆಯದನ್ನು ನೆನೆಸಿಕೊಂಡರೇನು? ನಮಗೂ ಪ್ರಶಸ್ತಿ ಇಲ್ಲ, ಅವರಿಗೂ ಪ್ರಶಸ್ತಿ ಇಲ್ಲ!

ಮರುದಿನ ನನ್ನ ಗೆಳೆಯನ ಪುಸ್ತಕದ ಪಿಳ್ಳೆಯಂಥ ' ಒಂದು ' ಬಿಡುಗಡೆಯಾಯಿತು. ನನ್ನ ಪ್ರಾಸಾವಿಕದಲ್ಲಿ ಆತ ಆಗೀಗ ಮಾಡಿದ ಉಪಕಾರ, ಕೊಡಿಸಿದ ಊಟ–ತಿಂಡಿಗಳಿಗನುಗುಣವಾಗಿ ಪುಸ್ತಕವನ್ನು ಒಂದಿಷ್ಟು ಚೆನ್ನಾಗಿಯೇ ಹೊಗಳಿ ಅದಕ್ಕೆ ಸಕಲ ಪ್ರಶಸ್ತಿ ಬರಲಿ ಹಾಗೂ ಬರಲೇ ಬೇಕು ಎಂಬಿತ್ಯಾದಿ ಹಕ್ಕೊತ್ತಾಯ ಮಂಡಿಸಿ ಅವನ ಬಂಧು ಬಳಗದವರೇ ತುಂಬಿದ ಸಭೆಯಲ್ಲಿ ಚಪ್ಪಾಳೆ ಗಿಟ್ಟಿಸಿಕೊಂಡೆ. ಆದರೆ ಒಳ್ಳೆಯ ಪ್ರವಾಸ ಸೌಕರ್ಯ, ಹೊಟೇಲ್ ಸುಖ ಎಲ್ಲಾ ಅನುಭವಿಸಿದ ಮುಖ್ಯ ಅತಿಥಿಗಳಾಗಿದ್ದ ವಿಮರ್ಶಕ ಮಹಾಶಯರಿಗೆ ಮತ್ತ್ಯಾವುದರ ಕೊರತೆಯಾಗಿತ್ತೋ, ಏನೋ... ಪುಸ್ತಕದ ಕುರಿತಂತೆ ಒಳ್ಳೆಯ ಮಾತು ಹೇಳಲು ಹಿಂದೇಟು ಹಾಕಿದರು. 'ಓದುಗರಿಗೆ ಲೇಖಕರ ಕುರಿತಂತೆ ನಿರೀಕ್ಷೆಗಳಿರುತ್ತವೆ. ಇಲ್ಲಿ ಅದು ಸಾಧ್ಯವಾಗಿಲ್ಲ. ಇನ್ನು ಪ್ರಶಸ್ತಿ ಬಯಸುವುದು ಅಪರಾಧ...' ಎಂಬಂತೆ ಮಾತಾಡಿ ನನಗೂ ಲೇಖಕನಿಗೂ ಕೂಡಿಯೇ ಬುದ್ಧಿಮಾತು ಹೇಳಿದರು. ಪುಣ್ಯಕ್ಕೆ ಅವರ ಭಾಷಾ ಮಟ್ಟ ತೀರ ಮೇಲಿನದು. ದೊಡ್ಡ–ದಪ್ಪ ಶಬ್ದಗಳ ಮೆರವಣಿಗೆ ಅದು. ಹೀಗಾಗಿ ಜನ ಹಾಗೂ ಲೇಖಕ ಸಂತಸ ಪಟ್ಟು ಚಪ್ಪಾಳೆ ತಟ್ಟಿದರು. ಸಮಾರಂಭ ಬಹಳ ಚೆನ್ನಾಗಿ ಮುಗಿಯಿತು.

ವಿಮರ್ಶಕರು ಪುಸ್ತಕಕ್ಕೆ ಪ್ರಶಸ್ತಿ ನಿರೀಕ್ಷಿಸುವುದು ಅಪರಾಧ ಎಂದಾಗಲೂ ಒಂದೇ ವರ್ಷದಲ್ಲಿ ಅಂಥ ಎರಡು ಅಪರಾಧಗಳು ಘಟಿಸಿದವು. ಗೆಳೆಯನಿಗೆ ನಮ್ಮೂರಿನ 'ಆಸ್ಥಾನ ಲೇಖಕ' ಹಾಗೂ ಅತ್ತ ಕಡೆಯ ೪೦ ಕಿ.ಮೀ.ನವವರ

'ನಮ್ಮ ಜನ' ಪ್ರಶಸ್ತಿ ಬಂದೇ ಬಂದವು! ಗೆಳೆಯನ ಆತ್ಮಶಕ್ತಿ ಹಾಗೂ ಮಹತ್ವಾಕಾಂಕ್ಷೆ ಎರಡೂ ಹೆಚ್ಚಾದವು. ಆದರೆ ಮತ್ತೆ ಪುಸ್ತಕ ಬರೆಯುವುದಕ್ಕೆ ಅವು ಪ್ರೇರಣೆಯಾಗಲಿಲ್ಲ. ಆದರೆ ಮತ್ತೊಂದು ಪ್ರಶಸ್ತಿ ಪಡೆಯಲು ಆತ ಯೋಚಿಸುತ್ತಿದ್ದ. ಪ್ರಶಸ್ತಿಗಳ ಕುರಿತಂತೆ ಜಿಲ್ಲಾವಾರು, ಜಾತಿವಾರು ಹಾಗೂ ಉದ್ದೇಶಾನುಸಾರವಾಗಿ ಮೂರು ಭಾಗ ಮಾಡಿದ್ದ. ಆದರೆ ಆತ ಎಷ್ಟೇ ಮಹತ್ವಾಕಾಂಕ್ಷಿಯಾದರೂ ಜಿಲ್ಲೆಯ ಗಡಿ ದಾಟದಷ್ಟು ವ್ಯಾವಹಾರಿಕನಾಗಿದ್ದ. ಮೂರು ವಿಭಾಗಗಳು ಹೀಗಿದ್ದವು.

೧. ಪ್ರಶಸ್ತಿಯೊಂದಿಗೆ ಒಂದಿಷ್ಟು ನಗದು.. ಇದು ನಿಗದಿಯಾಗಿರುವುದಿಲ್ಲ ಮತ್ತು ಅದನ್ನು ಎಲ್ಲ ಪುರಸ್ಕೃತರಿಗೂ ಕೊಡಬೇಕೆಂದಿಲ್ಲ..

೨. ಮೊತ್ತವಿಲ್ಲದ ಪ್ರಶಸ್ತಿ. ಇದು ಕೂಡ ಎಲ್ಲರಿಗಲ್ಲ.

೩. ಪ್ರಶಸ್ತಿ ಪಡೆಯಲು ಲೇಖಕರು ಕೊಡಬೇಕಾದ ಮೊತ್ತ, ಶಾಲು, ಫಲ, ಹಾರಗಳ ಖರ್ಚು. ಇದು ಒಪ್ಪಂದದ ಪ್ರಕಾರ ನಡೆಯುವಂಥದು.

ಈತ ತಕ್ಕಮಟ್ಟಿಗಿನ ಸಂಪನ್ಮೂಲ ವ್ಯಕ್ತಿ. ಹೀಗಾಗಿ ಮೂರನೆಯ ಆಯ್ಕೆಯತ್ತ ಒಲವು ತೋರಿಸಿದ. ಅವನ ಸೂಚನೆಯಂತೆ ನಾನು ರಾಯಭಾರಕ್ಕೆ ಒಪ್ಪಿಕೊಂಡೆ. ಆತ ಮೂರನೆಯ ಮಗುವಿನ ಕನಸು ಗಟ್ಟಿ ಮಾಡಿಕೊಂಡ.

***

ವಿವಿಧ ಗುಣಮಟ್ಟದ ಪ್ರಶಸ್ತಿಗಳು ಎಲ್ಲಾ ಕ್ಷೇತ್ರಕ್ಕೂ ಲಭ್ಯವಿವೆ. ಅದು ಕೆಲ ಲೇಖಕರಿಗೆ ಸಿಕ್ಕಾಗ 'ಬರಬೇಕಾದ್ದು, ಬಂತು ಬಿಡು' ಎಂಬಂತೆ ಹಕ್ಕಿನ ಸಂಭ್ರಮ ಆಚರಿಸುತ್ತಾರೆ. 'ಜವಾಬ್ದಾರಿ ಬೆಳೆಯಿತು' ಎನ್ನುವ ಕೆಲವರು ಜಿಲ್ಲಾದ್ಯಂತ ಅಥವಾ ರಾಜ್ಯಾದ್ಯಂತ ಅಭಿನಂದನೆಯ ವ್ಯವಸ್ಥೆ ಆಗುವತ್ತ ಚಿತ್ತ ಹರಿಸುತ್ತಾರೆ.

ಬರವಣಿಗೆ ಹಿಂದೆ ಬೀಳಲೂ ಬಹುದು. ಸಂಗೀತಗಾರನೊಬ್ಬ ಪ್ರಶಸ್ತಿ ಪಡೆದರೆ ೧೬ ತಾಸಿನ ರಿಯಾಜನ್ನು ೧೮ ತಾಸಿಗೆ ಏರಿಸಿಕೊಳ್ಳುತ್ತಾರೆ. ಕ್ರೀಡಾಪಟುಗಳು ಬೆವರು ಹರಿಸಿ ಹಿಂಡಿ ಹಿಪ್ಪೆಯಾಗುವಾಗ ಪ್ರಶಸ್ತಿ ಬರುವುದು ಸಾಮಾನ್ಯವಾದುದರಿಂದ 'ಅಂತೂ, ಪ್ರಶಸ್ತಿ ಬಂತು' ಎಂದು ನಿಟ್ಟುಸಿರು ಬಿಡುತ್ತಾರೆ. ಸರಕಾರ ಕೊಡುವ ಪ್ರಶಸ್ತಿ ಸಿಕ್ಕು ಬಿಟ್ಟರೆ ಸಾಕು, 'ಅಂತೂ ಇಂತೂ ಎಂತೋ, ಪ್ರಶಸ್ತಿ ಬಂತೇ ಬಂತು' ಎಂದು ಕುಣಿದು ಕುಪ್ಪಳಿಸುತ್ತಾರೆ. ಏಕೆಂದರೆ ಅವರಿಗೆ ರಾಜಧಾನಿಯಲ್ಲಿ ನಿವೇಶನ ಬೇಡುವ ಅರ್ಹತೆ, ಅವಕಾಶ ದೊರಕುತ್ತದೆ. ಆದರೆ ಪ್ರಶಸ್ತಿ ಅಷ್ಟು ಸುಲಭವಲ್ಲ. ಪ್ರಶಸ್ತಿಯ ಅರ್ಜಿಯ ಜೊತೆಗೆ ಹತ್ತಿಪ್ಪತ್ತು ಪುಟದ ಸಾಧನೆಗಳನ್ನು ಹೇಳಿಕೊಳ್ಳಬೇಕು. ಒಂದು ಅನುಕೂಲವೆಂದರೆ ಸಾಧನೆ ಇರದವರಿಗೆ ಅದನ್ನು ತಯಾರಿಸಿ, ದಾಖಲೆಗಳನ್ನು ನಿರ್ಮಿಸಿ ಅರ್ಜಿ ತುಂಬಿಸಿ ಕಳಿಸಿಕೊಡುವ ಅಂಗಡಿಗಳು ಇಂದು ಅಲ್ಲಲ್ಲಿ ತೆರೆದುಕೊಂಡಿವೆ. ಅವರಿಗೆ ಪ್ರಶಸ್ತಿ ಇಲ್ಲ. ಪಾಪ! ಅದರ ಮೊತ್ತ ಕೊಟ್ಟರೆ ಸಾಕು. ಈಗಲೂ ಕೂಡ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸದವರು ಇದ್ದಾರೆ. ಅವರ ಆತ್ಮಸಾಕ್ಷಿ, ಆತ್ಮಗೌರವಗಳು ಅವರಿಗೆ ಹಾಗೆ ಮಾಡದಂತೆ ಕಾಟ ಕೊಡುತ್ತವೆ. ಆದರೆ ಅನೇಕರು ಈ ಕಾಟವನ್ನು ನಿಯಂತ್ರಿಸಿಕೊಂಡಿದ್ದಾರೆ. ಅಂತೆಯೇ ಪ್ರಶಸ್ತಿ ಬಂದಾಗ ಜನ ಪ್ರಶಸ್ತಿ ಹೊಡಕೊಂಡ ಎಂದು ಹೇಳಿಬಿಡುತ್ತಾರೆ. ಇಂಥ ವ್ಯಂಗ್ಯ ಸಂಭ್ರಮಕ್ಕೀಡಾಗುವ ಸಾಹಿತಿಗಳನ್ನು ನೋಡಿಯೇ ಡುಂಡಿರಾಜರು 'ಅವರಿಗೆ ತಕ್ಕ ಪ್ರಶಸ್ತಿಯಾಯ್ತು' ಎಂದು ಹೇಳುತ್ತಾರೆ.!

೨೦-೨೫ ವರ್ಷಗಳಲ್ಲಿ ಪ್ರಶಸ್ತಿಗಳು ಅಸಂಖ್ಯವಾಗಿ ಬೆಳೆದಿವೆ. ಪಾಪಾಸು ಕಳ್ಳಿ ಅಥವಾ ಪಾರ್ಥೇನಿಯಮ್‌ನಂತೆ ಅನ್ನಬೇಕೆಂದರೆ ಅವೀಗ ಪ್ರಶಸ್ತಿಯಷ್ಟು ಪ್ರಶಸ್ತವಾಗಿ ಬೆಳೆಯುತ್ತಿಲ್ಲ. ಭ್ರಷ್ಟಾಚಾರದಂತೆ ಬೆಳೆಯುತ್ತಿವೆ ಎನ್ನುವ ಮನಸ್ಸಾಗುತ್ತಿಲ್ಲ. ಏಕೆಂದರೆ ನಾಳೆ ನನಗೂ ಒಂದು ಪ್ರಶಸ್ತಿ ಬಂದರೂ ಬರಬಹುದು! ಈಗಿನ ಹೋಲಿಕೆ ಆಗ ಸರಿಯಾಗಲಿಕ್ಕಿಲ್ಲ.... ಒಟ್ಟಾರೆ ಪ್ರಶಸ್ತಿಗಳಿಗೆ ಪ್ರಶಸ್ತಿಗಳೇ ಹೋಲಿಕೆ. ಈಗ ಪ್ರತಿ ಏಳು ಜನರಲ್ಲಿ ಒಬ್ಬರಿಗೆ ಸಕ್ಕರೆ ಕಾಯಿಲೆ ಇದೆಯಂತೆ. ಮುಂದೆ ಪ್ರಶಸ್ತಿಗೆ ಕೂಡ ಆ ಭಾಗ್ಯ ಬರಬಹುದು...!

ಕೆಲ ಪ್ರಶಸ್ತಿಗಳು ಗಾಂಧಿ-ನೆಹರೂ ಅವರ ಕಾಲ ಬಳಿ ಕುಳಿತು ತೆಗೆಸಿದ ಫೋಟೋಗಳಂತೆ ಮರ್ಯಾದೆ ತರಿಸುತ್ತವೆ. ಕೆಲವು ವರದಕ್ಷಿಣೆ ಕೊಟ್ಟು ಕೊಂಡು ತಂದ ಗಂಡನಂತೆ ಕಳಾಹೀನವಾಗಿರುತ್ತವೆ. ಇನ್ನೂ ಕೆಲವು ದಾವೂದ್ ಇಬ್ರಾಹಿಂ ಜೊತೆ ಹೆಗಲ ಮೇಲೆ ಕೈ ಹಾಕಿ ತೆಗೆಸಿಕೊಂಡ ಫೋಟೋದಂತೆ ಮುಚ್ಚಿಡುವಂತಿರುತ್ತದೆ. ಮತ್ತೆ ಕೆಲವು ಎದರಲ್ಲೋ ಸಿಕ್ಕಿ ಹಾಕಿಕೊಂಡು ಜಾಮೀನಿನ ಮೇಲೆ ಬಿಡಿಸಿಕೊಂಡು ಬಂದು ಮನೆಯಲ್ಲಿ ತಲೆ ಕೆಳಗೆ ಹಾಕಿ ಕುಳಿತಿರುವಂತಿರುತ್ತವೆ. ಇವೆಲ್ಲ ಹೇಳುವಾಗ ಎದೆ ಸೆಟೆಸಿ ನಿಂತ ಜಗಜಟ್ಟಿಯಂತೆ, ಕಣ್ತುಂಬ ನಗು ತುಳುಕಿಸಿಗೊಂಡ ಮಗುವಿನಂತೆ, ಬೆಳೆದು ನಿಂತ ಪೈರುಗಳಂತೆ ಕಾಣುವ ಪ್ರಶಸ್ತಿಗಳ ಇರುವಿಕೆಯನ್ನೂ ನಾವು ಗಮನಿಸಬೇಕು..

ಪ್ರಶಸ್ತಿಗಾರಿಕೆ ಇಂದು ಒಂದು ಬಹುಮಗ್ಗಲಿನ ಉದ್ದಿಮೆ. ಸ್ಪರ್ಧೆ ಇದೆ. ಅಂತೆಯೇ ತಂತ್ರಗಾರಿಕೆಯೂ ಇದೆ. ಕಿಂಗ್ ಮೇಕರ್‌ಗಳಿದ್ದಾರೆ. 'ಲಾಬಿ ಮಾಡದೆ ಯಾವ ಪ್ರಶಸ್ತಿಯೂ ಸಿಗುವುದಿಲ್ಲ. ಮತ್ತು ಒಳ್ಳೆಯವರಿಗಾಗಿ ಲಾಬಿ ಮಾಡಲು ಸಿದ್ಧ' ಎಂಬಂಥ ಮಾತನ್ನು ದೊಡ್ಡ ಪ್ರಶಸ್ತಿ ಪಡೆದವರೇ ಹೇಳುತ್ತಾರೆ. ಹೀಗಾಗಿ ಪ್ರಶಸ್ತಿಗಳು ಇಂದು ತೆಳ್ಳಗಿನ ಪ್ಲಾಸ್ಟಿಕ್‌ನಷ್ಟು ಪಾರದರ್ಶಕತೆ ಪಡೆಯುತ್ತಿವೆ. ಪ್ರಶಸ್ತಿ ಪ್ರಕಟವಾದ ೧೫ ದಿನಗಳವರೆಗೆ ವಾಚಕರ ವಾಣಿ, ಫೇಸ್ ಬುಕ್, ಟ್ವಿಟರ್‌ಗಳಲ್ಲಿ ಉಪ್ಪಿನಕಾಯಿ ನೆಕ್ಕಿದಂಥ, ತುರಿಕೆಯಂಥ ಸುಖನೀಡುವ ಚರ್ಚೆಗಳು ನಡೆದು ಪ್ರಶಸ್ತಿ ತಪ್ಪಿಸಿಕೊಂಡವರಿಗೆ ಪ್ರಶಸ್ತಿ ದೊರಕಿದಕ್ಕಿಂತ ಹೆಚ್ಚಿನ ಸುಖ ಕೊಡುತ್ತವೆ. ಕೆಲವು ಪ್ರಶಸ್ತಿ ಪಡೆದವರ ಅಭಿನಂದನೆ ಸಮಾರಂಭಗಳು ಪಡೆಯದವರನ್ನು ತೆಗಳುವ ಸಮಾರಂಭಗಳಾಗಿ ಬದಲಾಗುತ್ತವೆ.

ಒಂದು ಶಾಲೆಯ ವಾರ್ಷಿಕೋತ್ಸವಕ್ಕೆ ನಾನು ಬಹುಮಾನ ವಿತರಣೆಗೆ ಹೋಗಿದ್ದೆ. ಪ್ರಶಸ್ತಿ ಪತ್ರದ ಜೊತೆಗೆ ಮುನ್ನೂರು, ಐನೂರು ಹಾಗೂ ಸಾವಿರಗಳ ಮುಚ್ಚಿದ ಲಕೋಟೆಗಳ ಬಹುಮಾನ. ಈ ಪ್ರೋತ್ಸಾಹ ನನಗೆ ತುಂಬಾ ಖುಷಿ ತಂದಿತು. ಆದರೆ ಪ್ರಶಸ್ತಿ ಪತ್ರವನ್ನು ಸರಸ್ವತಿಯಂತೆ ಎದೆಗವಚಿಕೊಳ್ಳುತ್ತಿದ್ದ ಮಕ್ಕಳು, ಲಕ್ಷ್ಮೀ ಲಕೋಟೆಗಳನ್ನು ಹರಿದು ಬೀಸಾಡುತ್ತಿದ್ದರು. ಏಕೆಂದರೆ ಅವು ಖಾಲಿ ಲಕೋಟೆಗಳು! ಉದ್ಘೋಷಣೆ ಮಾತ್ರ ಮೊತ್ತವನ್ನು ಹೇಳುತ್ತಿತ್ತು! ಬಾಲ್ಯದಲ್ಲೇ ಈ ಅನುಭವ ಪಡೆವ ಮಕ್ಕಳು ದೊಡ್ಡವರಾದ ಮೇಲೆ ಪ್ರಶಸ್ತಿಗಳ ಬಗ್ಗೆ ಯಾವ ಗೌರವ ಇಟ್ಟುಕೊಂಡಾರು?

ಪ್ರಶಸ್ತಿ ಒಂದು ವ್ಯಾಮೋಹ ಕೂಡ ಇದ್ದಿರಬೇಕು. ನಾನಾ ಕಾಯಿಲೆಗೀಡಾಗಿ ವರ್ಷಗಟ್ಟಲೆ ಊಟ, ತಿಂಡಿ, ಮಾತುಗಳಿಲ್ಲದೆ ಬಿದ್ದಲ್ಲೇ ಬಿದ್ದುಕೊಳ್ಳುವ ಕೆಲ ಹಿರಿಯ ಜೀವಗಳು ಜಪ್ಪಯ್ಯ ಎಂದರೂ ಮುಂದಿನ ಪಯಣಕ್ಕೆ ಅನುವಾಗುವುದಿಲ್ಲ. ಆ ಹೊತ್ತಿಗೆ ಅವರಿಗೊಂದು ಪ್ರಶಸ್ತಿ ಕೊಟ್ಟರೆ ಸಾಕು; 'ಅಂತೂ ಪ್ರಶಸ್ತಿ ಬಂತು' ಎಂದವರೇ ವಿದಾಯ ಹೇಳಿ ಬಿಡುತ್ತಾರೆ. ಕೆಲವರಿಗೆ ಮರಣೋತ್ತರ ಪ್ರಶಸ್ತಿ ನೀಡಿ ಅವರು ಭೂತವಾಗಿ ಕಾಡದಿರುವಂತೆಯೂ ನೋಡಿಕೊಳ್ಳುವ ವ್ಯವಸ್ಥೆಯೂ ಜಾರಿಯಲ್ಲಿದೆ.

ಪ್ರಶಸ್ತಿ ಪಡೆಯುವುದು ಒಂದು ಹೋರಾಟವಾದರೆ ಅವುಗಳನ್ನು ಉಳಿಸಿಕೊಳ್ಳುವುದು ಮತ್ತೂ ಕಷ್ಟದ ಹೋರಾಟ. ಪ್ರಶಸ್ತಿ ಮರಳಿಸುವ ಆಂದೋಲನದ ದಿನಗಳವು. ಕೆಲವರಿಗೆ ಸಂದಿಗ್ಧ ಕಾಲವೂ ಹೌದು. ಒಳ ಒತ್ತಡ ತಾಳದ ಕೆಲವರು ಕಡಿಮೆ ಮೊತ್ತದ ಪ್ರಶಸ್ತಿ ಮರಳಿಸಿ ದೊಡ್ಡ ಮೊತ್ತದವನ್ನು ಉಳಿಸಿಕೊಂಡರು. ಕೆಲವರು ಪತ್ರಿಕೆಯ ಹೇಳಿಕೆಯಲ್ಲಿ ಮಾತ್ರ ಮರಳಿಸಿದರು. ಇಂಥ ಒಂದು ದಿನ ನಾನು ನನ್ನ ಗೆಳೆಯನ ಮನೆಯಲ್ಲಿದ್ದೆ. ಹತ್ತಾರು ಜನ ಪ್ರಶಸ್ತಿ ವಾಪಸು ಸಮಿತಿಯ ಸದಸ್ಯರು ಒಳ ಬಂದರು. ಅವರಲ್ಲೊಬ್ಬರು ನಿಮಗೆ ಮಾಸಾಶನವಿದೆಯೇ ಮತ್ತು ಅಥವಾ ಯಾವುದಾದರೂ ಪ್ರಶಸ್ತಿ ಬಂದಿದೆಯೇ ಎಂಬ ಮಾಹಿತಿಯನ್ನು ಕೋರಿದರು. ಗೆಳೆಯನಿಗೆ ಅವರನ್ನು ನೋಡಿಯೇ ಕೋಪ ಬಂದಿತ್ತು. ಈಗಂತೂ ಹೇಳುವುದೇ ಬೇಡ. ಆತ ಉತ್ತರಿಸಿದ. "ಕೈಯ ತುದಿಯವರೆಗೂ ಬಂದಂಥ ಎರಡು ಪ್ರಶಸ್ತಿ ತಪ್ಪಿಸಿದವರೂ ಇಲ್ಲಿದ್ದಾರೆ. ಈ ಪ್ರಶಸ್ತಿ ಆಸೆ ಬಿಟ್ಟು ಡೊಳ್ಳು ಕುಣಿತದ ಮಾಸಾಶನ ಪಡೆಯುವುದಕ್ಕೆ ಪ್ರಯತ್ನ ಪಟ್ಟಾಗಲೂ ಅದಕ್ಕೆ ಕಲ್ಲು ಹಾಕಿದವರು ಇಲ್ಲೇ ಇದ್ದಾರೆ. ವಿವರ ಕೊಡಲೇ" ಎಂದು ಕೇಳಿದ. ಬಂದವರೆಲ್ಲ" ಬೇಡ ಬೇಡ" ಎಂದವರೇ ಹೋಗಿಯೇ ಬಿಟ್ಟರು. ಗೆಳೆಯನಿಗೆ ಬಹಳ ಸಂತೋಷವಾಗಿತ್ತು. ಸಿಕ್ಕದೆ ಹೋದ ಎರಡು ಪ್ರಶಸ್ತಿಗಳನ್ನು ಮರಳಿಸದೆ ಉಳಿಸಿಕೊಂಡ ಸಂಭ್ರಮ ಮುಖದಲ್ಲಿತ್ತು...!

ಪಡೆದ ಪ್ರಶಸ್ತಿಗಳನ್ನು ನೈತಿಕ ನೆಲೆಯಲ್ಲಿ ಪ್ರತಿಭಟನೆಯ ಮಾರ್ಗವಾಗಿ ಅವುಗಳ ಮೂಲ ಮಾಲೀಕರಿಗೇ ಮರಳಿಸಿದ ಧೀಮಂತರಿದ್ದಾರೆ. ಇಂಥದೇ ನೈತಿಕತೆಯ ಕಾರಣದಿಂದ ಸ್ವೀಕರಿಸದ ಹಿರಿಯರೂ ಇದ್ದಾರೆ. ಅಂತಹ ಸಂದರ್ಭಗಳಲ್ಲಿ ಪ್ರಶಸ್ತಿ ಬಿಟ್ಟವರಿಗೆ ದೊಡ್ಡ ಪ್ರಶಸ್ತಿ ದೊರಕಿದಂಥ ಮರ್ಯಾದೆ ದೊರಕುತ್ತದೆ. ಪಡೆದು ದೊಡ್ಡವರಾದುದಕ್ಕಿಂತ ಬಿಟ್ಟು ದೊಡ್ಡವರಾದವರಿಗೆ ' 'ಅಪರಿಗ್ರಹಣ' ಎಂಬ ಮತ್ತೊಂದು ಪ್ರಶಸ್ತಿ ಕೊಟ್ಟು ಸತ್ಕರಿಸಬೇಕು! ಅಂತೂ ಪ್ರಶಸ್ತಿ ಬಂತು ಅನ್ನುವವರಿಗೆ ಮತ್ತೇನೂ ಬೇಕಾಗುವುದಿಲ್ಲ!



**(ಮೂಲತಃ ಗೋಕಾಕ ಬಳಿಯ ಬೆಟಗೇರಿಯವರಾದ ವಿಜಯೇಂದ್ರ ಪಾಟೀಲರು ಬ್ಯಾಂಕ್‌ವೊಂದರ ನಿವೃತ್ತ ಮ್ಯಾನೇಜರ್ ಮತ್ತು ಕನ್ನಡದ ವಿಶಿಷ್ಟ ಲಘು ಶೈಲಿಯ ಬರಹಗಾರರು)**

**ಚಂದಾದಾರರಾಗಲು ಬಯಸುಯವವರಿಗೆ ಸೂಚನೆ**

ಹೊಸ ಮನುಷ್ಯ'ಕ್ಕೆ ಚಂದಾದಾರರಾಗ ಬಯಸುವವರು ಪತ್ರಿಕೆಯ ಮುಖಪುಟದಲ್ಲಿರುವ ಪತ್ರಿಕೆಯ ವಿಳಾಸಕ್ಕೆ ಸಂಪಾದಕರ ಹೆಸರಿನಲ್ಲಿ ಬರೆದ ಚೆಕ್/ ಡಿಡಿ ಕಳಿಸಬಹುದು. ಅಥವಾ ಸಂಪಾದಕರು, ಹೊಸ ಮನುಷ್ಯ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗೀತಾಕೃಪಾ ಶಾಖೆಯಲ್ಲಿರುವ (ifsc code: sbin 0040444) ಚಾಲ್ತಿ ಖಾತೆ ಸಂಖ್ಯೆ 64110358330 ಇಲ್ಲಿಗೆ ನೆಫ್ಟ್ ಮೂಲಕ ಚಂದಾ ಮೊತ್ತವನ್ನು (ರೂ. 150/-) ವರ್ಗಾವಣೆ ಮಾಡಿ <u>(ನಗದು ಕಟ್ಟುವುದು ಮಾತ್ರ ಬೇಡ)</u> 9449242284 ಈ ಸಂಖ್ಯೆಗೆ ಖಚಿತಪಡಿಸಿ ತಮ್ಮ ವಿಳಾಸ ಕಳಿಸಬೇಕು.-ಸಂ.

## ನವಿಲುಗರಿ

### ನಮ್ಮ ಹಳ್ಳಿಯ ಕಡೆಯ ಜನ

ಎಲ್ಲಿ ಹೋದರು ಅವರು
ನಮ್ಮ ಮನೆಯ ಎತ್ತುಗಳಿಗೆ
ಲಾಳ ಕಟ್ಟಿ ಹೊಡೆದವರು
ಚಳ್ಳಾ ತೊಟ್ಟು ಬಂದವರು!

ಎಲ್ಲಿ ಹೋದರು ಅವರು
ನಮ್ಮ ಮನೆಯ ಪಾತ್ರೆ ಪಗಡಗಳಿಗೆ
ಕಲಾಯಿ ಮಾಡಿದವರು
ಇದ್ದಿಲ ಒಲೆ ಮಾಡಿ ಸುಟ್ಟವರು!

ಎಲ್ಲಿ ಹೋದರು ಅವರು
ನಮ್ಮ ಮನೆಯ ರುಬ್ಬುವ ಬೀಸುವ
ಕಲ್ಲುಗಳಿಗೆ ಉಳಿ ಹಾಕಿದವರು
ಸುತ್ತಿಗೆಯಲಿ ಹೊಡೆದವರು!

ಎಲ್ಲಿ ಹೋದರು ಅವರು
ನಮ್ಮ ತೋಟದ ಹುಣಸೆ–ಮಾವಿನ
ಮರದಿಂದ ಹಣ್ಣು ಇಳುವಿದವರು
ತಲುಪಿನ ಕಡ್ಡಿ ಹಿಡಿದು ಬಂದವರು!

ಎಲ್ಲಿ ಹೋದರು ಅವರು
ಬಿರು ಬೇಸಿಗೆಯಲ್ಲಿ ನಮ್ಮೂರಿಗೆ ಬಂದು
ಐಸ್ ಕ್ಯಾಂಡಿ ಮಾರಿದವರು
ಬೈಸಿಕಲ್ಲಿನಲ್ಲಿ ಊರೂರು ಸುತ್ತಿದವರು!

ಎಲ್ಲಿ ಹೋದರು ಅವರು
ನಮ್ಮ ಮನೆಯ ಹಾಸಿಗೆ ದಿಂಬುಗಳಿಗೆ
ಹತ್ತಿ ತುಂಬಿ ಕೊಟ್ಟವರು
ದೊಣ್ಣೆ ಹಿಡಿದು ಬಂದವರು!

ಎಲ್ಲಿ ಹೋದರು ಅವರು
ಚೂರಿ ಚಾಕು ಕುಡುಗೋಲುಗಳಿಗೆ
ಸಾಣೆ ಹಿಡಿದವರು...
ಕುಲುಮೆ ಮಾಡಿ ಹೊಡೆದವರು!
ಎಲ್ಲಿ? ಎಲ್ಲಿ ಹೋದರು?

**–ಚರಣರಾಜ್**



ಚಿತ್ರ: **ಗುಜ್ಜಾರಪ್ಪ**



### ಎರಡು ಪದ್ಯಗಳು



೧. ಆಗ್ರಹ

ನೋಯುವುದೆಂದರೆ ನನಗೆ
ಪ್ರೀತಿಸಿದಂತೆ
ತನ್ನ ಪರಿವೆಯಿರದೇ
ಮತ್ತೊಂದರೆಡೆಗೆ ಮಿಡಿದಂತೇ
ಸಿಕ್ಕರೆ
ಖಾಲಿ ಬಯಲಿಗೆ
ನೀಲಿ ಬಾನು
ತೋರಿದಂಥ
ಪ್ರೀತಿ ಸಿಗಲೆನಗೆ
ಸಿಕ್ಕರೆ
ತುಕ್ಕು ಹಿಡಿದ
ಒಳರಚನೆಗಳು
ಒಮ್ಮೆಲೇ ಸಿಡಿವಂಥ
ನೋವು ಸಿಗಲೆನಗೆ
ಸಿಕ್ಕ ಮೇಲೆ
ಚೊಕ್ಕವಾಗಿಬಿಡುವಂತೆ.
ಚಿಕ್ಕ ಚೂರೂ ಕಡೆಗೆ ಮಿಕ್ಕದಂತೆ.





ಚಿತ್ರ: **ವಿಜಯಶ್ರೀ ಹಾಲಾಡಿ**

೨. ಕರುಣೆ

ಪುಟ್ಟ ಕರಿ ಕಟ್ಟಿರುವೆಯೇ
ದಿಟ್ಟಿಸುತ್ತಲಿರುವೆ ಏನನ್ನು?
ಇಷ್ಟು ಸುಲಭಕ್ಕೆ
ಬಿಟ್ಟರೆ ಹೇಗೆ ಜೀವದಾಸೆಯನ್ನು?
ದಿಟ್ಟತನದಲ್ಲಿ ಮುನ್ನಡೆ
ನಿನ್ನೊಳಗೆ ಭಯವನ್ನಿಟ್ಟವ
ನನ್ನೊಳಗೆ ಕರುಣೆಯನು
ಇಟ್ಟಿಹನು
ತಿಳಿಯದೇನು?



**–ಸ್ವಯಂಪ್ರಭ ಹೆಗಡೆ**

---

೧೧ನೇ ಪುಟದಿಂದ)

### ‘ಅಚ್ಛೇ’ ದಿನವೂ ಇಲ್ಲ! ದುರ್ದಿನವೂ ಇಲ್ಲ!!



೨೦೧೪ರ ಚುನಾವಣೆಗೆ ಮುನ್ನ ಮೋದಿ ವಿರೋಧಿಗಳು ಮತ್ತು ಮೋದಿ ಭಕ್ತರು ಸೇರಿಕೊಂಡು ದೇಶದಾದ್ಯಂತ ಮೋದಿ ಅಲೆ ಸೃಷ್ಟಿಸಿದ್ದರು. ಮೋದಿ ಅಧಿಕಾರಕ್ಕೆ ಬಂದರೆ ಗುಜರಾತಿನ ಕೋಮು ಹಿಂಸಾಚಾರ ದೇಶದುದ್ದಕ್ಕೂ ವ್ಯಾಪಿಸಿಬಿಡುತ್ತದೆ ಎಂದು ಮೋದಿ ವಿರೋಧಿಗಳು ಆತಂಕ ವ್ಯಕ್ತಪಡಿಸಿದರೆ ಅವರ ಭಕ್ತರು ಇಡೀ ದೇಶವನ್ನೇ ಮೋದಿ ಭೂಸ್ವರ್ಗ ಮಾಡಿಬಿಡುತ್ತಾರೆಂದು ಭವಿಷ್ಯವಾಣಿ ನುಡಿದಿದ್ದರು. ಆದರೆ ಈ ಎರಡೂ ಭವಿಷ್ಯವಾಣಿಗಳೂ ಇಂದು ಸುಳ್ಳಾಗಿವೆ. ಮೋದಿ ಭಾರತವನ್ನಾಳಿದ ಇತರ ಪ್ರಧಾನಿಗಳಿಗಿಂತ ಯಾವುದೇ ರೀತಿಯಲ್ಲೂ ಭಿನ್ನರಲ್ಲ. ಈ ಐದು ವರ್ಷಗಳ ಮೋದಿ ಆಡಳಿತ ಯಾವ ‘ಅಚ್ಛೇ’ ದಿನವನ್ನೂ ನಮಗೆ ದಯಪಾಲಿಸಲಿಲ್ಲ, ಹಾಗೆಯೇ ದುರ್ದಿನವನ್ನೂ ಕೊಡಲಿಲ್ಲ. ಆದಾಗ್ಯೂ ಸದ್ಯಕ್ಕೆ ದೇಶದ ರಾಜಕೀಯ ವಾತಾವರಣದಲ್ಲಿ ಎರಡು ಗುರುತರವಾದ ಲೋಪಗಳು ಕಾಣಿಸುತ್ತಿವೆ. ಒಂದು, ಎನ್‌ಡಿಎ ಆಡಳಿತವನ್ನು ಸಮರ್ಥವಾಗಿ ವಿಮರ್ಶಿಸಿ ಎದುರಿಸಬಲ್ಲ ವಿರೋಧ ಪಕ್ಷಗಳ ಕೊರತೆ. ಇದನ್ನು ತುಂಬಿಕೊಳ್ಳಲೆಂದೇ ವಿರೋಧ ಪಕ್ಷಗಳು ಮೋದಿ ಕುರಿತಾದ ವ್ಯಕ್ತಿನಿಂದೆ ಮತ್ತು ದ್ವೇಷ ರಾಜಕಾರಣದಲ್ಲಿ ತೊಡಗಿವೆ ಎನಿಸುತ್ತದೆ. ಇದರಿಂದ ಮೋದಿಗೆ ಪ್ರಯೋಜನವೇ ಆಗುತ್ತಿದೆ.. ಎರಡನೆಯದು ತಮ್ಮನ್ನು ತಾವು ಮಾರಿಕೊಂಡಿರುವ ಮಾಧ್ಯಮಗಳು. ರಾಜಕೀಯ ಬಿಟ್ಟರೆ ದೇಶದಲ್ಲಿ ಮತ್ತೇನೂ ಸಂಭವಿಸುತ್ತಿಲ್ಲ ಎಂಬ ಭ್ರಮೆ ಹುಟ್ಟಿಸುತ್ತಿವೆ. ಮಾಧ್ಯಮಗಳು ಶ್ರೀಸಾಮಾನ್ಯನನ್ನು ಸುಶಿಕ್ಷಿತನನ್ನಾಗಿಸುವ ವಿಶ್ವವಿದ್ಯಾಲಯಗಳು ಎಂಬ ಮಾತು ಇಂದಿಗೆ ಅಪ್ರಸ್ತುತವಾಗಿದೆ. ಇಂತಹ ಸನ್ನಿವೇಶದಲ್ಲಿ ‘ಹೊಸ ಮನುಷ್ಯ’ ಪತ್ರಿಕೆಯಲ್ಲಿನ ನಿಮ್ಮ ವಿಚಾರ, ವಿಶ್ಲೇಷಣೆಗಳು ಸರಿದಾರಿಯಲ್ಲಿ ಯೋಚಿಸಬೇಕೆಂದು ಹಾತೊರೆವ ನನ್ನಂತಹ ಓದುಗರಿಗೆ ದಾರಿದೀಪವಾಗಿದೆ ಎಂದು ನಿಮಗೆ ಕೃತಜ್ಞತಾಪೂರ್ವಕವಾಗಿ ತಿಳಿಸಲು ಬಯಸುತ್ತೇನೆ)

– **–ಡಾ. ಟಿ.ಎನ್. ವಾಸುದೇವಮೂರ್ತಿ**
**ಅಧ್ಯಾಪಕರು ಮತ್ತು ಚಿಂತಕರು, ಬೆಂಗಳೂರು**

### ದೇಶವನ್ನು ಇಬ್ಭಾಗಿಸಿರುವ ಮೋದಿ ಹಿಂಬಾಲಕರು



ಮೋದಿಗಿಂತ ಹೆಚ್ಚಾಗಿ ಅವರ ಹಿಂಬಾಲಕರೇ ಹೆಚ್ಚು ಅಪಾಯಕಾರಿಯಾಗಿದ್ದಾರೆ.. ದೇಹದಲ್ಲಿನ ಒಂದು ಹನಿ ರಕ್ತ ಕೆಟ್ಟರೂ ದೇಹದ ಮೇಲೆಲ್ಲಾ ಹರಡಿಕೊಳ್ಳುವ ಕಜ್ಜಿಯಂತೆ, ಮೋದಿ ಅಧಿಕಾರಕ್ಕೆ ಬರುತ್ತಿದ್ದಂತೆ ದೇಶಾದ್ಯಂತ ಚಿಗಿತುಕೊಂಡಿರುವ ಇವರು ಕೋಮುವಾದ ಮತ್ತು ದ್ವೇಷವನ್ನು ಹರಡುವ ಮೂಲಕ ಸಾಮಾಜಿಕ ಮತ್ತು ರಾಜಕೀಯವಾಗಿ ಇಡೀ ಭಾರತವನ್ನೇ ಇಭ್ಭಾಗವಾಗಿಸಿದ್ದಾರೆ ಹೀಗೆ ಇವರೇ ದೇಶದ್ರೋಹಿಗಳಾಗಿದ್ದು ಮೋದಿಯನ್ನು ಅಧಿಕಾರದಿಂದ ಕೆಳಗಿಳಿಸುವುದೇ ಇವರಿಗಿರುವ ಮದ್ದು. ಹಾಗಾಗಿ ಘಟಬಂಧನ ಸ್ಥಿರ ಸರ್ಕಾರ ಕೊಡುವುದೋ ಬಿಡುವುದೋ ಎಂಬ ಪ್ರಶ್ನೆ ಸದ್ಯಕ್ಕಂತೂ ಮುಖ್ಯವಲ್ಲ.

**–ಎನ್. ಎಮ್. ಕುಲಕರ್ಣಿ**, ವಸ್ತ್ರ ವಿನ್ಯಾಸಕರು, ಮಾರಾಟಗಾರರು

# ಸಾಹಿತ್ಯ-ಸಾಹಿತಿ-ಸಂಶೋಧನೆ ಇತ್ಯಾದಿ : ಕೆಲ ಟಿಪ್ಪಣಿಗಳು

## ಲಂಕೇಶರನ್ನು ಕುರಿತ ಇನ್ನೊಂದು ಪುಸ್ತಕ ಓದುತ್ತಾ..



ಲಂಕೇಶರೊಡನೆಯ ತನ್ನ ಒಡನಾಟದ ರೋಚಕ ಕಥೆಯೊಂದನ್ನು ಗೆಳೆಯ ಎನ್. ಕೆ. ಮೋಹನರಾಂ ಬರೆದಿದ್ದಾರೆಂದು ಕೇಳಿದ್ದೆ. ಮೊನ್ನೆ ಲಂಕೇಶರ ಅಭಿಮಾನಿ ಬಳಗದಲ್ಲಿದ್ದ ಗೆಳೆಯರೊಬ್ಬರ ಮನೆಗೆ ಹೋದಾಗ ಅವರು ಈ ಪುಸ್ತಕವನ್ನು ಓದಿ ರೋಮಾಂಚನಗೊಂಡದ್ದನ್ನು ಹೇಳುತ್ತಾ ಇದರಲ್ಲಿ ಒಂದೆಡೆ ನಿಮ್ಮ ಪ್ರಸ್ತಾಪವೂ ಇದೆ ಎಂದು ಅದನ್ನು ಓದಲು ನನಗೆ ಕೊಟ್ಟರು.

ನಾನೂ ಮೋಹನರಾಂರಂತೆಯೇ ಲಂಕೇಶರೊಂದಿಗೆ -ಅವರಷ್ಟು ಆತ್ಮೀಯ ಮತ್ತು ದೀರ್ಘಕಾಲದಷ್ಟಲ್ಲದಿದ್ದರೂ- ಒಡನಾಟ ಹೊಂದಿದವನೇ. ಅವರೊಬ್ಬ ಕನ್ನಡದ ಶ್ರೇಷ್ಠ ಲೇಖಕರು ಎಂಬುದು ನಿಜ ಅವರ 'ಲಂಕೇಶ್ ಪತ್ರಿಕೆ'ಯ ಸ್ವಲ್ಪ ಕಾಲದ ವಿಶೇಷ ವರದಿಗಾರನ ಪಟ್ಟ ಅನುಭವಿಸಿದ್ದರ ಆಧಾರದ ಮೇಲೆ ಹೇಳುವುದಾದರೆ ಅವರೊಬ್ಬ ಅತ್ಯಂತ ಅಪ್ರಾಮಾಣಿಕ ಪತ್ರಕರ್ತ ಮತ್ತು ಹಲವು ಕೆಟ್ಟತನಗಳ ಮನುಷ್ಯ ಎಂದು ನಿಸ್ಸಂಶಯವಾಗಿ ಹೇಳಬಲ್ಲೆ. ಈ ಮಾತಿನಿಂದ ಅವರ ಪತ್ರಿಕೆಯ ಬಗ್ಗೆ ಇನ್ನೂ ಪ್ರೀತಿ ಇಟ್ಟುಕೊಂಡಿರುವ ಗೆಳೆಯ-ಗೆಳತಿಯರಿಗೆ ಬೇಸರವಾಗಬಹುದು. ನನ್ನ ಪತ್ರಿಕಾ ಬರವಣಿಗೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಅದನ್ನು ಲಂಕೇಶರ ಪತ್ರಿಕಾ ಬರವಣಿಗೆಗೆ ಹೋಲಿಸಿದ ಕೆಲವರಿಗೆ ಪ್ರತಿಕ್ರಿಯಿಸುತ್ತಾ, ಇದು ಸಮರ್ಪಕ ಹೋಲಿಕೆಯಲ್ಲ; ಏಕೆಂದರೆ ಲಂಕೇಶರಿಗೆ ಓದುಗರು ತಮ್ಮ ಪತ್ರಿಕಾ-ಉದ್ಯಮದ ಗ್ರಾಹಕರೂ ಆಗಿದ್ದರು. ಹಾಗಾಗಿ ಅವರು ತಮ್ಮ ಸಾಹಿತ್ಯ ಭಾಷೆಯ ವಿಶಿಷ್ಟ ಶಕ್ತಿಯಾದ ಕಾವ್ಯಮಯತೆಯನ್ನು ರಾಜಕೀಯ-ಸಾಮಾಜಿಕ ವಿಷಯಗಳನ್ನೂ ಹೇಳಲು ಬಳಸುವಾಗ ಅನೇಕ ಅರ್ಧ ಸತ್ಯಗಳೂ, ಪೂರ್ಣ ಅಸತ್ಯಗಳೂ ಅಲ್ಲಿ ಮೆರೆದಾಡುತ್ತಿದ್ದವು ಎಂದು ವಿವರಿಸಿದ್ದೆ. ನಾನು ೧೯೮೦ರಲ್ಲಿ ನನ್ನ ದೆಹಲಿ ಉದ್ಯೋಗ ಬಿಟ್ಟು 'ಲಂಕೇಶ್ ಪತ್ರಿಕೆ' ಸೇರಿದ ತ್ವರೆಯಲ್ಲೇ ಅದನ್ನು ಬಿಟ್ಟು ಬರಲು ಇದೂ ಒಂದು ಕಾರಣವಾಗಿತ್ತು, ಈ ಸಂಬಂಧವಾಗಿಯೇ ಈ ಪುಸ್ತಕದಲ್ಲಿ ನನ್ನ ಪ್ರಸ್ತಾಪ ಬರುವುದು, ಲಂಕೇಶ್ ಪತ್ರಿಕೆಯನ್ನು ಹುರುಪಿನಲ್ಲಿ ಸೇರಿ ನಿರಾಶರಾಗಿ ಬಿಟ್ಟುಹೋದವರ ಬಗ್ಗೆ ಮೋಹನರಾಂ ಬರೆಯುತ್ತಾ, ಹೀಗೆ ಪತ್ರಿಕೆಯನ್ನು ಬಿಟ್ಟು ಹೋಗುವಾಗ 'ನಾಳೆಯಿಂದ ನಾನು ಬರುವುದಿಲ್ಲ' ಎಂದು ಹೇಳಿಹೋಗುವ ಧೈರ್ಯ ಮಾಡಿದವರು ಬಹುಶಃ ಡಿ.ಎಸ್. ನಾಗಭೂಷಣ್ ಒಬ್ಬರೇ ಎಂದು ದಾಖಲಿಸುವಲ್ಲಿ. ನನ್ನ ಕುರಿತ ಈ ಮಾತಿಗಾಗಿ ಲೇಖಕರಿಗೆ ನನ್ನ ಕೃತಜ್ಞತೆ ಹೇಳಬೇಕು.

ಮಿಕ್ಕಂತೆ, ಪತ್ರಕರ್ತರಿಗಿಂತ ಹೆಚ್ಚಾಗಿ ಪತ್ರಿಕೋದ್ಯಮಿಯಾಗಿ ಬೆಳೆದಿದ್ದ ಲಂಕೇಶ್ ವ್ಯಕ್ತಿಯಾಗಿ ಹೇಗೆ ಸಾಕಷ್ಟು ಕೇಡುಗರೂ ಆಗಿದ್ದರು ಎಂಬುದನ್ನು ನಾನು ಹೇಳಬಲ್ಲುದುದಕ್ಕಿಂತ ಹೆಚ್ಚು ವಿವರವಾಗಿ ಮತ್ತು ತೀವ್ರತೆಯಿಂದ ಈ ಪುಸ್ತಕದಲ್ಲಿ ಮೋಹನರಾಂ ಹೇಳಿದ್ದಾರೆ. ಲಂಕೇಶರು ವ್ಯಾವಹಾರಿಕವಾಗಿಯಾಗಲೀ, ತಾತ್ವಿಕವಾಗಿಯಾಗಲೀ ನೇರ ಅಥವಾ ಶುದ್ಧರಾಗಿರಲಿಲ್ಲ; ಬದಲಿಗೆ ತಮ್ಮ ಆತ್ಮಸಾಕ್ಷಿಗೆ-ಅದು ಇದ್ದಲ್ಲಿ-ದ್ರೋಹ ಬಗೆದುಕೊಂಡು ನೆಮ್ಮದಿಯಾಗಿರಬಲ್ಲ ಜಾಣರಾಗಿದ್ದರು ಎಂಬುದನ್ನು ಲೇಖಕರು ಅವರ ಸಾಹಿತ್ಯ ಮತ್ತು ಪತ್ರಕರ್ತ ಜೀವನದ ಹಲವು ಪ್ರಸಂಗಗಳನ್ನು ಮುಂದಿಡುತ್ತಾ ಸೂಚಿಸುತ್ತಾರೆ.

ಆದರೆ ಇಲ್ಲೊಂದು ನನ್ನದೇ ಮಾತು: ಆತ್ಮಸಾಕ್ಷಿಗೆ ದ್ರೋಹ ಬಗೆದುಕೊಂಡು ಒಂದಿಷ್ಟು ಸುಖ-ಸವಲತ್ತುಗಳನ್ನು ಅನುಭವಿಸಿದ ನಂತರದಲ್ಲೇ ಲಂಕೇಶರ ಆತ್ಮಸಾಕ್ಷಿ ಎಚ್ಚೆತ್ತು ಅವರು ಪಡುವ ಪಾಪಪ್ರಜ್ಞೆಯ ಪಡಿಪಾಟಲೇ ಅವರ ಸಾಹಿತ್ಯ ಕೃತಿಗಳ ಜೀವಾಳವಾಗಿದೆ. ಈ ಪಾಪಪ್ರಜ್ಞೆಯ ತಲ್ಲಣಗಳೇ ಆಧುನಿಕತೆಯಲ್ಲಿ ಆತ್ಮವನ್ನು ಇಬ್ಭಾಗಿಸಿಕೊಂಡಿರುವ ಸಮಕಾಲೀನ ಓದುಗರ ಪಾಪಪ್ರಜ್ಞೆಯೊಂದಿಗೆ ಸಹ-ಸ್ಪಂದಿಸಿ ಅವರನ್ನು ನಮ್ಮ ಕಾಲದ ಮಹತ್ವದ ಲೇಖಕರನ್ನಾಗಿ ಮಾಡಿರುವುದು ಎಂದು ನನಗನ್ನಿಸುತ್ತದೆ. ಅವರು ಆಧುನಿಕ ಕನ್ನಡದ ಅತ್ಯಂತ ಹೆಚ್ಚು ತೀವ್ರತೆಯ 'ಸದ್ಯತನ'ದ ಲೇಖಕರು. ಆದರೆ ಅವರು ಆಳದಲ್ಲಿ ನಿಜ ಸತ್ವದ ಲೇಖಕರೂ ಆಗಿದ್ದುದರಿಂದ ಇದೆಲ್ಲ ಅವರಿಗೆ ನಂತರದಲ್ಲಿ ಆಯಾಸವೆನ್ನಿಸತೊಡಗಿ ತಮ್ಮ ಕೊನೆಯ ವರ್ಷಗಳಲ್ಲಿ ಬೇರೆ ತೆರನ-ಮನುಷ್ಯನ ಒಳ್ಳೆಯತನವನ್ನು ಶೋಧಿಸುವ -ಕಥೆಗಳನ್ನು ಬರೆಯತೊಡಗಿದರು. (ಉದಾ: 'ಕಲ್ಲು ಕರಗುವ ಸಮಯ' ಇತ್ಯಾದಿ) ಆದರೆ ಅವೇನೂ ತುಂಬ ಒಳ್ಳೆಯ ಕಥೆಗಳಲ್ಲ. ಪತ್ರಕರ್ತತನದ ತೆಳು ಬರವಣಿಗೆಯ ವಿಸ್ತರಣೆ ಮಾತ್ರದಂತಿವೆ. ಬಹುಶಃ ಅದು ಗೊತ್ತಾಗಿಯೇ ಅವರು ತಮ್ಮ ಪತ್ರಿಕೆಯಲ್ಲಿ ಮಾಸ್ತಿ ಕಥೆಗಳನ್ನು ಮರುಮುದ್ರಿಸ ತೊಡಗಿ 'ಪಾಪ ಪರಿಹಾರ'ದ ಪ್ರಯತ್ನ ಮಾಡಿದರೆಂದೆನಿಸುತ್ತದೆ



ಅದೇನೇ ಇರಲಿ, ಈ ಮೋಹನರಾಂ ಅವರ ಪುಸ್ತಕದ ತೊಂದರೆ ಎಂದರೆ ಲಂಕೇಶ್ ಅವರ ಸಾಹಿತ್ಯ ಬಿಟ್ಟು ತಮ್ಮ ಸೃಜನಶೀಲತೆಯಲ್ಲಿ ಮಾಡಿದ ಎಲ್ಲ ದಾಖಲೆಯ ಕೆಲಸಗಳಿಗೂ ತಾನೇ ಮೂಲ ಪ್ರೇರಣೆ ಎಂದು ಹೇಳುವುದು ಮತ್ತು ಲಂಕೇಶ್‌ರ ವ್ಯಕ್ತಿತ್ವವನ್ನು ಕಟ್ಟಿಕೊಡುವ ಪ್ರಯತ್ನದಲ್ಲಿ ಒಂದು ಸಮಗ್ರ ನೋಟ ಕಾಣೆಯಾಗಿ, ಅಲ್ಲಲ್ಲಿ ವಿರೋಧಾಭಾಸದ ಮಾತುಗಳನ್ನಾಡಿರುವುದು. ಇದಕ್ಕೆ ಲಂಕೇಶರ ಛಿದ್ರ ವ್ಯಕ್ತಿತ್ವವೂ ಕಾರಣವಿರಬಹುದಾದರೂ ನಿರೂಪಣೆ ಅದನ್ನು ಮೀರಿ ಒಂದು ದೃಷ್ಟಿ ಕೇಂದ್ರವನ್ನು ಗಳಿಸಿಕೊಳ್ಳಬೇಕಿತ್ತು..

ಈ ಪುಸ್ತಕ ಲಂಕೇಶರ ಕಥೆ ಹೇಳುವುದರ ಜೊತೆಯಲ್ಲೇ ಆ ಕಾಲದ ಬೆಂಗಳೂರಿನ ಸಾಂಸ್ಕೃತಿಕ ಲೋಕದ ಚರಿತ್ರೆಯನ್ನೂ ಲೇಖಕರ ದೃಷ್ಟಿಯ ಮಿತಿಯಲ್ಲಿ ಹೇಳುವ ಪ್ರಯತ್ನ ಮಾಡುತ್ತದೆ. ಹಾಗಾಗಿ ಈ ಚರಿತ್ರೆಯ ಮಧ್ಯ ಭಾಗದಲ್ಲಲ್ಲದಿದ್ದರೂ ಸುತ್ತಳತೆಯಲ್ಲಿದ್ದ ನನ್ನಂಥವನಲ್ಲಿ ಈ ಪುಸ್ತಕ ಹಳೆಯ ನೆನಪುಗಳ ಅಲೆಯನ್ನೆಬ್ಬಿಸಿ ನಾವು ಎಂಥ ರೋಮಾಂಚನದ ಕಾಲದಲ್ಲಿದ್ದೆವು ಎಂದು ಹೆಮ್ಮೆಪಡುವಂತಾಗುತ್ತದೆ. ಆದರೆ ಈ ಪುಸ್ತಕದಲ್ಲಿ ಲೋಹಿಯಾವಾದಿಗಳನ್ನು ಕುರಿತ ಕಹಿ ಬೆರೆತ ವ್ಯಂಗ್ಯ ಮತ್ತು ಕೆಲ ಹಿರಿ ಕಿರಿಯರನ್ನು ಕುರಿತ ಕಟಕಿಗಳಿಗೆ ಲೇಖಕರದ್ದೇ ಆದ ಕಾರಣಗಳಿದ್ದಂತೆ ಕಂಡರೂ ಅದು ಇಲ್ಲಿ ಹದ ಮೀರಿದೆ ಎನ್ನಿಸದಿರದು. ಜೊತೆಗೆ ಇಲ್ಲಿ ವ್ಯಕ್ತಪಡಿಸಲಾಗಿರುವ ಎಲ್ಲ ಅಭಿಪ್ರಾಯ-ತೀರ್ಮಗಳನ್ನು ಒಮ್ಮೆ ತಿಕ್ಕಿ ತೀಡದೆ ಒಪ್ಪಿಕೊಳ್ಳುವಂತಿಲ್ಲ. ಉದಾ: 'ಪಲ್ಲವಿ' ಒಂದು ಕಳಪೆ ಚಿತ್ರವಾಗಿತ್ತು ಎಂಬ ಮಾತು. ಹಾಗೇ ಪಲ್ಲವಿಗೆ ರಾಷ್ಟ್ರ ಪ್ರಶಸ್ತಿ ಬರುವಲ್ಲಿ ಸ್ನೇಹಲತಾ ರೆಡ್ಡಿಯವರ ಪ್ರಭಾವವೂ ಇರಬಹುದು ಎನ್ನುತ್ತಾರೆ ಮೋಹನರಾಂ.. ಆದರೆ ಆ ಹೊತ್ತಿಗೆ ಸ್ನೇಹಲತಾ ನಿಧನರಾಗಿದ್ದರು ಎಂಬುದನ್ನು ಮೋಹನರಾಂ ಮರೆತಂತಿದೆ.

ಕೊನೆಯದಾಗಿ: ಈ ಪುಸ್ತಕಕ್ಕೆ 'ದ ಕ್ಯಾಪಿಟಲ್': ಲಂಕೇಶ್ ಪ್ರವೇಟ್ ಲಿಮಿಟೆಡ್ ಎಂಬ ಹೆಸರನ್ನೇಕೆ ಇಟ್ಟಿದ್ದಾರೋ ತಿಳಿಯದು. ಮೂಲತಃ ಕಮ್ಯುನಿಷ್ಟರಾದ ಮೋಹನರಾಂ ಇದನ್ನು ತಮ್ಮ 'ದಾಸ್ ಕ್ಯಾಪಿಟಲ್ 'ಎಂದು ಬರೆದರೇ ಅಥವಾ ಲಂಕೇಶರು ಪತ್ರಿಕೆ ಮೂಲಕ ಮಾಡಿದ ಆಸ್ತಿಯನ್ನೆಲ್ಲ ಮೋಹನರಾಂರಲ್ಲಿ ಆರಂಭದಲ್ಲಿ ಹುಟ್ಟಿಸಿದ್ದ ನಿರೀಕ್ಷೆಗೆ ವಿರುದ್ಧವಾಗಿ ತಮ್ಮ ಕುಟುಂಬಕ್ಕೇ ಬರೆದುಹೋದರೆಂಬ ಸಂಗತಿ ಕುರಿತ ಕಟಕಿಯಾಗಿಯೇ? ಮೋಹನರಾಂ ಯಾವ ಕಾಲದಲ್ಲಿದ್ದಾರೋ!

## ನಮ್ಮ ವಿಶ್ವವಿದ್ಯಾಲಯಗಳೆಂಬ ಪಿಎಚ್‌ಡಿ ಕಾರ್ಖಾನೆಗಳು

ಇತ್ತೀಚೆಗೆ ನಾನೊಂದು ವಿಶ್ವವಿದ್ಯಾಲಯದ ಆವರಣದಲ್ಲಿ ವಸತಿ ಹೂಡಬೇಕಾಯಿತು. ಅಲ್ಲಿ ಕನ್ನಡ ಸಾಹಿತ್ಯದ ಕೆಲ ಸಂಶೋಧನಾ ವಿದ್ಯಾರ್ಥಿಗಳು ಮಾತನಾಡಲು ಸಿಕ್ಕರು. ನಾನು ಅವರನ್ನು ಅವರ ಪಿಎಚ್‌ಡಿಯ ವಿಷಯಗಳೇನೆಂದು ಕುತೂಹಲಕ್ಕೆ ವಿಚಾರಿಸಿದೆ. ಒಂದಿಬ್ಬರು ಹೇಳಿದ ಹನುಮಂತನ ಬಾಲದಂತಿದ್ದ ಶೀರ್ಷಿಕೆಗಳನ್ನು ಕೇಳಿ ಗಾಬರಿಯಾದೆ. ಅದನ್ನು ಅರಿತ ಅಲ್ಲಿಯೇ ಇದ್ದ ಅಧ್ಯಾಪಕರೊಬ್ಬರು, ಇತ್ತೀಚೆಗೆ ಎಷ್ಟೊಂದು ಪಿಎಚ್‌ಡಿಗಳು ತಯಾರಾಗುತ್ತಿವೆ ಎಂದರೆ, ಸಂಶೋಧನೆಯ ವಿಷಯಗಳಿಗಾಗಿ ನಾವಿಂದು ಸಾಹಿತ್ಯ ವಲಯದ ಮೂಲೆ ಮೂಲೆಗಳನ್ನು ತಡಕಾಡಬೇಕಾಗಿದೆ ಆ ಮೂಲೆಯನ್ನು ವಿವರಿಸಲು ಉದ್ದನೆಯ ಶೀರ್ಷಿಕೆ ಅಗತ್ಯವಾಗಿದೆ ಎಂದರು. ಅಷ್ಟರಲ್ಲಿ ಅಲ್ಲಿಗೆ ಬಂದ ಇನ್ನೊರ್ವ ಸಂಶೋಧನಾ ವಿದ್ಯಾರ್ಥಿ ತನ್ನದು ಚಿಕ್ಕ ಶೀರ್ಷಿಕೆಯ ವಿಷಯವಾಗಿದೆ ಎಂದು ಅದನ್ನು ಹೇಳಿದಾಗ ನನಗೆ ತಲೆ ಸುತ್ತು ಬಂದಂತೆ ಆಯಿತು. ಅದು: 'ಅಹಿಂದ ಕಥೆಗಾರರು: ಒಂದು ಅಧ್ಯಯನ'!

ಹೌದು ಅಧ್ಯಾಪಕರು ಹೇಳಿದ್ದು ನಿಜ. ವಿಶ್ವವಿದ್ಯಾಲಯಗಳ, ಕಾಲೇಜುಗಳ ಸಂಖ್ಯೆ ಜೊತೆಗೇ ಅವುಗಳ ಮೇಷ್ಟ್ರುಗಳ ಸಂಬಳ ಭತ್ಯೆಗಳೂ ಹೆಚ್ಚುತ್ತಿದ್ದಂತೆ ಈ ಹುದ್ದೆಗೆ ಬೇಕಾದ ಪಿಎಚ್‌ಡಿಗಳ ಬೇಡಿಕೆಯೂ ಹೆಚ್ಚಿದೆ. ಹೀಗಾಗಿ ಇಂದು ಸಂಶೋಧನೆ ಎಂಬುದು ಅಧ್ಯಯನ-ಶ್ರದ್ಧೆಯ ಕೆಲಸವಾಗಿಲ್ಲ. ನಾಯಿಕೊಡೆಗಳಂತೆ ಹೊರಬರುತ್ತಿರುವ ಪಿಎಚ್‌ಡಿ ಪ್ರಬಂಧಗಳ ಮೇಲೆ ಕಣ್ಣಾಡಿಸಿದರೇ ಅಥವಾ ಈ ಪದವಿ ಪಡೆದವರನ್ನು ಸುಮ್ಮನೆ ಮಾತನಾಡಿಸಿದರೇ ಅವುಗಳ ಬಂಡವಾಳ ಗೊತ್ತಾಗುತ್ತದೆ. ಪಿಎಚ್‌ಡಿ ಎಂಬುದು ಉದ್ಯೋಗ ಮಾರುಕಟ್ಟೆಯ ಅತಿ ಬೇಡಿಕೆಯ ವಸ್ತುವಾಗುತ್ತಿದ್ದಂತೆ ಪಿಎಚ್‌ಡಿ ಪ್ರಬಂಧ ಬರೆಯುವ ಬಾಡಿಗೆ ಪಂಡಿತರ ಒಂದು ದಂಡೇ ಸಿದ್ಧವಾಗಿ ಪಿಎಚ್‌ಡಿ ಕಾರ್ಖಾನೆಗಳನ್ನು ನಡೆಸತೊಡಗಿದೆ ಎಂದು ಆ ಅಧ್ಯಾಪಕರೇ ವಿಷಾದದಿಂದ ಹೇಳಿದರು! ಇದು ನಮ್ಮ ವಿಶ್ವವಿದ್ಯಾಲಯಗಳಲ್ಲಿನ ಇಂದಿನ ಪಾಂಡಿತ್ಯದ ಪರಿಸ್ಥಿತಿ.

-ಡಿಎಸ್ಸೆನ್

# ಇಸ್ಲಾಂ ಧರ್ಮ ವಿಚಾರಗಳು



ಇಸ್ಲಾಂ ಧರ್ಮ ಸ್ಥಾಪಿತವಾಗಿದ್ದು ಮಹಮ್ಮದ್ ಪೈಗಂಬರ್ ಅವರಿಂದ (ಕ್ರಿ.ಶ. ೫೭೦–೬೩೨) ಇಸ್ಲಾಂ ಧರ್ಮದ ಪ್ರಕಾರ ಇವರು ಆದಂ, ಅಬ್ರಹಾಂ, ಮೋಸೆಸ್ ಮತ್ತು ಜೀಸಸ್ ನಂತರದ ಕೊನೆಯ ಪ್ರವಾದಿಯಾಗಿದ್ದು ತಮ್ಮ ಮುಂಚಿನ ಈ ಪ್ರವಾದಿಗಳು ಬೋಧಿಸಿದ್ದ ಏಕದೇವತೋಪಾಸನೆಗೆ ಸಂಬಂಧಿಸಿದ ಪ್ರವಚನಗಳನ್ನು ಇನ್ನಷ್ಟು ಪ್ರಕಾಶಿಸಿ ಜನರಲ್ಲಿ ಅವು ಬೇರೂರುವಂತೆ ಮಾಡಿದ ಕೊನೆಯ ಪ್ರವಾದಿ.

ತಮ್ಮ ಬಾಲ್ಯದಲ್ಲೇ ತಂದೆ ತಾಯಿಗಳನ್ನು ಕಳೆದುಕೊಂಡ ಪೈಗಂಬರರು ಬೆಳೆದದ್ದು ಮೆಕ್ಕಾದ ತಮ್ಮ ತಾತ ಮತ್ತು ಅವರ ಮರಾಣನಂತರ ಚಿಕ್ಕಪ್ಪನ ಆಶ್ರಯದಲ್ಲಿ. ಹುಟ್ಟಿನಿಂದಲೇ ಧಾರ್ಮಿಕ ಒಲವನ್ನು ಹೊಂದಿದ್ದ ಅವರು ವಯಸ್ಕರಾದ ನಂತರ ಏಕಾಂತವನ್ನು ಇಷ್ಟಪಡುತ್ತಾ ಆಗಾಗ ಊರಾಚೆಯ ಗುಡ್ಡವೊಂದರಲ್ಲಿದ್ದ ಗುಹೆಯೊಂದರಲ್ಲಿ ಹಲವು ರಾತ್ರಿಗಳ ಕಾಲ ಧ್ಯಾನಸ್ಥರಾಗಿಬಿಡುತ್ತಿದ್ದರು. ಮಹಮ್ಮದರ ೪೦ನೇ ವಯಸ್ಸಿನಲ್ಲಿ ಒಮ್ಮೆ ಆ ಗುಹೆಯಲ್ಲಿ ಅವರು ಗೇಬ್ರಿಯಲ್ ಎಂಬ ದೇವದೂತನನ್ನು ಕಂಡದ್ದಾಗಿಯೂ ಆತನ ಮೂಲಕ ತಮಗೆ ದೇವರ ಮೊದಲ ಸಂದೇಶ ತಲುಪಿದ್ದಾಗಿಯೂ ತಮ್ಮ ಆಪ್ತರಲ್ಲಿ ಹೇಳಿಕೊಂಡರು. ನಂತರ ನಿರಂತರವಾಗಿ ಅವರಿಗೆ ಆ ಗುಹೆಯಲ್ಲಿ ದೇವರ ಸಂದೇಶಗಳು ತಲುಪುತ್ತಿದ್ದವು.ಮೂರು ವರ್ಷಗಳ ನಂತರ ಅವರು ದೇವರ ಆ ಸಂದೇಶಗಳನ್ನು ಜನರಲ್ಲಿ ಪ್ರಚಾರ ಮಾಡಲು ಆರಂಭಿಸಿದರು. ದೇವರಲ್ಲಿ ಶರಣಾಗತಿ ಎಂಬರ್ಥದ ಇಸ್ಲಾಂ ಎಂಬ ಧರ್ಮ ಆರಂಭವಾದದ್ದು ಹೀಗೆ. ಅದರ ಮುಖ್ಯ ನಂಬಿಕೆ: ದೇವರು ಒಬ್ಬನೇ ಮತ್ತು ಅವನು ನಿರಾಕಾರ.

ಮಹಮ್ಮದರು ತಮ್ಮ ಧರ್ಮ ಪ್ರಚಾರ ಆರಂಭಿಸಿದಾಗ ಅವರ ಅನುಯಾಯಿಗಳಾಗಿದ್ದು ಕೆಲವರು ಮಾತ್ರ. ಅವರು ಮೆಕ್ಕಾದಲ್ಲಿ ಬಹುಸಂಖ್ಯಾತರಾಗಿದ್ದ ಬಹುದೇವತಾ ವಿಗ್ರಹಾರಾಧಕರಿಂದ ಪದೇ ಪದೇ ಕಿರುಕುಳವನ್ನು ಅನುಭವಿಸಬೇಕಾಯಿತು. ಆಗ ಅವರು ತಮ್ಮ ಅನುಯಾಯಿಗಳನ್ನು ಮೆಕ್ಕಾದ ಅಧಿಕಾರಿಗಳ ಶಿಕ್ಷೆಯಿಂದ ರಕ್ಷಿಸಲು ಅಬಿಸೀನಿಯಾಗೆ ಕಳಿಸಿ, ನಂತರ ಕೆಲವೇ ವರ್ಷಗಳಲ್ಲಿ ತಾವೂ ತಮಮಿಕ್ಕ್ಮ ಅನುಯಾಯಿಗಳೊಂದಿಗೆ ೬೨೨ರಲ್ಲಿ ಮದೀನಾ ನಗರಕ್ಕೆ ವಲಸೆ ಹೋಗಿ ಅಲ್ಲಿ ತಮ್ಮ ಸಂದೇಶಗಳ ಪ್ರಚಾರ ಆರಂಭಿಸಿದರು. ಆ ನಗರದ ಆಡಳಿತ ಸಂಹಿತೆಯ ಪ್ರಕಾರ ಅವರು ಅಲ್ಲಿನ ವಿವಿಧ ಬುಡಕಟ್ಟುಗಳನ್ನು ಒಂದುಗೂಡಿಸಿ, ಆಗಾಗ್ಗೆ ತಮ್ ಮೇಲೇ ಆಕ್ರಮಣ ಮಾಡುತ್ತಿದ್ದ ಮೆಕ್ಕಾದ ವಿವಿಧ ಬುಡಕಟ್ಟು ಜನರ ವಿರುದ್ಧ ಅವರನ್ನು ಸಂಘಟಿಸಿದರು. ೬೩೦ರ ಡಿಸೆಂಬರ್‌ನಲ್ಲಿ ಅವರು ತಮ್ಮ ಹತ್ತು ಸಾವಿರ ಅನುಯಾಯಿಗಳ ಸೇನೆಯೊಂದಿಗೆ ಮೆಕ್ಕಾನಗರದ ಮೇಲೆ ದಾಳಿ ನಡೆಸಿ ಹೆಚ್ಚೇನೂ ರಕ್ತಪಾತವಿಲ್ಲದೆ ಆ ನಗರವನ್ನು ವಶಪಡಿಸಿಕೊಂಡು ಅಲ್ಲಿಯೇ ನೆಲೆಸಿದರು. ನಂತರ ಅವರು ಧರ್ಮ ಪ್ರಚಾರದ ಮೂಲಕ ಇಡೀ ಅರೇಬಿಯಾಪರ್ಯಾಯ ದ್ವೀಪವನ್ನು ಇಸ್ಲಾಂ ಧರ್ಮದ ದೇಶವನ್ನಾಗಿ ಪರಿವರ್ತಿಸಿದ್ದರು. ಈ ಮಧ್ಯೆ ಒಮ್ಮೆ ಮದೀನಾಕ್ಕೆ ಯಾತ್ರೆ ಹೋಗಿ ಮರಳಿಬಂದ ನಂತರ ಅಸ್ವಸ್ಥರಾದ ಮಹಮ್ಮದರು ೬೩೨ರಲ್ಲಿ ಮರಣವನ್ನಪ್ಪಿದರು. ಮರಣದ ದಿನದವರೆಗೂ ಅವರಿಗೆ ದೇವರ ಸಂದೇಶಗಳು ತಲುಪುತ್ತಿದ್ದವು ಎಂದು ಹೇಳಲಾಗುತ್ತದೆ. ಈ ಸಂದೇಶಗಳ ಸಂಗ್ರಹವೇ ಕುರಾನ್ ಧರ್ಮಗ್ರಂಥ. ಧರ್ಮಾಚರಣೆಯ ಸಂಹಿತೆ ಹದೀಸ್ ಮತ್ತು ಪ್ರವಾದಿಯ ಜೀವನಚರಿತ್ರೆ 'ಸಿರಾ' ಈ ಮೂರೂ ಸೇರಿ ಇಸ್ಲಾಂ ನಿಯಮಗಳ ಷರಿಯತ್ ಅನ್ನಿಸಿಕೊಳ್ಳುತ್ತದೆ. ಮಹಮ್ಮದರು ಸ್ಥಾಪಿಸಿದ ಧರ್ಮ ಮತ್ತು ಮಾಡಿದ ಧರ್ಮ ಪ್ರಚಾರದ ಮೂಲ ಉದ್ದೇಶವೆಂದರೆ ಅವರ ಕಾಲದ ಅನಾಗರಿಕ ಬುಡಕಟ್ಟುಗಳನ್ನು ಒಂದು ನಾಗರೀಕ ಸಮಾಜವನ್ನಾಗಿ ಮಾಡುವುದೇ ಆಗಿತ್ತು. ಹಾಗಾಗಿ ಅವರ ಉಪದೇಶಗಳು ಈ ಲೋಕದಲ್ಲಿನ ಸದ್ವರ್ತನೆಯ ಕಡೆಗೇ ಹೆಚ್ಚು ಒತ್ತುಕೊಟ್ಟಿದೆ. ಅಂಥವಲ್ಲಿ ಕೆಲವನ್ನು ಆಯ್ದುಇಲ್ಲಿ ನೀಡುತ್ತಿದ್ದೇವೆ–ಸಂ.

–ಓ ಅಲ್ಲಾಹು, ನನ್ನ ಮನಸ್ಸನ್ನು ಕಪಟದಿಂದ ನನ್ನ ಕೆಲಸಗಳನ್ನು ಪ್ರದರ್ಶನದ ಆಡಂಬರದಿಂದ, ನನ್ನ ನಾಲಗೆಯನ್ನು ಸುಳ್ಳಿನಿಂದ ಮತ್ತು ನನ್ನ ವರ್ತನೆಯನ್ನು ವಂಚನೆಯಿಂದ ಮುಕ್ತಗೊಳಿಸು. ಏಕೆಂದರೆ ನೀನು ಎಲ್ಲವನ್ನೂ ಕಾಣಬಲ್ಲೆ..

–ಸಚ್ಚಾರಿತ್ರ್ಯವೇ ಪುಣ್ಯ. ನಿನ್ನ ಮನಸ್ಸಿಗೆ ಹಿತವಾಗದ ಮತ್ತು ಲೋಕಕ್ಕೆ ಗೊತ್ತಾಗಬಾರದೆಂದು ನೀನು ಮುಚ್ಚಿಡಬಯಸುವ ಕೆಲಸವೇ ಪಾಪ.

–ಲೋಕದಲ್ಲಿ ನೀನು ಓರ್ವ ಅನಾಮಿಕನಂತೆ ಯಾತ್ರಿಯಂತೆ ಬದುಕುವುದನ್ನು ಕಲಿತುಕೋ.

–ಯಾರಲ್ಲಿ ಈ ಮೂರು ಗುಣಗಳಿವೆಯೋ ಅಲ್ಲಾಹು ಅವನ ಮರಣವನ್ನು ಸುಲಭಗೊಳಿಸುವನು ಮತ್ತು ಅವನಿಗೆ ಸ್ವರ್ಗದಲ್ಲಿ ಪ್ರವೇಶ ನೀಡುವನು: ದುರ್ಬಲರೊಂದಿಗೆ ಮೃದು ನೀತಿ, ಹೆತ್ತವರೊಂದಿಗೆ ಪ್ರೀತಿ ಮತ್ತು ಸೇವಕರೊಂದಿಗೆ ಉತ್ತಮ ವರ್ತನೆ

–ಮಾನವ ಕುಲವು ದೇವನ ಕುಟುಂಬವಾಗಿದೆ. ದೇವನಿಗೆ ತಮ್ಮ ಎಲ್ಲ ಸೃಷ್ಟಿಗಳ ಪೈಕಿ ತನ್ನ ಇತರ ಸೃಷ್ಟಿಗಳೊಂದಿಗೆ ಸದ್ವರ್ತನೆ ತೋರುವ ವ್ಯಕ್ತಿಯೇ ದೇವನಿಗೆ ಅತ್ಯಂತ ಪ್ರಿಯನು.

–ಮಾನವರೆಲ್ಲರೂ ಪಾಪಿಗಳೇ. ಅವರಲ್ಲಿ ಪಾಪಗಳಿಗಾಗಿ ಅತ್ಯಂತ ಹೆಚ್ಚು ಪಶ್ಚಾತ್ತಾಪ ಪಡುವವರೇ ಅತ್ಯುತ್ತಮ ಮನುಷ್ಯರೆನಿಸಿಕೊಳ್ಳುವರು.

–ಈ ಲೋಕದಲ್ಲಿ ಕರ್ಮವಿದೆ, ವಿಚಾರಣೆ ಇಲ್ಲ. ಪರಲೋಕದಲ್ಲಿ ವಿಚಾರಣೆ ಇದೆ, ಕರ್ಮವಿಲ್ಲ.

–ದುಷ್ಟ ದೊರೆ ಅಥವಾ ಅನ್ಯಾಯಗಾರ ಅಧಿಕಾರಿಯ ಮುಂದೆ ನ್ಯಾಯದ ಮಾತುಗಳನ್ನಾಡುವುದು ಅತ್ಯುತ್ತಮ ಧಾರ್ಮಿಕ ಹೋರಾಟ(ಜಿಹಾದ್)ವೆನಿಸಿಕೊಳ್ಳುತ್ತದೆ.

–ಅನ್ಯಾಯದ ವಿಷಯದಲ್ಲಿ ತನ್ನ ಜನಾಂಗದ ಬೆಂಬಲಕ್ಕೆ ನಿಲ್ಲುವ ಉದಾಹರಣೆಯು ಬಾವಿಗೆ ಬೀಳುತ್ತಿರುವ ಒಂದು ಒಂಟೆಯ ಬಾಲ ಹಿಡಿದುಕೊಂಡು ತಾನೂ ಅದರ ಜೊತೆಗೆ ಬಾವಿಗೆ ಬೀಳುವಂತಿದೆ.

–ಹಸಿದವನಿಗೆ ಉಣಿಸಿರಿ, ರೋಗಿಯನ್ನು ಸಂತೈಸಿರು, ಸೆರೆಯಾಳನ್ನು ಮುಕ್ತಗೊಳಿಸಿರಿ.

–ನಿನ್ನ ಮುಖಸ್ತುತಿ ಮಾಡುವವನ ಬಾಯಿಗೆ ಮಣ್ಣು ಹಾಕಿರಿ.

–ಯಾರು ಹೆಣ್ಣು ಮಕ್ಕಳನ್ನು ಕೀಳಾಗಿ ಕಾಣದೆ ಗಂಡುಮಕ್ಕಳಂತೆಯೇ ಚೆನ್ನಾಗಿ ಪೋಷಿಸಿ ಬೆಳೆಸುವನೋ ಅಲ್ಲಾಹು ಅವನಿಗೆ ಸ್ವರ್ಗಕ್ಕೆ ಪ್ರವೇಶ ನೀಡುವನು.

–ಕಾರ್ಮಿಕನ ಬೆವರು ಆರುವ ಮುನ್ನವೇ ಅವನ ಮಜೂರಿಯನ್ನು ಕೊಟ್ಟುಬಿಡು.

.–ಮನುಷ್ಯರಿಗೆ ಕೃತಜ್ಞನಾಗಿರದವನು ಅಲ್ಲಾಹುವಿಗೂ ಕೃತಜ್ಞನಾಗಿರುವುದಿಲ್ಲ.

–ಗಂಭೀರವಾಗಿರಲಿ ಅಥವಾ ತಮಾಷೆಗಾಗಿರಲಿ, ಸುಳ್ಳು ಹೇಳುವುದು ಧರ್ಮವಲ್ಲ. ನಿಮ್ಮಲ್ಲಿ ಯಾರಾದರೂ ಮಗುವಿಗೆ ಒಂದು ವಚನ ಕೊಟ್ಟಿದ್ದರೆ ಅದನ್ನು ಪೂರ್ತಿಗೊಳಿಸದಿರುವುದು ಧರ್ಮಸಮ್ಮತವಲ್ಲ.

–ಮನುಷ್ಯನ ಬಳಿ ಎರಡು ಕಣಿವೆಗಳಷ್ಟು ಧಾರಾಳ ಸಂಪತ್ತಿದ್ದರೂ ಮೂರನೆಯದಕ್ಕಾಗಿ ಹಾತೊರೆಯುತ್ತಾನೆ, ಮನುಷ್ಯನ ಹೊಟ್ಟೆಯನ್ನು ಮಣ್ಣು ಮಾತ್ರ ತುಂಬಬಲ್ಲುದು.

–ಚಿನ್ನ, ಬೆಳ್ಳಿ ಅಥವಾ ಅದರೆಡರ ಮಿಶ್ರಣವಿರುವ ಪಾತ್ರೆಯಲ್ಲಿ ಆಹಾರ ಸೇವಿಸುವವನು ತನ್ನ ಹೊಟ್ಟೆಯನ್ನು ನರಕಾಗ್ನಿಯಿಂದ ತುಂಬಿಸಿಕೊಳ್ಳುತ್ತಿರುತ್ತಾನೆ.

–ಅಕ್ರಮ ಸಂಪಾದನೆಯಿಂದ ಪೋಷಿತವಾದ ಶರೀರರವು ಸ್ವರ್ಗವನ್ನು ಪ್ರವೇಶಿಸಲಾರದು

ಬಡ್ಡಿ ವ್ಯವಹಾರದಲ್ಲಿ ಭಾಗವಹಿಸುವ ಎಲ್ಲರನ್ನೂ ಅಲ್ಲಾಹು ತನ್ನಿಂದ ದೂರ ಇಡುವನು

–ಸಾಲ ಮರುಪಾವತಿ ಮಾಡುವ ಶಕ್ತಿ ಇದ್ದೂ ಪಾವತಿಸುವ ವಿಷಯದಲ್ಲಿ ಮೀನ ಮೇಷ ಎಣಿಸುವ ಸಾಲಗಾರನಿಗೆ ಛೀಮಾರಿ ಹಾಕುವುದು ಮತ್ತು ಶಿಕ್ಷೆ ವಿಧಿಸುವುದು ಸಮಾಜದ ಪಾಲಿಗೆ ಧರ್ಮಸಮ್ಮತವಾಗಿದೆ.

–ನಿಮ್ಮಲ್ಲಿ ಯಾರಿಗಾದರೂ ಕೋಪ ಬಂದಾಗ ಅವನು ನಿಂತುಕೊಂಡಿದ್ದರೆ ಕುಳಿತುಕೊಳ್ಳಲಿ. ಆಗ ಕೋಪ ತಣಿದರೆ ಸರಿ. ತಣಿಯದಿದ್ದರೆ ಮಲಗಲಿ.

–ನಾಲಗೆ ಮತ್ತು ಲೈಂಗಿಕಾಂಗದ ವಿಷಯದಲ್ಲಿ ಶುದ್ಧರಾಗಿರುವವರಿಗೆ ನಾನು ಸ್ವರ್ಗದ ಭರವಸೆ ನೀಡುತ್ತೇನೆ.

(ಸೂಕ್ತಿಗಳಿಗೆ ಆಕರ: **'ಪೈಗಂಬರರ ನುಡಿಮುತ್ತುಗಳು'**
ಸಂಗ್ರಹ: **ಎಂ.ಸಾದುಲ್ಲಾ** ಪ್ರಕಾಶನ: **ಶಾಂತಿ ಪ್ರಕಾಶನ**, ಮಂಗಳೂರು)

.

## ಪುಸ್ತಕಾವಲೋಕನ

ಪು: **ಮಹಾತ್ಮ ಗಾಂಧಿಯವರ ಹಿಂದ್ ಸ್ವರಾಜ್** (ಪ್ರವೇಶಿಕೆಯೊಂದಿಗೆ) ಸಂ: **ಡಿ.ಎಸ್. ನಾಗಭೂಷಣ** ಕನ್ನಡಾನುವಾದ: ಸಿದ್ಧವನಹಳ್ಳಿ ಕೃಷ್ಣಶರ್ಮ ಪ್ರ: ಕುವೆಂಪು ಭಾಷಾ ಭಾರತಿ, ಬೆಂಗಳೂರು ಪು: ೧೯೬ ಬೆಲೆ **ರೂ. ೧೦೦/-**

### ಗಾಂಧಿಯೊಂದಿಗೆ ಮತ್ತೊಮ್ಮೆ ಅನುಸಂಧಾನಕ್ಕೆ ಪ್ರೇರಣೆ



**ಮ**ಹಾತ್ಮಾ ಗಾಂಧಿಯವರ 'ಹಿಂದ್ ಸ್ವರಾಜ್' ಗೆ ಒಂದು ಸ್ವಾಗತಾರ್ಹ ಪ್ರವೇಶಿಕೆಯನ್ನು ಡಿ.ಎಸ್ ನಾಗಭೂಷಣ ತಯಾರಿಸಿದ್ದಾರೆ. ಹಿಂದ್ ಸ್ವರಾಜ್ ಮೂಡಿ ಬಂದ ಹಿನ್ನೆಲೆ, ಅದರ ಸಂದರ್ಭ ಮತ್ತು ಅದರ ಮೂಲ ತಾತ್ವಿಕ ನಿಲುವಿನ ಬಗ್ಗೆ ಒಂದು ಉಪಯುಕ್ತ ಪ್ರಬಂಧವನ್ನು ಸಂಪಾದಕರು ಮಂಡಿಸಿದ್ದಾರೆ. ಜೊತೆಗೆ ಅನುಬಂಧಗಳಲ್ಲಿ ಇನ್ನೊಂದಿಷ್ಟು ಪೂರಕ ಬರಹಗಳಿವೆ. ಇವೆಲ್ಲವೂ ಹಿಂದ್ ಸ್ವರಾಜ್ ಪುಸ್ತಕದ ಓದು-ಮರುಓದಿಗೆ ಬಹಳ ಉಪಯುಕ್ತವಾಗುತ್ತವೆ.

ಹಿಂದ್ ಸ್ವರಾಜ್ ಮರು ಓದಿಗಲ್ಲದೇ ಮರುವಿಮರ್ಶೆಗೂ ಕಾಲಕಾಲಕ್ಕೆ ಒಳಗಾಗಬೇಕು. ಗಾಂಧಿಯವರು ಬದುಕಿದ್ದಾಗಲೇ ಅದರ ಪ್ರಸ್ತುತೆಯ ಬಗ್ಗೆ ಪ್ರಶ್ನೆಗಳಿದ್ದುವು. ಇದನ್ನು ಅವಸರದಲ್ಲಿ ಬರೆದದ್ದರಿಂದ ಅದರಲ್ಲಿರುವ ವಿಚಾರಗಳು ಅತಿಯಾದ ವಾದಸರಣಿ ಎಂಬ ಟೀಕೆಯನ್ನು ಆಗಲೇ ಗಾಂಧಿಯವರು ಎದುರಿಸಿದ್ದರು. ಭಾರತಕ್ಕೆ ಬಂದು ಭಾರತವನ್ನು ಸುತ್ತಾಡುವ ಮೊದಲೇ ಬರೆದಿದ್ದ ಇಲ್ಲಿನ ವಿಚಾರಗಳನ್ನು ವರ್ಷಗಳ ನಂತರವೂ ಗಾಂಧಿಯವರು ಸಮರ್ಥಿಸಿಕೊಳ್ಳುತ್ತಿದ್ದರು, ಇತರರಿಗೆ ನೆನಪು ಮಾಡಿಕೊಡುತ್ತಿದ್ದರು ಎಂದಾದರೆ ಈ ವಿಚಾರಗಳ ಬಗ್ಗೆ ಗಾಂಧಿಯವರಿಗೆ ಇದ್ದ ಪ್ರಬಲವಾದ ನಂಬಿಕೆ ಮತ್ತು ಅದರ ತಾತ್ವಿಕ ಚೌಕಟ್ಟಿನ ಬಲ ನಮಗೆ ವೇದ್ಯವಾಗುತ್ತದೆ. ಅಲ್ಲಿ ಮಂಡಿಸಿರುವ ವಾದಗಳು ಕಾಲ ಸಂದರ್ಭಗಳನ್ನು ಮೀರಿ ಇನ್ನೂ ಪ್ರಸ್ತುತವಾಗಿ ನಿಂತಿವೆಯೆಂದರೆ ಆ ನಿಲುವುಗಳು ಸರ್ವಕಾಲಿಕ ತತ್ವಗಳೇ ಆಗಿರಬೇಕು. ಹೀಗಾಗಿಯೇ ಈ ಪುಸ್ತಕದ ಚರ್ಚೆಯನ್ನು ನಾವು ಮತ್ತೆ ಮತ್ತೆ ಮಾಡಬೇಕಾಗಿದೆ.

ಸಂಪಾದಕರ ಪ್ರವೇಶಿಕೆ ಈ ಪುಸ್ತಕದ ಹಿನ್ನೆಲೆಯಲ್ಲಿನ ಹಲವು ಕೊಂಡಿಗಳನ್ನು ಸೇರಿಸಿ ಅದರ ಹಿನ್ನೆಲೆಯನ್ನು ವಿವರಿಸುತ್ತದೆ. ಪುಸ್ತಕ ಪ್ರಶ್ನೋತ್ತರದ ರೀತಿಯಲ್ಲಿರುವುದಕ್ಕೂ ಹಿನ್ನೆಲೆಯನ್ನು ನಾಗಭೂಷಣ ಒದಗಿಸಿದ್ದಾರೆ. ಈ ಪೂರಕ ಸಾಹಿತ್ಯದಿಂದ ಪುಸ್ತಕದ ಓದಿಗೆ ಹೆಚ್ಚಿನ ವಜನು ಸಿಗುತ್ತದೆ. ಈ ನಮ್ಮ ಕಾಲದಲ್ಲಿ ಯಂತ್ರಗಳ ಹಿಂದೆ ಓಡುತ್ತಿರುವ ಸಮಯದಲ್ಲಿ ನಮಗೆ ವಿಜ್ಞಾನ ಯಾಕೆ ಬೇಕು, ಎಲ್ಲಿ ನಾವು ವಿಜ್ಞಾನ ತಂತ್ರಜ್ಞಾನವನ್ನು ಮಿತಿಗೊಳಿಸಬೇಕು ಎನ್ನುವ ಅದ್ಭುತ ಸೂತ್ರವನ್ನು ಗಾಂಧಿಯವರು ಹಾಕಿಕೊಡುತ್ತಾರೆ. ನಮ್ಮ ಕೆಲಸವನ್ನು ಸುಸೂತ್ರಗೊಳಿಸಬಹುದಾದ ಯಂತ್ರಗಳು ಬೇಕು, ಆದರೆ ನಮ್ಮ ಸಹಜೀವಿಗಳನ್ನು ಕೆಲಸದಿಂದ ಉಚ್ಚಾಟಿಸುವ ಯಂತ್ರಗಳು ಬೇಡ. ಜಾಬ್ ಲೆಸ್ ಗ್ರೋಥ್ ಎಂದು ರೋಧಿಸುತ್ತಿರುವ ಸಂದರ್ಭದಲ್ಲಿ ನಮ್ಮ ಅರ್ಥವ್ಯವಸ್ಥೆಗೆ ಒಂದು ಸಮತೋಲನ ಎಲ್ಲಿಂದ ಬರಬಹುದು ಎನ್ನುವುದಕ್ಕೆ ಇದರಲ್ಲಿ ದಿಕ್ಸೂಚಿಗಳಿವೆ. ಪ್ರತಿ ಹೊಸ ತಂತ್ರಜ್ಞಾನವೂ ಉತ್ಪಾದನಾ ಪ್ರಕ್ರಿಯೆಯಲ್ಲಿ ದಕ್ಷತೆಯನ್ನು ತರಬಹುದು. ಆದರೆ ಆ ದಕ್ಷತೆ ಬರುವುದು ಜನರನ್ನು ಉಚ್ಚಾಟಿಸಿ ಬಂಡವಾಳ ಮೂಲದ ಯಂತ್ರಗಳನ್ನು ಸ್ಥಾಪಿಸುವುದರಿಂದಾಗಿ. ಹೀಗಾಗಿ ಒಟ್ಟಾರೆ ದಕ್ಷತೆ ಹೆಚ್ಚಾದರೂ ಅದರ ಜೊತೆಜೊತೆಗೇ ಅಸಮಾನತೆಯೂ ಹೆಚ್ಚುತ್ತದೆನ್ನುವ ಗಹನ ಅರ್ಥಶಾಸ್ತ್ರದ ಸೂತ್ರವನ್ನು ಗಾಂಧಿಯವರು ಸರಳವಾಗಿ ಗ್ರಹಿಸಿದ್ದಲ್ಲದೇ ಮಂಡಿಸಿದ್ದರು.

ಬಂಡವಾಳವೇ ಸುಧಾರಣೆ, ಬೆಳವಣಿಗೆ ಎನ್ನುವ ಈ ಕಾಲದಲ್ಲಿ 'ಹಿಂದ್ ಸ್ವರಾಜ್' ನ ಗಂಭೀರ ಮರುಓದಿನ ಅವಶ್ಯಕತೆ ಎಂದಿಗಿಂತ ಹೆಚ್ಚು ತುರ್ತಿನದ್ದಾಗಿದೆ. ನನ್ನದೊಂದೇ ತಕರಾರು. ನಾಗಭೂಷಣ ಅವರು ಕೃಷ್ಣಶರ್ಮರ ಅನುವಾದವನ್ನು ಬಿಟ್ಟುಕೊಟ್ಟು ಮೊದಲು ಯೋಚಿಸಿದ್ದಂತೆ ತಾವೇ ಮತ್ತೊಂದು ಅನುವಾದ ಮಾಡಿದ್ದರೆ, ಇಂದಿನ ಭಾಷೆಯ ಮೂಲಕ ಸಮಕಾಲೀನ ಛಾಪು ಹಿಂದ್ ಸ್ವರಾಜ್ ಮೇಲೆ ಇನ್ನಷ್ಟು ಗಾಢವಾಗಿ ಬಿದ್ದು, ಅದು ಇನ್ನಷ್ಟು ಪ್ರಸ್ತುತವಾಗುತ್ತಿತ್ತು. ಆದರೂ ಮತ್ತೊಮ್ಮೆ ಗಾಂಧಿಯ ಜೊತೆ ಅನುಸಂಧಾನ ಮಾಡಲು ಈ ಪುಸ್ತಕ ಪ್ರೇರೇಪಿಸುತ್ತದೆ.

**-ಪ್ರೊ.ಎಂ.ಎಸ್. ಶ್ರೀರಾಮ್**

ಪು: **ರಾಜರ್ಷಿ ಶಾಹು ಛತ್ರಪತಿ** (ಸಂಪುಟ: ೧-೨) ಲೇ: **ಡಾ. ಜಯಸಿಂಹ ಪವಾರ್** ಕನ್ನಡಕ್ಕೆ: **ಪ್ರೊ. ಹನುಮಂತ** ಪ್ರ: **ಕುವೆಂಪು ಭಾಷಾ ಭಾರತಿ**, ಬೆಂಗಳೂರು ಪುಟಗಳು: ೮೯೮ ಬೆಲೆ: **ರೂ. ೪೦೦.೪೦**

### ಕ್ರಾಂತಿಕಾರಿ ದೊರೆಯೊಬ್ಬರ ಸಾರ್ಥಕ ಸ್ಮರಣೆ



**ಮ**ಹಾರಾಷ್ಟ್ರದಲ್ಲಿ ಪೇಶ್ವೆಗಳ ಆಡಳಿತದೊಂದಿಗೆ ಆರಂಭವಾದ ಕಟು ಬ್ರಾಹ್ಮಣವಾದದಿಂದ ಸಂತ್ರಸ್ತವಾದ ಸಮಾಜದಲ್ಲಿ ಸಾಮಾಜಿಕ ಪರಿವರ್ತನೆಯ ಬಿರುಗಾಳಿ ಎಬ್ಬಿಸಿದವರಲ್ಲಿ ಕೊಲ್ಹಾಪುರದ ಶಾಹು ಛತ್ರಪತಿ ಮಹಾರಾಜರು (೨೬.೬.೧೮೭೪-೬.೫. ೧೯೨೨) ಚರಿತ್ರೆಯಲ್ಲಿ ಎದ್ದು ಕಾಣುವ ಹೆಸರು. ಮೂಢ ಆದರೆ ದುರಹಂಕಾರಿಯಾಗಿದ್ದ ಬ್ರಾಹ್ಮಣಶಾಹಿಯಿಂದ ಮಾನಸಿಕವಾಗಿ ಜರ್ಝರಿತಾದ ಎರಡು ಪ್ರಸಂಗಳಿಂದಾಗಿ ಹಿಂದೂ ಸಮಾಜದ ಜಾತಿ ಪದ್ಧತಿಯ ವಿರುದ್ಧ ನಡೆಸಿದ, ಈಗ ಓದಿದರೂ ನಿಜವಾಗಿಯೂ ರೋಮಾಂಚನವನ್ನುಂಟು ಮಾಡುವಂತಹ ಹಲವು ನೆಲೆಗಳ ಮಹಾ ಹೋರಾಟದ ಕಥೆಯನ್ನು ಈ ಬೃಹತ್ ಗ್ರಂಥ ತನ್ನೆಲ್ಲ ವಿವರಗಳೊಂದಿಗೆ, ಆದರೆ ಯಾವುದೇ ಭಾವಾವೇಶಕ್ಕೆ ಒಳಗಾಗದೆ ನಮ್ಮ ಮುಂದೆ ಇಡುತ್ತದೆ.

ಅಸ್ಪೃಶ್ಯರೂ, ಮಹಿಳೆಯರೂ ಸೇರಿದಂತೆ ಸರ್ವ ಜಾತಿ, ಧರ್ಮಗಳ ಜನರಿಗೆ ಶಿಕ್ಷಣವನ್ನು ಮುಕ್ತಗೊಳಿಸಿದ, ಪ್ರಾಥಮಿಕ ಶಿಕ್ಷಣವನ್ನು ಉಚಿತಗೊಳಿಸಿದ, ಬ್ರಾಹ್ಮಣ ಪ್ರಧಾನವಾಗಿದ್ದ ಆಡಳಿತ ವ್ಯವಸ್ಥೆಯಲ್ಲಿ ಆದ್ಯತೆಯ ಮೇಲೆ ಶೂದ್ರರ, ಅಸ್ಪೃಶ್ಯರ ಪ್ರವೇಶ ನೀಡಿದ, ಅಸ್ಪೃಶ್ಯ ಜಾತಿಗಳನ್ನು ಕಡ್ಡಾಯ ಚಾಕರಿಗಳಿಂದ ಬಿಡುಗಡೆಗೊಳಿಸಿದ, ಹಿಂದುಳಿದ ಮತ್ತು ಅಸ್ಪೃಶ್ಯ ಜಾತಿಗಳಲ್ಲಿ ಸ್ವಾಭಿಮಾನ ಬೆಳೆಸಲು ಜಾತಿ ಸಮ್ಮೇಳನಗಳನ್ನು ಪ್ರೋತ್ಸಾಹಿಸಿದ, ಅಸ್ಪೃಶ್ಯರಿಂದ ಸಾರ್ವಜನಿಕವಾಗಿ ತಾವು ಮತ್ತು ತಮ್ಮ ರಾಜಪರಿವಾರ ಆಹಾರ ಸ್ವೀಕರಿಸುವ ವ್ಯವಸ್ಥೆ ಮಾಡಿದ ಮಹಿಳೆಯರಿಗೆ ಆಸ್ತಿ ಹಕ್ಕನ್ನು ನೀಡಿದ, ಅಂತರ್ಜಾತಿ ವಿವಾಹಗಳಿಗೆ ಕಾನೂನೂ ಮಾನ್ಯತೆ ನೀಡಿದ, ಹಿಂದೂ-ಮುಸ್ಲಿಂ ಐಕ್ಯತೆಗಾಗಿ ಎರಡೂ ಮತಗಳ ಪೂಜಾಸ್ಥಳಗಳ ನಿರ್ಮಾಣಕ್ಕಾಗಿ ಪರಸ್ಪರರ ಹಣದ ವಿನಿಯೋಗದ ವ್ಯವಸ್ಥೆ-ಹೀಗೆ ಇಂದಿನ ಆಧುನಿಕ ಸರ್ಕಾರ ಕೂಡ ಕಲ್ಪಿಸಿಕೊಳ್ಳಲಾಗದ ಕ್ರಾಂತಿಕಾರಿ ಕ್ರಮಗಳನ್ನು ಅವರು ಒಂದೇ ಸಮನೆ ಕೈಗೊಳ್ಳುತ್ತಾ ಹೋದರು. ಶಾಹು ಅವರ ಈ ಸಾಮಾಜಿಕ ಕ್ರಾಂತಿಯ ಆಂದೋಲನದ ಹಿಂದೆ ಇದ್ದುದು ಆರ್ಯ ಸಮಾಜ, ಅನಿಬೆಸಂಟರ ಥಿಯೋಸಾಫಿಕಲ್ ಸೊಸೈಟಿ, ಮಹಾತ್ಮ ಫುಲೆ ಅವರ ಸತ್ಯಶೋಧಕ ಸಮಾಜ ಮತ್ತು ಅಮೆರಿಕನ್ ಕ್ರಿಶ್ಚಿಯನ್ ಮಿಷನರಿಯೊಂದರ ಸ್ಫೂರ್ತಿ.

ಇದಕ್ಕಾಗಿ ಬಾಲಗಂಗಾಧರ ತಿಲಕರೂ ಸೇರಿದಂತೆ ಮಹಾರಾಷ್ಟ್ರದ ಕಟ್ಟಾ ಬ್ರಾಹ್ಮಣವಾದಿಗಳ ಗುಂಪಿನಿಂದ ಹಲವಾರು ಟೀಕಾ ಪ್ರಹಾರಗಳನ್ನೂ, ಚಾರಿತ್ರ್ಯ ಹನನದ ಪ್ರಯತ್ನಗಳನ್ನು ಮತ್ತು ಕೆಲವೊಮ್ಮೆ ಬ್ರಿಟಿಷ್ ಸಾಮ್ರಾಜ್ಯದ ವಿರೋಧವನ್ನೂ ಛತ್ರಪತಿಗಳು ಎದುರಿಸಬೇಕಾಯಿತು. ಆದರೆ ಅವರು ತಮ್ಮ ಪ್ರಯತ್ನಗಳಿಂದ ಹಿಮ್ಮೆಟ್ಟಲಿಲ್ಲ. ಅವರಿಗೆ ಅಗರ್ಕರ್, ರಾನಡೆ ಮುಂತಾದ ಪ್ರಗತಿಪರ ಬ್ರಾಹ್ಮಣ ನಾಯಕರ, ಮಹರ್ಷಿ ಶಿಂಧೆಯವರಂತಹ ಮರಾಠ ನಾಯಕರ ಮತ್ತು ಆಗಿನ್ನೂ ದಲಿತ ನಾಯಕರಾಗಿ ಉದಯವಾಗುತ್ತಿದ್ದ ಬಿ.ಆರ್. ಅಂಬೇಡ್ಕರ್ ಅವರ ನೈತಿಕ ಬೆಂಬಲ ಇತ್ತು.

ಶಾಹು, ತಿಲಕರ ಸಾಮಾಜಿಕ ನೀತಿಯನ್ನು ಒಪ್ಪುತ್ತಿರಲಿಲ್ಲವಾದರೂ ಅವರ ಬಗ್ಗೆ ವೈಯಕ್ತಿಕ ಗೌರವ ತೋರುತ್ತಾ ರಾಷ್ಟ್ರೀಯ ಹೋರಾಟಕ್ಕೆ ತಮ್ಮ ಕೈಲಾದ ನೆರವನ್ನೂ ನೀಡುತ್ತಿದ್ದರು. ಜೊತೆಗೇ ಬ್ರಾಹ್ಮಣ ಗುಂಪುಗಳ ಅಪಪ್ರಚಾರವನ್ನೆದುರಿಸಲು ಬ್ರಾಹ್ಮಣೇತರರಿಗೆ ಪತ್ರಿಕೆಗಳನ್ನು ಶುರು ಮಾಡಲು ನೆರವು ನೀಡಿದರು. ಆದರೆ ಅವರೆಂದಿಗೂ ಜಾತಿವಾದವನ್ನು ಬೆಂಬಲಿಸಲಿಲ್ಲ. ಜಾತಿ ಸಮ್ಮೇಳನಗಳನ್ನು ಆತ್ಮಗೌರವದ ಸಂಘಟನೆಗಾಗಿ ಆಯೋಜಿಸಬೇಕೇ ಹೊರತು ಒಟ್ಟು ಸಮಾಜದ ಐಕ್ಯತೆಯನ್ನು ಒಡೆಯಲು ಅಲ್ಲ ಎಂದು ಅವರು ಎಚ್ಚರಿಸುತ್ತಿದ್ದರು. ಆಧುನಿಕ ಶಿಕ್ಷಣ ಮತ್ತು ಪಾರಂಪರಿಕ ಜ್ಞಾನಗಳೆರಡರಲ್ಲೂ ನುರಿತವರಾಗಿದ್ದ ಶಾಹು ಸಾಮಾಜಿಕ ಸುಧಾರಣೆಗಳನ್ನಲ್ಲದೆ ರಾಜ್ಯದ ಒಟ್ಟು ಲೌಕಿಕ ಮತ್ತು ಸಾಂಸ್ಕೃತಿಕ ವಿಕಾಸದೆಡೆಗೂ ಗಮನ ಹರಿಸಿ ಜನಮೆಚ್ಚುಗೆ ಪಡೆದು ರಾಜರ್ಷಿ ಎನಿಸಿದರು. ಇಂತಹ ಅಪರೂಪದ ದೊರೆಯೊಬ್ಬರ ಜೀವನಗಾಥೆ ಮತ್ತು ಇದಕ್ಕೆ ಪೂರಕವಾದ ಹಲವು ಲೇಖನಗಳ ಈ ಸಂಯುಕ್ತ ಸಂಪುಟದ ಕನ್ನಡಾನುವಾದವನ್ನು ಸಾಕಷ್ಟು ಯಶಸ್ವಿಯಾಗಿ ನಿರ್ವಹಿಸಿರುವ ಪ್ರೊ. ಹನುಮಂತ ಮತ್ತು ಇದರ ಪ್ರಕಾಶಕರಾದ ಕುವೆಂಪು ಭಾಷಾಭಾರತಿ ಇಬ್ಬರೂ ಕನ್ನಡಿಗರ ಅಭಿನಂದನೆಗಳಿಗೆ ಪಾತ್ರರಾಗಿದ್ದಾರೆ.

**-ಡಿಎಸ್ಸೆನ್**

ಪು: **ಅಡಗುದಾಣ** (ಕವನ ಸಂಕಲನ) ಲೇ: **ಎಂ.ಡಿ. ಒಕ್ಕುಂದ** ಪ್ರ: **ಪಲ್ಲವಿ ಪ್ರಕಾಶನ**, ಚನ್ನಪಟ್ಟಣ( ಬಳ್ಳಾರಿ ಜಿಲ್ಲೆ) ಪು: ೧೩೦ ಬೆ: ರೂ. ೧೦೦/-

## ಸಾಮಾಜಿಕ ಕಾವ್ಯದ ಶಕ್ತಿ-ದೌರ್ಬಲ್ಯಗಳು




**ಭಾ**ಷೆಯ ಸೂಕ್ಷ್ಮವನ್ನು ಬಲ್ಲ ಕವಿ ಸವಕಲು ಪದಗಳನ್ನು ಕೈಗೆತ್ತಿಕೊಂಡು ಅವಕ್ಕೆ ಜೀವ ತುಂಬಬಲ್ಲ; ಅರ್ಥವನ್ನು ಪಲ್ಲಟಿಸಿ ಈ ಸವಕಲು ಪದಗಳಿಗೆ ಮತ್ತೆ ಹೊಸ ಚಲಾವಣೆಯನ್ನು ನೀಡಬಲ್ಲ. ಭಾಷೆಗೆ ಹೊಳಪು ಮತ್ತು ಜೀವಸತ್ವ ದೊರೆಯುವುದು ಇಂಥ ಕವಿಗಳಿಂದಲೇ. ಪ್ರಸಕ್ತ ಸಂಕಲನದಲ್ಲಿ ಇಂಥ ಒಂದು ಪ್ರಯೋಗ ನಡೆದಿರುವುದನ್ನು ಓದುಗರು ಗಮನಿಸಬಹುದಾಗಿದೆ.

ಆಧುನಿಕ ಬದುಕಿನಲ್ಲಿ ಬೆಚ್ಚಿಬೀಳಿಸುವ - 'ಅಡಗುದಾಣ'ಮತ್ತು 'ಸ್ಫೋಟ'-ಪದಗಳನ್ನು ಕವಿ ಎಂ.ಡಿ. ಒಕ್ಕುಂದ ನಡೆಸಿರುವ ಪರಿಯನ್ನು ಗಮನಿಸಿದರೆ ('ಅಡಗುದಾಣ' ಈ ಸಂಕಲನದ ಹೆಸರೂ ಆಗಿದೆ) ಭಾಷೆಗೆ ಕವಿಯ ಕೊಡುಗೆ ಏನು ಎಂಬುದು ತಿಳಿಯುತ್ತದೆ. ೨೧ನೇ ಶತಮಾನದ ಜಗತ್ತಿಗೆ ಆಘಾತವನ್ನುಂಟು ಮಾಡುತ್ತಿರುವ ಈ 'ಅಡಗುದಾಣ'ವನ್ನು ಒಕ್ಕುಂದ, ೧೨ನೇ ಶತಮಾನಕ್ಕೆ ತೆಗೆದುಕೊಂಡು ಹೋಗುತ್ತಾರೆ. ಉಗ್ರರನ್ನು ಕಣ್ಮುಂದೆ ತರುವ ಈ ಪದಕ್ಕೆ ಬೇರೆಯೇ ಆಯಾಮವನ್ನು ನೀಡಿ, ಅಧ್ಯಾತ್ಮದ ಅಕ್ಕನನ್ನು ಕಣ್ಮುಂದೆ ನಿಲ್ಲಿಸುತ್ತಾರೆ. ಅಕ್ಕನ ಅಡಗುತಾಣ-'ಚನ್ನಮಲ್ಲಿಕಾರ್ಜುನನಂಥ ಆತ್ಮಸಂಗಾತಿ.' ಅಲ್ಲಿಂದಲೇ ಅಕ್ಕ ಸ್ಫೋಟಗೊಳ್ಳುವುದು. ಈ ಸ್ಫೋಟವೇ ಅಕ್ಕನ ಹಂಬಲ. ಈ ಹಂಬಲವನ್ನು ಮನುಕುಲದ ಹಂಬಲವಾಗಿ ಮಾಡುವ ಶಕ್ತಿ ಅಕ್ಕನ 'ಸ್ಫೋಟಕ' ಶಕ್ತಿ. ತನ್ನನ್ನು ತಾನು ಸ್ಫೋಟಿಸಿಕೊಳ್ಳುವುದು, ಪೂರ್ಣವಾಗಿ ಕೊಟ್ಟುಕೊಳ್ಳುವುದು, ಈ ಬಲಿದಾನವನ್ನೇ ಮನುಕುಲದ ಹಂಬಲವಾಗಿ ಮಾಡುವುದು ಮತ್ತು ಆ ಮೂಲಕ ಮನುಷ್ಯರ ಬಾಳಿಗೆ ಹೊಸ ಬೆಳಕನ್ನು ನೀಡುವುದು ಅಕ್ಕನ ಸ್ಫೋಟದ ಹಿಂದಿನ ಆಶಯ.

'ಮಗು ಮಲಗಿದೆ ಎದೆಯ ಮೇಲೆ' ಸಂಕಲನದ ೧೩ ವರ್ಷಗಳ ನಂತರ ಪ್ರಕಟವಾಗಿರುವ ಒಕ್ಕುಂದ ಅವರ ಈ 'ಅಡಗುದಾಣ'ದಲ್ಲಿ ಕವಿಯ ನೆಲೆಯನ್ನು, ನಂಬಿಕೆಯನ್ನು ಪ್ರಕಟಿಸುವ ಹಲವು ಪದ್ಯಗಳಿವೆ. ಕವಿಯ ನಿಲುವು ಸ್ಪಷ್ಟವಾದದ್ದು ಮತ್ತು ನೇರವಾದದ್ದು. 'ಪ್ರಣಾಳಿಕೆ' ಎನ್ನುವ ಕವಿತೆ ಇದನ್ನು ತೋರಿಸುತ್ತದೆ:

**ಜಗತ್ತಿನ ಎಲ್ಲ ಅರಮನೆಗಳು ನೆಲಸಮವಾಗಲಿ**
**ಬೀದಿಯಲ್ಲೇ ಬೆಳಗು ಕಾಣುವವರಿಗೆ ಸೂರು ಸಿಗಲಿ**
**ಬಂಗಾರದ ಸಿಂಹಾಸನ ವಜ್ರದ ಕಿರೀಟ ಹರಾಜಾಗಲಿ**

ಈ ಸಮಾಜವಾದಿ ಆಶಯಕ್ಕೆ ಬದ್ಧರಾಗಿರುವ ಒಕ್ಕುಂದ ಈ ನೆಲೆಯಲ್ಲಿಯೇ ಕೆಲವು ಸಮರ್ಥ ಕವಿತೆಗಳನ್ನು ಸೃಷ್ಟಿಸಿದ್ದಾರೆ. 'ಹೊಲೆಯರ ಗಡಗಡೆ', 'ಇರುವೆ ದಾಸಯ್ಯ', 'ಪ್ರೇಮದ ಕೊಲೆ ಅಜರಾಮರ!'ಗಳಂಥ ಪದ್ಯಗಳನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು. ಒಕ್ಕುಂದ ಅವರ ಸಾಮಾಜಿಕ ಮತ್ತು ರಾಜಕೀಯ ತಲ್ಲಣಗಳನ್ನು ಬಿಂಬಿಸುವ ಕವಿತೆಗಳು ಈ ಸಂಕಲನದಲ್ಲಿವೆ. 'ಕಸಬರಿಗೆ'ಯಂಥ ಕುತೂಹಲ ಹುಟ್ಟಿಸುವ ಪ್ರಯೋಗಗಳು, 'ಮಹಾತ್ಮಾಗಾಂಧಿ ರಸ್ತೆ ಮತ್ತು ಸೈಕಲ್ ಸವಾರ', 'ಅವರಿಗೆ ನಾಯಿಗಳೆಂದರೆ ಅಪಾರ ಪ್ರೀತಿ'ಯಂಥ ಮೊನಚು ವ್ಯಂಗ್ಯದ ಕವಿತೆಗಳೂ ಇಲ್ಲಿವೆ. ಅಪರೂಪದ ಕವಿತೆ ಎನ್ನಬಹುದಾದ, 'ಮರಳಿಬರುವನೆ ಪೋರ...', ಸಮಕಾಲೀನ ಜಗತ್ತಿನ ತಲ್ಲಣವನ್ನು ತೀವ್ರ ಸ್ಪಂದನವಾಗಿಸುವ 'ಪಾರಿವಾಳ'ದಂಥ ಸೂಕ್ಷ್ಮ ಸಂವೇದನೆಯ ಕವಿತೆಗಳು ಒಕ್ಕುಂದ ಅವರ ಕಾವ್ಯದ ಬಗ್ಗೆ ಆಶೆ ಹುಟ್ಟಿಸುತ್ತವೆ.

ಆದರೆ ಹೆಚ್ಚು ಆಯಾಮಗಳಿಲ್ಲದ, ಕಾವ್ಯದ ನಿಜವಾದ ತಂತಿಯನ್ನು ಮೀಟಲಾಗದ ಸಪಾಟು ಪದ್ಯಗಳೇ ಈ ಸಂಕಲನವನ್ನು ಹೆಚ್ಚಾಗಿ ತುಂಬಿರುವುದು ಸೋಜಿಗ ಹುಟ್ಟಿಸುತ್ತದೆ. 'ಯಾವಾಗ ಬರುವಿ ಅಪ್ಪಾ' ಎನ್ನುವ ಸುದೀರ್ಘ ಪದ್ಯವನ್ನು ಓದಿದರೆ ಈ ಮಾತಿನ ಅರ್ಥ ತಿಳಿಯುತ್ತದೆ. ಕಾವ್ಯ ಎನ್ನುವುದು ಎಷ್ಟು ಸೂಕ್ಷ್ಮವಾದದ್ದು! ನಿಜವಾದ ಕಾವ್ಯದ ಜಾಡು, ನಡೆದೂ ನಡೆದೂ ಸವಕಲಾದ ಜಾಡಾಗಿರುವುದಿಲ್ಲ. ಪ್ರತಿಬಾರಿಯೂ ಕವಿ ಕಂಡುಕೊಳ್ಳಬೇಕಾದ ಹಾದಿಯಾಗಿರುತ್ತದೆ. ಇದು ಎಂಥ ಸವಾಲಿನ ಕೆಲಸ!

**-ಜಿ.ಪಿ. ಬಸವರಾಜು**

ಪು: **ತೇಜಸ್ವಿ ನೆನಪಿನಲ್ಲಿ ಅಲ್ಮೇರಾ ರಿಪೇರಿ**(ಲಲಿತ ಪ್ರಬಂಧಗಳು) ಲೇ: **ಮಲ್ಲಿಕಾರ್ಜುನ ಹೊಸಪಾಳ್ಯ** ಪ್ರ:**ಧಾನ್ಯ ಪ್ರಕಾಶನ**, ತುಮಕೂರು ಪು:೧೨೦ ಬೆಲೆ:ರೂ. ೧೧೫/-

## ಗ್ರಾಮ ಸೊಗಡಿನ ಲಲಿತ ಬರಹಗಳು



**ಮ**ಲ್ಲಿಕಾರ್ಜುನ ಹೊಸಪಾಳ್ಯ ಕಳೆದ ಹದಿನೈದು ವರ್ಷಗಳಿಂದ ವಿವಿಧ ಸಂದರ್ಭಗಳಲ್ಲಿ ಕಂಡುಂಡ ತಮ್ಮ ಜೀವನಾನುಭವದಿಂದ ಹಲವು ಪ್ರಸಂಗಗಳನ್ನು ಹೆಕ್ಕಿ ಇಲ್ಲಿ ಸ್ವಾರಸ್ಯಕರವಾಗಿ ನಿರೂಪಿಸುವ ಪ್ರಯತ್ನ ಮಾಡಿದ್ದಾರೆ. ಮಲ್ಲಿಕಾರ್ಜುನ ಅವರು ಮಧುಗಿರಿ ತಾಲೂಕಿನ ಹೊಸಪಾಳ್ಯ ಗ್ರಾಮದ ಒಕ್ಕಲುತನದ ಹಿನ್ನೆಲೆಯುಳ್ಳವರಾಗಿದ್ದು ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರು, ಮೈಸೂರು ನಗರಗಳನ್ನು ಸುತ್ತಿದವರು. ತುಮಕೂರು ಜಿಲ್ಲೆಯ ಗ್ರಾಮೀಣ ಪ್ರದೇಶದ ದಟ್ಟ ಹಿನ್ನೆಲೆಯುಳ್ಳ ಅವರಲ್ಲಿ ಅದರ ಸೊಗಡಿನ ವ್ಯಕ್ತಿತ್ವ, ಭಾಷೆ ಮತ್ತು ತಮ್ಮ ಸುತ್ತ ಮುತ್ತಲಿನ ಪರಿಸರವನ್ನು ಸೂಕ್ಷ್ಮವಾಗಿ ಗಮನಿಸುವ ಪ್ರವೃತ್ತಿ ಗಟ್ಟಿಯಾಗಿ ಮೈಗೂಡಿದೆ.

. ಅವರ ಈ ಗ್ರಾಂಥಿಕ ಹಿನ್ನೆಲೆಯ ಹತ್ತೊಂಬತ್ತು ಪ್ರಸಂಗಗಳನ್ನೊಳಗೊಂಡ ಈ ಪುಸ್ತಕದ ಬರಹದಲ್ಲಿನ ತುಮಕೂರು ಗ್ರಾಮೀಣ ಪರಿಸರದ ಜನರ ವಿಶಿಷ್ಟ ವರ್ತನೆಗಳು, ಸ್ಥಳೀಯ ಸೊಗಡಿನ ಭಾಷಾ ಶೈಲಿ ಮತ್ತು ಲೇಖಕರ ವಿಶಾಲ ಹರವಿನ ಆಸಕ್ತಿಗಳಿಂದ ಒದಗಿದ ಅನುಭವಗಳ ಸೊಗಸಾದ ಮತ್ತು ಲಘುಹಾಸ್ಯ ಮಿಶ್ರಿತ ವರ್ಣನೆಗಳಿಂದ ಓದುಗರನ್ನು ಸಾಕಷ್ಟು ರಂಜಿಸುವುದಲ್ಲದೆ ಸಮಕಾಲೀನ ಬದುಕಿನ ವಿವಿಧ ಮಗ್ಗುಲುಗಳ ಬಗ್ಗೆ ಹಲವು ಸೂಕ್ಷ್ಮ ಹೊಳಹುಗಳನ್ನು ಕೊಡುವಂತಿದೆ. 'ಕರಡಿ ಬೇಟೆ'ಯಲ್ಲಿನ ಬೇಟೆಯ ಸಂದರ್ಭದಲ್ಲಿ ಹುಟ್ಟಿಕೊಳ್ಳುವ ವಿಶಿಷ್ಟ ವರ್ತನೆಗಳು, ಹಾಸ್ಯ ಪ್ರಸಂಗಗಳು, ಸ್ಥಳೀಯ ನುಡಿಗಟ್ಟುಗಳ ವಿನೋದಭರಿತ ಮಾತುಕತೆಗಳು ವಿಶೇಷ ರೋಮಾಂಚನವನ್ನ ಸೃಷ್ಟಿಸುತ್ತದೆ. 'ಪಕ್ಕದ ಮನೆಯ ಮುದ್ದಣ್ಣ ಮನೋರಮೆಯರು'ವಿನ ಒಂದು ತಳ ವರ್ಗ ಎನ್ನಬಹುದಾದ ದಂಪತಿಯರ ನಡುವೆ ಜಗಳದಿಂದ ಶುರುವಾಗಿ ಪ್ರಣಯದಲ್ಲಿ ಕೊನೆಗೊಳ್ಳುವ ದಾಂಪತ್ಯ ಸಂಬಂಧದಲ್ಲಿನ ವಿಶಿಷ್ಟ ಸೊಗಸಿನ ಆಯಾಮವನ್ನು ಕಟ್ಟಿಕೊಟ್ಟರೆ, ಸ್ಥಳೀಯವಾದ್ದೊಂದು ಕಸುಬು ಮಾಯವಾಗುತ್ತಿದ್ದ ಹಾಗೆ ಅದರ ಭಾಗವಾಗಿಯೇ ಬೆಳೆದುಬಂದ ದೇಸಿ ಜ್ಞಾನ, ಸಂಸ್ಕೃತಿ, ಕಥೆಗಳು, ಭಾಷಾಭಿವ್ಯಕ್ತಿ, ತಮಾಷೆಗಳು, ಪೋಲಿತನ ಎಲ್ಲವೂ ಮಾಯವಾಗಿ ಕೇವಲ ವ್ಯಾಪಾರಿಗಳ ದಾಸರಾಗುವ ದುರಂತವನ್ನು ಅತ್ಯಂತ ಹಾಸ್ಯದ ಹೊನಲಿನಲ್ಲಿ 'ಈಚಲು ಮರದ ಕಥೆ' ನಿರೂಪಿಸುತ್ತದೆ. ಆಧುನಿಕ ಶಿಕ್ಷಣ ರೂಪಿಸುತ್ತಿರುವ ಟೊಳ್ಳು ವ್ಯಕ್ತಿತ್ವಗಳನ್ನೂ ಮತ್ತು ಅದರ ವಿಪರ್ಯಾಸವನ್ನು ಹೇಳುವ 'ಪರಿಸರ ಸಂರಕ್ಷಕರು ಮಾಡಿದ ಕೊಲೆ', ಜಾಗತೀಕರಣದ ಪರಿಣಾಮ ಗ್ರಾಮೀಣ ಪರಿಸರವನ್ನೂ ತಟ್ಟಿ ಆಹಾರ ಪದ್ಧತಿಯಲ್ಲಿ ಆದ ಕ್ರಾಂತಿಕಾರಕ ಬದಲಾವಣೆ ಮತ್ತು ಜನರಲ್ಲಿ ಅದು ಮೂಡಿಸಿದ ರೋಮಾಂಚನದ ಪ್ರಸಂಗವನ್ನು ಅತ್ಯುತ್ತಮ ಹರಟೆಯ ಶೈಲಿಯಲ್ಲಿ ಹೇಳುವ 'ಪಲಾವೀಕರಣ', 'ಹುಲಿ ಬೇಟೆಯ ಜಾಡಿನಲ್ಲಿ' ಪ್ರವಾಸಿ ಕಥನದಲ್ಲಿನ ಅನ್ವೇಷಣಾತ್ಮಕ ಸಾಹಸಶೀಲ ಮನಸ್ಸು ಪಡುವ ರೋಮಾಂಚನ, ಗ್ರಾಮೀಣ ಕೃಷಿ ಮತ್ತು ಅದರ ಸಾಂಸ್ಕೃತಿಕ ಬದುಕಿನ ಸ್ಪರ್ಶ ಪಡೆದು ಸಂಪ್ರೀತಗೊಂಡು ಹೊಸ ನೋಟವನ್ನು ಪಡೆದುಕೊಳ್ಳುವ ನಗರೀಕೃತ ಮನಸ್ಸುಗಳ 'ನೆಟ್ಟಿ ಪ್ರವಾಸ'ದಂತಹ ಪ್ರಸಂಗಗಳ ನಿರೂಪಣೆ ಓದುಗರಿಗೆ ಹಲವು ವಿಶಿಷ್ಟ ಅನುಭವಗಳನ್ನು ನೀಡಿ ಗಮನ ಸೆಳೆಯುತ್ತದೆ. ಹಲವಾರು ವಿಶೇಷವಾದ ಕನ್ನಡ ಪದಗಳ ತಿಳುವಳಿಕೆ ಮತ್ತು ಅವುಗಳನ್ನು ಬಳಸುವ ವಿಶಿಷ್ಟ ಶೈಲಿಯ ಆಸ್ವಾದನೆಯನ್ನೂ ಒದಗಿಸುತ್ತದೆ. ಲೇಖಕರ ಸಮೃದ್ಧ ಭಾಷೆ ಮತ್ತು ನಿರೂಪಣಾ ವೈಶಿಷ್ಟ್ಯತೆ ಪುಸ್ತಕದಲ್ಲಿ ಶಕ್ತಿಶಾಲಿಯಾಗಿ ಮೂಡಿಬಂದಿದೆ.

ಇನ್ನು ತಮ್ಮ ನಿರೂಪಣೆಯನ್ನು ಆಕರ್ಷಕಗೊಳಿಸುವ, ಓದುಗರನ್ನು ಸೆಳೆಯುವ ಪ್ರಯತ್ನವಾಗಿಯೋ ಎಂಬಂತೆ ರೋಚಕತೆಯನ್ನೂ, ದಂಡಿಯಾಗಿ ಇಂಗ್ಲಿಷ್ ಪದಗಳನ್ನು, ಅದೂ ಒಂದು ಹಾಸ್ಯಮಯ ಶೈಲಿಗಾಗಿ, ಯಥೇಚ್ಛವಾಗಿ ಬಳಸುವುದು ತಮ್ಮ ಬರವಣಿಗೆಯ ಹದ ತಪ್ಪಿಸುತ್ತದೆ ಎಂಬುದು ಲೇಖಕರಿಗೆ ಗೊತ್ತಿದ್ದಂತಿಲ್ಲ. ಇನ್ನು 'ಅಲ್ಮೇರ ರಿಪೇರಿ' , 'ಹೊಗೇನಕಲ್-ಇನ್ನೊಂದು ಮುಖ', 'ಕೊರೆವ ಚಳಿ-ಉರಿವ ಬಿಸಿಲಿನ ಮಾಗಿಯ ಕಾಲ' ಇತ್ಯಾದಿ ಪ್ರಬಂಧಗಳು ಭಾಷಾ ವರ್ಣನೆಯಲ್ಲಿ ಸುಂದರವಾಗಿದ್ದರೂ ತಮ್ಮ ಬರವಣಿಗೆಯ ಆರಂಭಿಕ ಹಂತದಲ್ಲಿ ಬರೆದಂತಿದ್ದು ಇವು ಈ ಸಂಗ್ರಹದಲ್ಲಿ ಇರುವ ಅಗತ್ಯವಿರಲಿಲ್ಲ ಎನಿಸದಿರದು.

**-ಬಿ.ವಿ. ಸುರೇಂದ್ರ.**

**'ಹೊಸ ಮನುಷ್ಯ'ದ ಓದುಗರೆಲ್ಲರಿಗೂ**
**ಹಾರ್ದಿಕ ಶುಭಾಶಯಗಳು**



**ನಂ ೯೮೦ (ರಿ)**

'ಅಂಬರ' ನಂ. 159

1ನೇ ತಿರುವು, 3ನೇ ಮುಖ್ಯ ರಸ್ತೆ

ಲಾಲ್‌ಬಹದ್ದೂರ್‌ಶಾಸ್ತ್ರಿ ನಗರ, **ಶಿವಮೊಗ್ಗ**

ಸಂಪರ್ಕ: ೯೮೪೪೫೧೮೮೬೬



**'ಹೊಸ ಮನುಷ್ಯ'ದ ಓದುಗರೆಲ್ಲರಿಗೂ**
**ಹಾರ್ದಿಕ ಶುಭಾಶಯಗಳು**



**ವಿಜಯಾನಂದ್ ಡಯಾಜಟಿಕ್ ಸೆಂಟರ್**

೮೩೩, ವಿನಯ ಮಾರ್ಗ,

ಸಂಗೀತ ಕಾರ್ನರ್ ಎದುರು

ಸಿದ್ಧಾರ್ಥ ನಗರ, ಮೈಸೂರು-೫೭೦೦೧೧

ದೂ : ೦೮೨೧-೨೪೭೯೩೩/೪೨೪೭೮೩೩

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**ನ್ಯಾ. ಎ.ಜೆ. ಸದಾಶಿವ (ನಿ)**
ಮತ್ತು **ಕುಟುಂಬ**
**ಬೆಂಗಳೂರು**

## ತಿಂಗಳ ಸಾಲುಗಳು...



ಕುಗ್ಗಿಸಲು ಅದನು ಮೊದಲು ಹಿಗ್ಗಿಸಬೇಕು
ಮಣಿಸಲದನು ಚೆನ್ನಾಗಿ ಬೆಳಸಲುಬೇಕು
ಕೆಳಗಿರಿಸಬೇಕಾದರೆ ಮೇಲೇರಿಸಿರಬೇಕು
ಪಡೆಯುವ ಮುನ್ನ ಕೊಟ್ಟಿರಬೇಕು

–ತಾವೋ ಗುರು ಲಾವೋತ್ಸೆ

*ಶುಭಾಶಯಗಳೊಂದಿಗೆ,*

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**
**ಲೆಕ್ಕ ಪರಿಶೋಧಕರು, ಮೈಸೂರು**
ಮೊಬೈಲ್ : ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568
Rgd No. KA/SK/SMG-1209/2019-21

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204 ( Karnataka)